**ಕರ್ನಾಟಕ ಬಾಡಿಗೆ ಅಧಿನಿಯಮ, 1999**

ಪ್ರಕರಣಗಳ ಕ್ರಮ ಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ:

ಪ್ರಕರಣಗಳು :

**ಅಧ್ಯಾಯ - I**
**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅಧಿನಿಯಮದ ಅನ್ವಯ
3. ಪರಿಭಾಷೆಗಳು

**ಅಧ್ಯಾಯ - II**
**ಬಾಡಿಗೆ ನಿಯಂತ್ರಣ**

4. ಬಾಡಿಗೆ ಒಪ್ಪಂದವು ಲಿಖಿತದಲ್ಲಿ ಇರುವುದು
5. ಬಾಡಿಗೆದಾರಿಕೆಯ ಉತ್ತರಾಧಿಕಾರ
6. ಸಂದಾಯ ಮಾಡತಕ್ಕ ಬಾಡಿಗೆ
7. ನಿಗದಿತ ಬಾಡಿಗೆ
8. ಸಂದಾಯ ಮಾಡತಕ್ಕ ಇತರ ವೆಚ್ಚಗಳು
9. ಕೆಲವು ಸಂದರ್ಭಗಳಲ್ಲಿ ಬಾಡಿಗೆಯ ಪರಿಷ್ಕರಣೆ
10. ಬಾಡಿಗೆ ಪರಿಷ್ಕರಣೆಯ ನೋಟೀಸು
11. ಕಾನೂನು ಬದ್ಧವಲ್ಲದ ಚಾರ್ಜುಗಳನ್ನು ಕ್ಲೇಮು ಮಾಡಬಾರದು
12. ನಿಯಂತ್ರಣಾಧಿಕಾರಿಯು ನಿಗದಿತ ಬಾಡಿಗೆಯನ್ನು ನಿಗದಿಪಡಿಸುವುದು, ಇತ್ಯಾದಿ
13. ಮಧ್ಯಕಾಲೀನ ಬಾಡಿಗೆಯನ್ನು ಗೊತ್ತುಪಡಿಸುವುದು
14. ನಿಗದಿತ ಬಾಡಿಗೆಯನ್ನು ಗೊತ್ತುಪಡಿಸಲು ಕೋರುವ ಅರ್ಜಿಗೆ ಕಾಲಪರಿಮಿತಿ
15. ಬಾಡಿಗೆ, ಪ್ರೀಮಿಯಂ ಇತ್ಯಾದಿಗಳ ಮರುಪಾವತಿ
16. ಸಂದಾಯ ಮಾಡಲಾದ ಬಾಡಿಗೆ ಮತ್ತು ಇತರ ವೆಚ್ಚಗಳ ಬಗ್ಗೆ ಕೊಡಬೇಕಾಗಿರುವ ರಸೀತಿ

**ಅಧ್ಯಾಯ - III**
**ಬಾಡಿಗೆಯನ್ನು ಠೇವಣಿ ಇಡುವುದು**

17. ಬಾಡಿಗೆದಾರನು ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಠೇವಣಿ ಇಡುವುದು
18. ಠೇವಣಿ ಇಡಲು ಕಾಲಮಿತಿ ಮತ್ತು ಠೇವಣಿ ಅರ್ಜಿಯಲ್ಲಿ ತಪ್ಪು ವಿವರಗಳನ್ನು ಒದಗಿಸುವುದರ ಪರಿಣಾಮಗಳು
19. ಠೇವಣಿಯಲ್ಲಿರುವ ಬಾಡಿಗೆಯನ್ನು ಮತ್ತು ಇತರ ವೆಚ್ಚಗಳನ್ನು ಅಂಗೀಕರಿಸುವುದು ಮತ್ತು ಬಾಡಿಗೆಯ ಮುಟ್ಟುಗೋಲು ಇವುಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆಗಳು

## ಅಧ್ಯಾಯ - IV

## ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟರುಗಳ ನೋಂದಣಿ


20. ಮಧ್ಯವರ್ತಿ ಅಥವಾ ಎಸ್ಟೇಟ್ ಏಜಂಟರುಗಳ ನೋಂದಣಿ

21. ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟರುಗಳು ಮಾಹಿತಿ ಮತ್ತು ವಿವರಪಟ್ಟಿಯನ್ನು ಸಲ್ಲಿಸುವುದು

22. ಮಧ್ಯವರ್ತಿಯ ಹೊಣೆಗಾರಿಕೆಯ ಪರಿಮಿತಿ


## ಅಧ್ಯಾಯ - V

## ನಿಯಂತ್ರಣಾಧಿಕಾರಿಗಳು, ಅವರ ಅಧಿಕಾರಗಳು ಮತ್ತು ಕಾರ್ಯವಿಧಾನ


23. ನಿಯಂತ್ರಣಾಧಿಕಾರಿಗಳ ನೇಮಕ

24. ನಿಯಂತ್ರಣಾಧಿಕಾರಿಯ ಅಧಿಕಾರಗಳು

25. ಪ್ರಕರಣಗಳನ್ನು ತೀರ್ಮಾನ ಮಾಡಲು ಸಾಮಾನ್ಯವಾಗಿ ನಿಯಂತ್ರಣಾಧಿಕಾರಿಯು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಕಾಲಮಿತಿ

26. ಅಪೀಲು


## ಅಧ್ಯಾಯ - VI

## ಬಾಡಿಗೆದಾರರನ್ನು ಹೊರ ಹಾಕುವುದನ್ನು ನಿಯಂತ್ರಿಸುವುದು


27. ಬಾಡಿಗೆದಾರರನ್ನು ಹೊರಹಾಕುವುದರ ವಿರುದ್ಧ ರಕ್ಷಣೆ

28. ಆವರಣದ ತಕ್ಷಣದ ಸ್ವಾಧೀನತೆಯನ್ನು ಪಡೆಯುವ ಹಕ್ಕು ಕೆಲವು ವ್ಯಕ್ತಿಗಳಿಗೆ ಪ್ರಾಪ್ತವಾಗುವುದು

29. ಸಶಸ್ತ್ರ ಪಡೆಗಳು, ಇತ್ಯಾದಿಗಳ ಸದಸ್ಯರಿಗೆ ಆವರಣದ ತಕ್ಷಣದ ಸ್ವಾಧೀನತೆಯನ್ನು ಪುನಃ ಪಡೆಯುವ ಹಕ್ಕು ಪ್ರಾಪ್ತವಾಗುವುದು

30. ರಾಜ್ಯ ಅಥವಾ ಕೇಂದ್ರ ಸರ್ಕಾರದ ನೌಕರರಿಗೆ ಆವರಣದ ತಕ್ಷಣದ ಸ್ವಾಧೀನತೆಯನ್ನು ಪಡೆಯುವ ಹಕ್ಕು ಪ್ರಾಪ್ತವಾಗುವುದು

31. ವಿಧವೆ ಮುಂತಾದವರಿಗೆ ಆವರಣದ ತಕ್ಷಣದ ಸ್ವಾಧೀನತೆಯನ್ನು ಪುನಃ ಪಡೆಯುವ ಹಕ್ಕು ಪ್ರಾಪ್ತವಾಗುವುದು

32. ಒಳಬಾಡಿಗೆಗೆ ನೀಡುವುದಕ್ಕೆ ನಿರ್ಬಂಧಗಳು

33. ಒಳಬಾಡಿಗೆದಾರಿಕೆಯ ಸೃಜನೆ ಮತ್ತು ಸಮಾಪನೆಯ ಬಗ್ಗೆ ನೋಟಿಸು

34. ಒಳಬಾಡಿಗೆದಾರನು ನಿರ್ದಿಷ್ಟ ಸಂದರ್ಭಗಳಲ್ಲಿ ಬಾಡಿಗೆದಾರನಾಗಿರುವುದು

35. ಅಧಿಭೋಗಕ್ಕಾಗಿ ಸ್ವಾಧೀನತೆಯನ್ನು ಪುನಃ ಪಡೆಯುವುದು ಮತ್ತು ಮರುಪ್ರವೇಶ

36. ದುರಸ್ತಿ ಮತ್ತು ಪುನರ್ ನಿರ್ಮಾಣ ಮತ್ತು ಮರು ಪ್ರವೇಶಕ್ಕಾಗಿ ಸ್ವಾಧೀನತೆಯನ್ನು ಪುನಃ ಪಡೆಯುವುದು

37. ಪರಿಮಿತ ಕಾಲಾವಧಿಯ ಬಾಡಿಗೆದಾರಿಕೆಗಳ ಸಂದರ್ಭದಲ್ಲಿ ಸ್ವಾಧೀನತೆಯನ್ನು ಪಡೆಯುವುದು

38. ನಿರ್ದಿಷ್ಟ ಸಂದರ್ಭಗಳಲ್ಲಿ ಸ್ವಾಧೀನತೆಯನ್ನು ಪಡೆಯಲು ವಿಶೇಷ ಉಪಬಂಧ

39. ಕಟ್ಟಡ ರಚನೆಯಲ್ಲಿನ ಹೆಚ್ಚಿನ ನಿರ್ಮಾಣಕ್ಕೆ ಅನುಮತಿ

40. ಖಾಲಿ ಕಟ್ಟಡ ನಿವೇಶನಗಳ ಬಗ್ಗೆ ವಿಶೇಷ ಉಪಬಂಧ

41. ಮಾಲೀಕನಿಗೆ ಖಾಲಿ ಭೂಮಿಯ ಸ್ವಾಧೀನತೆ

42. ನ್ಯಾಯಾಲಯವು ಅನುಸರಿಸಬೇಕಾದ ಕಾರ್ಯವಿಧಾನ

43. ಮಾಲೀಕ ಹಾಗೂ ಬಾಡಿಗೆದಾರ ಸಂಬಂಧದ ವಿವಾದಗಳು

44. ವಿವಾದಗಳನ್ನು ರಾಜಿಯ ಮೂಲಕ ಇತ್ಯರ್ಥಗೊಳಿಸುವುದಕ್ಕೆ ನ್ಯಾಯಾಲಯದ ಉತ್ತೇಜನ

45. ಹೊರಹಾಕುವುದಕ್ಕೆ ಸಂಬಂಧಪಟ್ಟಂತೆ ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ ಬಾಡಿಗೆಯ ಠೇವಣಿ ಮತ್ತು ಸಂದಾಯ

46. ಪುನರೀಕ್ಷಣೆ

**ಅಧ್ಯಾಯ – VII**

**ಮಾಲೀಕನು ಮತ್ತು ಬಾಡಿಗೆದಾರರ ವಿಶೇಷ ಬಾಧ್ಯತೆಗಳು**

47. ಆವರಣಗಳನ್ನು ಉತ್ತಮ ದುರಸ್ತಿ ಸ್ಥಿತಿಯಲ್ಲಿಡುವುದು ಮಾಲೀಕನ ಕರ್ತವ್ಯವಾಗಿರತಕ್ಕದ್ದು

48. ಬಾಡಿಗೆದಾರನ ಕರ್ತವ್ಯಗಳು

49. ಅತ್ಯಾವಶ್ಯಕ ಸರಬರಾಜುಗಳನ್ನು ಅಥವಾ ಸೇವೆಗಳನ್ನು ನಿಲ್ಲಿಸಿಬಿಡುವುದು ಅಥವಾ ತಡೆಹಿಡಿಯುವುದು

**ಅಧ್ಯಾಯ – VIII**

**ಸಂಕೀರ್ಣ ವಿಷಯಗಳು**

50. ನಿರ್ದಿಷ್ಟ ವಿಷಯಗಳ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ನಿಷೇಧ

51. ಕಾನೂನುಸಮ್ಮತ ಪ್ರತಿನಿಧಿಗಳಿಂದ ಅಥವಾ ಅವರ ವಿರುದ್ಧ ವ್ಯವಹರಣೆಗಳು

52. ಮಾಲೀಕ ಮತ್ತು ಬಾಡಿಗೆದಾರನು ವಿವರಗಳನ್ನು ಒದಗಿಸುವುದು

53. XXX

54. ಅಪರಾಧಗಳು ಮತ್ತು ದಂಡನೆಗಳು

55. ಕಂಪನಿಗಳಿಂದ ಅಪರಾಧಗಳು ಇತ್ಯಾದಿ

56. ನಿಯಂತ್ರಣಾಧಿಕಾರಿಗಳು ಲೋಕ ನೌಕರರಾಗಿರತಕ್ಕದ್ದು

57. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

58. ಭೂ ಕಂದಾಯದ ಬಾಕಿಯಂತೆ ನಿಯಂತ್ರಣಾಧಿಕಾರಿಯು ದಂಡವನ್ನು ವಸೂಲಿ ಮಾಡುವುದು

59. ಅಪೀಲುಗಳಲ್ಲಿನ ಪ್ರಕ್ರಿಯೆ

60. ನಿಯಂತ್ರಣಾಧಿಕಾರಿಯ ಮುಂದಿರುವ ಎಲ್ಲಾ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರತಕ್ಕದ್ದು

61. ಅಂತಿಮಗೊಂಡ ತೀರ್ಮಾನಗಳನ್ನು ಪುನಃ ಆರಂಭಿಸಕೂಡದು

62. ಬಹಿರಂಗ ನ್ಯಾಯಾಲಯದಲ್ಲಿ ಆದೇಶಗಳನ್ನು ಘೋಷಿಸುವುದು

63. ಆದೇಶದ ಅಂತಿಮತೆ

64. ಆದೇಶಗಳ ತಿದ್ದುಪಡಿ

65. ವೆಚ್ಚಗಳು

66. ನಿಯಮಗಳ ರಚನಾಧಿಕಾರ

67. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು

68. ತೊಂದರೆಗಳ ನಿವಾರಣೆ

69. ಇತ್ಯರ್ಥದಲ್ಲಿರುವ ಮೊಕದ್ದಮೆಗಳ ವರ್ಗಾವಣೆ

70. ನಿರಸನ ಮತ್ತು ಉಳಿಸುವಿಕೆ

ಮೊದಲನೇ ಅನುಸೂಚಿ

ಎರಡನೇ ಅನುಸೂಚಿ

ಮೂರನೇ ಅನುಸೂಚಿ

ಕೋಷ್ಟಕ - I

ಕೋಷ್ಟಕ - II

ನಾಲ್ಕನೇ ಅನುಸೂಚಿ

ಐದನೇ ಅನುಸೂಚಿ

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಆರ್ಥಿಕ ಆಡಳಿತ ಸುಧಾರಣಾ ಆಯೋಗ ಮತ್ತು ನಗರೀಕರಣದ ರಾಷ್ಟ್ರೀಯ ಆಯೋಗ, ಇವು ಮನೆ ಮಾಲೀಕ ಹಾಗೂ ಬಾಡಿಗೆದಾರರ ಹಿತಾಸಕ್ತಿಯ ನಡುವೆ ಸಮತೋಲನ ಇರುವಂಥ ಹಾಗೂ ಮುಂಬರುವ ದಿನಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ಉತ್ತೇಜಿಸುವಂಥ ರೀತಿಯಲ್ಲಿ ಬಾಡಿಗೆ ಶಾಸನದಲ್ಲಿ ಸುಧಾರಣೆ ತರುವಂತೆ ಶಿಫಾರಸು ಮಾಡಿವೆ. ಭಾರತ ಸರ್ಕಾರವು ಮಾದರಿ ಬಾಡಿಗೆ ನಿಯಂತ್ರಣ ಕಾನೂನೊಂದನ್ನು ರೂಪಿಸಿದ್ದು, ಈಗ ಇರುವ ಬಾಡಿಗೆ ನಿಯಂತ್ರಣ ಕಾನೂನುಗಳಿಗೆ ತಿದ್ದುಪಡಿಗಳನ್ನು ಮಾಡಲು ಅಥವಾ ಈ ಮಾದರಿ ಕಾನೂನಿನ ಆಧಾರದ ಮೇಲೆ ಹೊಸ ಕಾನೂನುಗಳನ್ನು ಅಧಿನಿಯಮಿಸಲು ಶಿಫಾರಸು ಮಾಡಿದೆ.

ಮಾದರಿ ಬಾಡಿಗೆ ನಿಯಂತ್ರಣ ಕಾನೂನಿನ ಕೆಲವು ಉಪಬಂಧಗಳನ್ನು ಮತ್ತು ರಾಜ್ಯದಲ್ಲಿ ಈಗಿರುವ ಬಾಡಿಗೆ ನಿಯಂತ್ರಣ ಕಾನೂನಿನ ಕೆಲವು ಉಪಬಂಧಗಳನ್ನು ಅಳವಡಿಸಿಕೊಂಡು ನಮ್ಮ ರಾಜ್ಯಕ್ಕೆ ಸೂಕ್ತವಾಗುವಂತೆ ಆಧುನಿಕ ಅರ್ಥ ವ್ಯವಸ್ಥೆಗೆ ಅನುಗುಣವಾದ ಬಾಡಿಗೆಯನ್ನು ಮತ್ತು ಹೊರಹಾಕುವುದನ್ನು ನಿಯಂತ್ರಿಸಲು ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಮತ್ತು ಯುಕ್ತವೆಂದು ಪರಿಗಣಿಸಲಾಗಿದೆ. ಆದ್ದರಿಂದ 31-12-1999ಕ್ಕೆ ಅವಧಿಯು ಮುಕ್ತಾಯವಾಗುವ, ಈಗ ಇರುವ 1961ರ ಬಾಡಿಗೆ ನಿಯಂತ್ರಣ ಅಧಿನಿಯಮದ ಬದಲು ಹೊಸ ಶಾಸನವೊಂದನ್ನು ಅಧಿನಿಯಮಿಸಲು ಪ್ರಸ್ತಾವಿಸಲಾಗಿದೆ.

ಪ್ರಸ್ತಾವಿತ ಕ್ರಮದ ಕೆಲವು ಮುಖ್ಯಾಂಶಗಳು ಈ ಮುಂದಿನಂತಿವೆ:-

(1) ಈಗ ಇದರ ಅನ್ವಯಿಸುವಿಕೆಯು, ಈ ಮುಂದಿನ ಆವರಣಗಳಿಗೆ, ಎಂದರೆ,-

(i) ಕರ್ನಾಟಕ ಪೌರ ನಿಗಮ ಅಧಿನಿಯಮ, 1976ರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ನಿಗದಿತ ಬಾಡಿಗೆಯು ಪ್ರತಿ ತಿಂಗಳಿಗೆ ೩೫೦೦-೦೦ ರೂ.ಗಳನ್ನು ಮೀರುವ ಮತ್ತು ಇತರ ಪ್ರದೇಶದಲ್ಲಿ ಪ್ರತಿ ತಿಂಗಳಿಗೆ ೨೦೦೦-೦೦ ರೂ.ಗಳನ್ನು ಮೀರುವ ನಿವಾಸದ ಕಟ್ಟಡದ ಸಂದರ್ಭದಲ್ಲಿ ಮತ್ತು 14 ಚದರ ಮೀಟರ್‌ಗಳಿಗೆ ಮೀರದ ಮೇಲುಪಾಯ ಪ್ರದೇಶವಿರುವ ವಾಣಿಜ್ಯ ಕಟ್ಟಡಗಳ ಸಂದರ್ಭದಲ್ಲಿ,

(ii) ಹದಿನೈದು ವರ್ಷಗಳಿಗಿಂತ ಹೆಚ್ಚು ಹಳೆಯದಾದವುಗಳಿಗೆ,

- ಸೀಮಿತವಾಗಿದೆ.

(೨) ಬಾಡಿಗೆಯ ಲಿಖಿತ ಒಪ್ಪಂದವು ಲಿಖಿತದಲ್ಲಿರಬೇಕಾಗುತ್ತದೆ ಮತ್ತು ಅದನ್ನು ನೋಂದಾಯಿಸಬೇಕಾಗುತ್ತದೆ.

(೩) ಬಾಡಿಗೆದಾರಿಕೆಯು ಸೀಮಿತ ವ್ಯಾಪ್ತಿಯವರೆಗೆ ಅನುವಂಶಿಕವಾಗಿರುವಂತೆ ಮಾಡಲಾಗಿದೆ.

(4)(ಎ) ಸ್ವತ್ತಿನ ಮೇಲೆ ಹೂಡಲಾದ ಹಣಕ್ಕೆ ಸಂಬಂಧಪಟ್ಟಂತೆ ನಿಗದಿತ ಬಾಡಿಗೆ ಸಂಗ್ರಹಿಸುವುದಕ್ಕಾಗಿ ಮತ್ತು ಬಾಡಿಗೆಯನ್ನು ಏರಿಸುವುದಕ್ಕಾಗಿ ಮತ್ತು ಬಾಡಿಗೆಯನ್ನು ಏರಿಸುವುದಕ್ಕಾಗಿ ಮತ್ತು ಬಾಡಿಗೆ ನಿಯಂತ್ರಣಾಧಿಕಾರಿಗಳು ಬಾಡಿಗೆಯನ್ನು ನಿರ್ಧರಿಸುವುದಕ್ಕಾಗಿ,

(ಬಿ) ಮಧ್ಯವರ್ತಿ ಮತ್ತು ಎಸ್ಟೇಟ್ ಏಜೆಂಟರ ನೋಂದಣಿಗಾಗಿ

(ಸಿ) ಹೊರಹಾಕುವ ಸಂಬಂಧದಲ್ಲಿಯ ಅರ್ಜಿಗಳನ್ನು ಕೇವಲ ಪುನರೀಕ್ಷಣೆಯ ಹಕ್ಕನ್ನು ಹೊಂದಿರತಕ್ಕ ಆದರೆ ಅಪೀಲಿಗೆ ಅವಕಾಶವಿಲ್ಲದ, ಬಾಡಿಗೆಗೆ ಸಂಬಂಧಿಸಿದ ನ್ಯಾಯಾಲಯಗಳು ವಿಲೇ ಮಾಡುವುದಕ್ಕಾಗಿ,

(ಡಿ) ನಿರ್ದಿಷ್ಟ ಸನ್ನಿವೇಶಗಳಲ್ಲಿ, ರಾಜ್ಯ ಅಥವಾ ಕೇಂದ್ರ ಸರ್ಕಾರದ ನೌಕರರ ಅಥವಾ ಸಶಸ್ತ್ರ ದಳಗಳ ಸದಸ್ಯರ, ವಿಧವೆಯರ, ಅಂಗವಿಕಲರ ಮತ್ತು ೬೫ ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ವ್ಯಕ್ತಿಗಳ ಬಾಡಿಗೆದಾರರನ್ನು ಕೂಡಲೇ ಹೊರಹಾಕುವುದಕ್ಕಾಗಿ,

(ಇ) ಶೀಘ್ರ ವಿಲೇಗಾಗಿ ಮತ್ತು ಇತ್ಯರ್ಥ ಮಾಡಿಕೊಳ್ಳಲು ಸಾಧ್ಯವಾಗುವಂತೆ ನಿಯಂತ್ರಣಾಧಿಕಾರಿಗಳ ಮತ್ತು ನ್ಯಾಯಾಲಯಗಳ ಮುಂದಿರುವ ಪ್ರಕರಣಗಳ ವಿಚಾರಣೆಗಾಗಿ ವಿಶೇಷ ಕಾರ್ಯವಿಧಾನವನ್ನು ರೂಪಿಸುವುದಕ್ಕಾಗಿ,

(ಎಫ್) ಮನೆ ಮಾಲೀಕರು ಮತ್ತು ಬಾಡಿಗೆದಾರರು ಮುಂತಾದವರ ಮೇಲೆ ಕೆಲವು ವಿಶೇಷ ಹೊಣೆಗಾರಿಕೆಗಳನ್ನು ವಿಧಿಸುವುದಕ್ಕಾಗಿ, ಉಪಬಂಧ ಕಲ್ಪಿಸಲಾಗಿದೆ.

ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(1999ರ ವಿಧಾನ ಪರಿಷತ್ ವಿಧೇಯಕ ಸಂಖ್ಯೆ. 14 - ಕಡತ ಸಂಖ್ಯೆ ಲಾ 45 ಎಲ್‌ಜಿಎನ್ 1993)

**I**

**2007ರ ತಿದ್ದುಪಡಿ ಅಧಿನಿಯಮ 17.-** ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 9 ಬಿಎಂಎಂ 2003, ದಿನಾಂಕ: 8.9.2005ರಲ್ಲಿ ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂಗಳಲ್ಲಿ ಪ್ರಾದೇಶಿಕ ಕಮೀಷನರುಗಳ ಹುದ್ದೆಗಳನ್ನು ಹಾಗೂ ಅವರಿಗೆ ಸಹಾಯಕ ಸಿಬ್ಬಂದಿಯ ಹುದ್ದೆಗಳನ್ನು ಸೃಜನೆ ಮಾಡಲಾಗಿದೆ.

ಸಂಬಂಧಪಟ್ಟ ಅಧಿನಿಯಮಗಳಿಗೆ ಅವಶ್ಯಕ ತಿದ್ದುಪಡಿಗಳನ್ನು ಮಾಡಿ ಪ್ರಾದೇಶಿಕ ಕಮೀಷನರುಗಳಿಗೆ, ಶಾಸನಬದ್ಧ ಅಧಿಕಾರಗಳನ್ನು ಕೊಡಬೇಕಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲವು ಅಧಿವೇಶನದಲ್ಲಿಲ್ಲದೇ ಇದ್ದುದರಿಂದ ಕರ್ನಾಟಕ ಭೂ-ಕಂದಾಯ ಮತ್ತು ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2006 (2006ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5)ನ್ನು ಮೇಲಿನ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 7)

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 18ನೆಯ ನಮೂದನೆಗಳ ಅಡಿಯಲ್ಲಿ ಬರುತ್ತದೆ.]

**II**

**2011ರ ಅಧಿನಿಯಮ ಸಂಖ್ಯೆ 28.-** ಬಿಎಲ್‌ಆರ್ 2005 ಕರ್ನಾಟಕ 1721 ರಲ್ಲಿ ವರದಿಯಾದ ಬಿ.ಪಿ. ಅಚಲಾ ಆನಂದ್-ವಿರುದ್ಧ-ಎಸ್. ಅಪ್ಪಿ ರೆಡ್ಡಿ ಮತ್ತು ಇನ್ನೊಬ್ಬರು, ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು, ತನ್ನ ಗಂಡನು ಸಂಸಾರ ಹೂಡಿದ ಮನೆ ಅಥವಾ ಬಾಡಿಗೆದಾರನಾಗಿದ್ದ ಆವರಣದಲ್ಲಿ ವಾಸವಾಗಿದ್ದ ಅಥವಾ ವಾಸವಾಗಿರಲು ಹಕ್ಕುಳ್ಳ ಬಾಡಿಗೆದಾರನ ಪರಿತ್ಯಕ್ತ ಪತ್ನಿಗೆ ಮತ್ತು ಸಂಸಾರ ಹೂಡಿದ್ದ ಮನೆ ಅಥವಾ ಬಾಡಿಗೆ ಇದ್ದ ಆವರಣದಲ್ಲಿ ವಾಸ ಮಾಡಲು ಆಕೆಗೆ ಹಕ್ಕಿರತಕ್ಕದ್ದು ಎಂಬುದನ್ನು ಒಂದು ಷರತ್ತಾಗಿ ಸೇರಿಸಿರುವಂತಹ ಒಂದು ವಿಚ್ಛೇದನದ ಡಿಕ್ರಿಯನ್ನು ಹೊಂದಿರುವ ಬಾಡಿಗೆದಾರನ ವಿಚ್ಛೇದಿತ ಪತ್ನಿಗೆ ಬಾಡಿಗೆದಾರಿಗೆ ಹಕ್ಕನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ಬಾಡಿಗೆ ಅಧಿನಿಯಮ, 1999ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2008ರ ವಿಧಾನಸಭೆಯ ವಿಧೇಯಕ ಸಂಖ್ಯೆ:8, ಕಡತ ಸಂಖ್ಯೆ:ಸಂವ್ಯಶಾಇ 10 ಶಾಸನ 2007)
(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 6ನೇ ನಮೂದನೆಯಡಿಯಲ್ಲಿ ಬರುತ್ತದೆ.)

III

**2026ರ ತಿದ್ದುಪಡಿ ಅಧಿನಿಯಮ ಸಂಖ್ಯೆ:07** ಜನ ವಿಶ್ವಾಸ್ (ಉಪಬಂಧಗಳ ತಿದ್ದುಪಡಿ) ಅಧಿನಿಯಮ, 2023 (2023ರ ಕೇಂದ್ರ ಅಧಿನಿಯಮ18)ರಲ್ಲಿ ವಿವರಿಸಿರುವಂತೆ ಲಘು ಅಪರಾಧಗಳ ನಿರಪರಾಧೀಕರಣಗೊಳಸುವ ಮತ್ತು ಹಣಕಾಸಿನ ದಂಡಗಳ

ತರ್ಕಬದ್ಧಗೊಳಿಸುವ ಮೂಲಕ "ಕನಿಷ್ಠ ಸರ್ಕಾರ ಗರಿಷ್ಠ ಆಡಳಿತ" ತತ್ವವನ್ನು ಸಾಧಿಸಲು, ಕರ್ನಾಟಕ ಬಾಡಿಗೆ ಅಧಿನಿಯಮ, 1999 (2001ರ ಕರ್ನಾಟಕ ಅಧಿನಿಯಮ 34)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

ಆದ್ದರಿಂದ ಈ ವಿಧೇಯಕ.

[2025ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 67, ಕಡತ ಸಂಖ್ಯೆ:ಸಂವ್ಯಶಾಇ 44 ಶಾಸನ 2025]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 18ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:21,
ದಿನಾಂಕ:08.01.2026ರಲ್ಲಿ ಪ್ರಕಟಗೊಂಡಿದೆ]

***

**2001 ರ ಕರ್ನಾಟಕ ಅಧಿನಿಯಮ ಸಂಖ್ಯೆ 34**

(2001 ರ ನವೆಂಬರ್ ಇಪ್ಪತ್ತೇಳನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಬಾಡಿಗೆ ಅಧಿನಿಯಮ, 1999

(2001 ರ ನವೆಂಬರ್ ಇಪ್ಪತ್ತೆರಡನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)

(2007ನೇ ಅಧಿನಿಯಮ ಸಂಖ್ಯೆ 17, 2011ರ 28 ಮತ್ತು 2026ರ 07ರ ಮೂಲಕ ತಿದ್ದುಪಡಿಯಾದಂತೆ)

ಕರ್ನಾಟಕ ರಾಜ್ಯದ ಕೆಲವು ಪ್ರದೇಶಗಳಲ್ಲಿನ ಕಟ್ಟಡಗಳ ಬಾಡಿಗೆಯನ್ನು ಮತ್ತು ಬಾಡಿಗೆದಾರರನ್ನು ಹೊರ ಹಾಕುವುದನ್ನು ನಿಯಂತ್ರಿಸುವುದಕ್ಕೆ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಭಾರತ ಗಣರಾಜ್ಯದ ಐವತ್ತನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

## ಅಧ್ಯಾಯ - 1

## ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಬಾಡಿಗೆ ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸತಕ್ಕದ್ದು.

(3) ಇದು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ 1[ದಿನಾಂಕದಂದು]1 ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಅಥವಾ ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಅಧಿನಿಯಮದ 1, 3 ಮತ್ತು 66ನೇ ಪ್ರಕರಣಗಳ ದಿನಾಂಕ: 05.12.2001ರಿಂದ ಹಾಗೂ ಉಳಿದ ಪ್ರಕರಣಗಳು ದಿನಾಂಕ: 31.12.2001ರಿಂದ ಅಧಿಸೂಚನೆ ಮೂಲಕ ಜಾರಿಗೊಂಡಿವೆ.

**2. ಅಧಿನಿಯಮದ ಅನ್ವಯ.**- (1) ಈ ಅಧಿನಿಯಮದ ಅಧ್ಯಾಯ I ರಿಂದ III ಮತ್ತು ಅಧ್ಯಾಯ V ರಿಂದ VIII ಇವು ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರದೇಶಗಳಿಗೆ ಮಾತ್ರ ಅನ್ವಯವಾಗತಕ್ಕದ್ದು.

(2) ಅಧ್ಯಾಯ I ಮತ್ತು IV ಇವು ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದು.

(3) ಈ ಅಧಿನಿಯಮದಲ್ಲಿರುವ ಯಾವುದೂ,-

(i) ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಒಂದು ಸ್ಥಳೀಯ ಪ್ರಾಧಿಕಾರಕ್ಕೆ;

(ii) ಒಂದು ಮುಜರಾಯಿ ಸಂಸ್ಥೆ ಅಥವಾ ಧಾರ್ಮಿಕ ಅಥವಾ ಧರ್ಮಾದಾಯ ಸಂಸ್ಥೆಗೆ;

(iii) ಒಂದು ವಕ್ಫ್‌ಗೆ

ಸೇರಿದ ಆ ಯಾವುದೇ ಆವರಣಕ್ಕೆ;

**ವಿವರಣೆ** :- ಮೇಲೆ (ii) ಮತ್ತು (iii)ನೇ ಉಪ-ಖಂಡಗಳಲ್ಲಿ ಉಲ್ಲೇಖಿಸಲಾದ ಯಾವುದೇ ಸಂಸ್ಥೆಯು ಒಂದು ಮುಜರಾಯಿ ಅಥವಾ ಧಾರ್ಮಿಕ ಅಥವಾ ಧರ್ಮಾದಾಯ ಸಂಸ್ಥೆಯೇ ಅಥವಾ ಒಂದು ವಕ್ಫ್ ಸಂಸ್ಥೆಯೇ ಎಂಬುದರ ಬಗ್ಗೆ ಯಾವುದೇ ಸಂದೇಹ ಉಂಟಾದರೆ, [1][ಪ್ರಾದೇಶಿಕ ಕಮೀಷನರ್][1] ನಿರ್ಣಯವೇ ಅಂತಿಮವಾಗಿರತಕ್ಕದ್ದು.

1. 2007ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ:5.1.2007ರಿಂದ ಪ್ರತಿಯೋಜಿಸಲಾಗಿದೆ.

(ಬಿ) ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ಅಥವಾ ಬಹು ರಾಜ್ಯ ಸಹಕಾರಿ ಸಂಘಗಳ ಅಧಿನಿಯಮ 1984 (1984ರ ಕೇಂದ್ರ ಅಧಿನಿಯಮ 51) ಅಡಿಯಲ್ಲಿ ನೋಂದಾಯಿಸಲಾದ ಅಥವಾ ನೋಂದಾಯಿಸಲಾಗಿದೆಯೆಂದು ಭಾವಿಸಲಾದ ಒಂದು ಸಹಕಾರಿ ಸಂಘಕ್ಕೆ ಸೇರಿದ ಯಾವುದೇ ಕಟ್ಟಡಕ್ಕೆ;

(ಸಿ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 29) ಅಡಿ ಸ್ಥಾಪಿಸಲಾದ ಮಾರುಕಟ್ಟೆ ಸಮಿತಿಗೆ ಸೇರಿದ ಯಾವುದೇ ಕಟ್ಟಡಕ್ಕೆ;

(ಡಿ)ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಗುತ್ತಿಗೆಗೆ ಪಡೆದಿರುವ ಅಥವಾ ಕಡ್ಡಾಯವಾಗಿ ಕೋರಿರುವ ಯಾವುವೇ ಆವರಣಗಳ ಸಂಬಂಧದಲ್ಲಿ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅನುದಾನದಿಂದ ಸೃಜಿಸಲ್ಪಟ್ಟ ಯಾವುದೇ ಬಾಡಿಗೆದಾರಿಕೆ ಅಥವಾ ಅಂತಹುದೇ ಇತರ ಸಂಬಂಧಕ್ಕೆ;

(ಇ) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಪರಿಭಾವಿತ ಬಾಡಿಗೆಯ ಅಥವಾ ನಿಗದಿತ ಬಾಡಿಗೆಯು,-

(i) ಮೊದಲನೆಯ ಅನುಸೂಚಿಯ ''ಎ'' ಭಾಗದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಪ್ರದೇಶದಲ್ಲಿ ತಿಂಗಳಿಗೆ ಮೂರು ಸಾವಿರದ ಐನೂರು ರೂಪಾಯಿಗಳನ್ನು ಮೀರಿದ; ಮತ್ತು

(ii) ಇತರ ಯಾವುದೇ ಪ್ರದೇಶದಲ್ಲಿ ತಿಂಗಳಿಗೆ ಎರಡು ಸಾವಿರ ರೂಪಾಯಿಗಳನ್ನು ಮೀರಿದ;

ಯಾವುದೇ ಆವರಣಕ್ಕೆ;

**ವಿವರಣೆ** : - "ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಪರಿಭಾವಿತ ಬಾಡಿಗೆ" ಎಂದರೆ 9ನೇ ಪ್ರಕರಣದಲ್ಲಿ ಉಪಬಂಧಿಸಲಾದ ಯಾವುದೇ ಪರಿಷ್ಕರಣೆ ಇದ್ದರೆ ಅದರೊಂದಿಗೆ 7ನೇ ಪ್ರಕರಣದಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ಲೆಕ್ಕ ಹಾಕಲಾದ ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ ನಿರ್ಮಾಣ ಮಾಡಲಾದ ಯಾವುವೇ ಆವರಣಗಳ ಸಂಬಂಧದಲ್ಲಿ ನಿರ್ಮಾಣವು ಪ್ರಾರಂಭವಾದ ದಿನಾಂಕದಂದು ಇದ್ದ ಬಾಡಿಗೆಯ ಸ್ಥಿತಿಯನ್ನು ತೋರಿಸುವುದಕ್ಕಾಗಿ ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಏರಿಸಿದ ಬಾಡಿಗೆಯ ಅದೇ ದರದಲ್ಲಿ, ಈ ಏರಿಕೆಯ ದರದಂತೆಯೇ ಕಡಿಮೆ ಮಾಡಲಾದ ಬಾಡಿಗೆಯಾಗಿರತಕ್ಕದ್ದು.

(ಎಫ್) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದ ಮೊದಲು ಅಥವಾ ತರುವಾಯ ಯಾವ ಆವರಣವನ್ನು ನಿರ್ಮಾಣ ಮಾಡಿದೆಯೋ ಅಥವಾ ಸಾಕಷ್ಟು ನವೀಕರಿಸಿದೆಯೋ ಅದನ್ನು ಹಾಗೆ ನಿರ್ಮಾಣ ಮಾಡಿದ ಅಥವಾ ಸಾಕಷ್ಟು ನವೀಕರಿಸಿದ ದಿನಾಂಕದಿಂದ ಹದಿನೈದು ವರ್ಷಗಳವರೆಗೆ ಆ ಆವರಣಕ್ಕೆ;

**ವಿವರಣೆ** - I : ನವೀಕರಿಸಿದ ವ್ಯಾಪ್ತಿಯನ್ನು ನಿರ್ಧರಿಸುವುದಕ್ಕೆ ನಿಯಮಿಸಲಾದ ಮಾನದಂಡಕ್ಕೆ" ಅನುಸಾರವಾಗಿ ಆವರಣದ ಶೇಕಡ ಎಪ್ಪತ್ತೈದಕ್ಕಿಂತ ಕಡಿಮೆಯಿಲ್ಲದ ಭಾಗವನ್ನು ಹೊಸದಾಗಿ ನಿರ್ಮಿಸಲಾಗಿದ್ದರೆ, ಆವರಣವು ಸಾಕಷ್ಟು ನವೀಕೃತವಾಗಿದೆ ಎಂದು ಹೇಳಬಹುದು.

**ವಿವರಣೆ** - II:- 'ನಿರ್ಮಾಣ ಪೂರ್ಣಗೊಂಡ ದಿನಾಂಕ' ಎಂದರೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ತಿಳಿಸಲಾದಂತೆ ನಿರ್ಮಾಣವು ಪೂರ್ಣಗೊಂಡ ದಿನಾಂಕ ಅಥವಾ ಸ್ವತ್ತು ತೆರಿಗೆ ನಿರ್ಧರಣಾ ದಿನಾಂಕ,

ಇವೆರಡರಲ್ಲಿ ಯಾವುದು ಮೊದಲೋ ಆ ದಿನಾಂಕ ಮತ್ತು ಆವರಣವನ್ನು ಹಂತಹಂತವಾಗಿ ನಿರ್ಮಾಣ ಮಾಡಲಾಗಿದ್ದರೆ, ಮೊದಲ ಕಟ್ಟಡವನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ" ಆ ಬಗ್ಗೆ ಮಾಹಿತಿ ನೀಡಿದ ಅಥವಾ ಆ ಕಟ್ಟಡದ ಸ್ವತ್ತು ತೆರಿಗೆಯನ್ನು ನಿರ್ಧರಿಸಲಾದ ದಿನಾಂಕ, ಇವೆರಡರಲ್ಲಿ ಯಾವುದು ಮೊದಲೋ ಆ ದಿನಾಂಕವಾಗಿರತಕ್ಕದ್ದು.

(ಜಿ) ವಾಣಿಜ್ಯ ಉದ್ದೇಶಕ್ಕಾಗಿ ಬಳಸಲಾಗುವ ಹದಿನಾಲ್ಕು ಚದರ ಮೀಟರುಗಳಿಗೆ ಮೀರದ ಮೇಲುಪಾಯ ಪ್ರದೇಶವುಳ್ಳ ಆವರಣವನ್ನು ಹೊರತುಪಡಿಸಿದಂತೆ ನಿವಾಸೇತರ ಉದ್ದೇಶಕ್ಕಾಗಿ ಬಳಸಲಾದ ಯಾವುದೇ ಆವರಣಕ್ಕೆ;

(ಹೆಚ್) ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಲ್ಲಿ ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉಪಬಂಧಗಳಿಂದ ವಿನಾಯಿತಿ ಗೊಳಬಹುದಾದ ಯಾವುದೇ ಕಟ್ಟಡ ಅಥವಾ ಕಟ್ಟಡಗಳ ಗುಂಪು ಅಥವಾ ಆವರಣಗಳಿಗೆ.

- ಅನ್ವಯಿಸತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು, ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ಇತರ ಪ್ರದೇಶಗಳಿಗೆ ಅಥವಾ ಯಾವುದೇ ಪ್ರದೇಶದಲ್ಲಿನ ಕಟ್ಟಡಗಳ ವರ್ಗಕ್ಕೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕ ಅಥವಾ ದಿನಾಂಕಗಳಿಂದ ಅನ್ವಯಿಸಬಹುದು.

(5) ರಾಜ್ಯ ಸರ್ಕಾರವು, ಯಾವುದೇ ಸಮಯದಲ್ಲಿ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉಪಬಂಧಗಳು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅನುಸೂಚಿ I ಅಥವಾ II ರಲ್ಲಿ ನಿರ್ದಿಷ್ಟಪಡಿಸಿರಲಿ ಅಥವಾ ಇಲ್ಲದಿರಲಿ ಯಾವುದೇ ಪ್ರದೇಶಕ್ಕೆ ಅಥವಾ ಯಾವುದೇ ಪ್ರದೇಶದಲ್ಲಿನ ಕಟ್ಟಡಗಳ ಯಾವುವೇ ವರ್ಗಗಳಿಗೆ ಅನ್ವಯವಾಗುವುದು ಕೊನೆಗೊಳ್ಳತಕ್ಕದ್ದು ಎಂದು ಅಧಿಸೂಚನೆಯನ್ನು ಹೊರಡಿಸುವ ಮೂಲಕ ನಿರ್ದೇಶಿಸಬಹುದು ಮತ್ತು ಆ ದಿನಾಂಕದಿಂದ ಸದರಿ ಉಪಬಂಧವು ಅಂಥ ಪ್ರದೇಶಕ್ಕೆ" ಅಥವಾ ಕಟ್ಟಡಗಳ ವರ್ಗಕ್ಕೆ ಅನ್ವಯವಾಗುವುದು ಕೊನೆಗೊಳ್ಳತಕ್ಕದ್ದು :

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 6ನೇ ಪ್ರಕರಣವು, ಈ ಅಧಿನಿಯಮದ ಯಾವುದೇ ಉಪಬಂಧವು ಯಾವುದೇ ಪ್ರದೇಶಕ್ಕೆ ಅಥವಾ ಯಾವುದೇ ಪ್ರದೇಶದಲ್ಲಿನ ಕಟ್ಟಡಗಳ ವರ್ಗಕ್ಕೆ ಅನ್ವಯವಾಗುವುದು ಕೊನೆಗೊಂಡಾಗ ಅದನ್ನು ಕರ್ನಾಟಕ ಅಧಿನಿಯಮದ ಮೂಲಕ ನಿರಸನಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು :

ಮತ್ತು ಪರಂತು (5) ನೇ ಉಪ-ಪ್ರಕರಣದಡಿ ಅಧಿಸೂಚನೆ ಹೊರಡಿಸುವುದು, ಸದರಿ ಅಧ್ಯಾಯದ ಎಲ್ಲಾ ಅಥವಾ ಯಾವುವೇ ಉಪಬಂಧಗಳನ್ನು ಅಂಥ ಪ್ರದೇಶಕ್ಕೆ ಅಥವಾ ಕಟ್ಟಡಗಳ ವರ್ಗಕ್ಕೆ ಅನ್ವಯಗೊಳಿಸುವ ಬಗ್ಗೆ (4)ನೇ ಉಪ-ಪ್ರಕರಣದಡಿ ಅಧಿಸೂಚನೆ ಹೊರಡಿಸುವುದಕ್ಕೆ ಅಡ್ಡಿಪಡಿಸತಕ್ಕದಲ್ಲ.

3. **ಪರಿಭಾಷೆಗಳು**.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ''ಕಟ್ಟಡ''" ಎಂದರೆ, ಹೊಲಮನೆಯನ್ನು ಹೊರತುಪಡಿಸಿ ಪ್ರತ್ಯೇಕವಾಗಿ ಬಾಡಿಗೆಗೆ ಕೊಟ್ಟ ಅಥವಾ ಕೊಡಬೇಕಾಗಿರುವ ಯಾವುದೇ ಕಟ್ಟಡ ಅಥವಾ ಗುಡಿಸಲು ಅಥವಾ ಕಟ್ಟಡ ಅಥವಾ ಗುಡಿಸಿಲಿನ ಭಾಗ ಮತ್ತು ಅದು,-

(i) ಅಂಥ ಕಟ್ಟಡ, ಗುಡಿಸಲು ಅಥವಾ ಅಂಥ ಕಟ್ಟಡ ಅಥವಾ ಗುಡಿಸಿಲಿನ ಭಾಗಕ್ಕೆ ಹೊಂದಿಕೊಂಡಿರುವ ಮತ್ತು ಅಂಥ ಕಟ್ಟಡ ಅಥವಾ ಗುಡಿಸಲು ಅಥವಾ ಕಟ್ಟಡ ಅಥವಾ ಗುಡಿಸಿಲಿನ ಭಾಗದೊಂದಿಗೆ ಬಾಡಿಗೆಗೆ ಕೊಟ್ಟ ಅಥವಾ ಕೊಡಬೇಕಾಗಿರುವ ತೋಟ, ಭೂಮಿಗಳು ಮತ್ತು ಔಟ್ ಹೌಸುಗಳು ಯಾವುದಾದರೂ ಇದ್ದರೆ, ಅವುಗಳನ್ನು;

(ii) ಅಂಥ ಕಟ್ಟಡ ಅಥವಾ ಗುಡಿಸಿಲು ಅಥವಾ ಅಂಥ ಕಟ್ಟಡ ಅಥವಾ ಗುಡಿಸಿಲಿನ ಭಾಗದಲ್ಲಿ ಉಪಯೋಗಿಸುವುದಕ್ಕಾಗಿ ಮಾಲೀಕನು ಸರಬರಾಜು ಮಾಡಿದ ಯಾವುವೇ ಪೀಠೋಪಕರಣಗಳು ಅಥವಾ ಸಲಕರಣೆಗಳನ್ನು;

(iii) ಹೆಚ್ಚಿನ ಅನುಕೂಲಕರ ಉಪಭೋಗಕ್ಕಾಗಿ ಅಂಥ ಕಟ್ಟಡ ಅಥವಾ ಕಟ್ಟಡದ ಭಾಗಕ್ಕೆ ಲಗತ್ತಿಸಿದ ಯಾವುವೇ ಜೋಡಣೆಗಳನ್ನು

- ಒಳಗೊಳ್ಳುತ್ತದೆ. ಆದರೆ ಇದು ಹೋಟೆಲು ಅಥವಾ ವಸತಿ ಗೃಹದಲ್ಲಿನ ಒಂದು ಕೊಠಡಿ ಅಥವಾ ಇತರ ಸ್ಥಳಾವಕಾಶವನ್ನು ಒಳಗೊಳ್ಳುವುದಿಲ್ಲ :

(ಬಿ) ''ನಿಯಂತ್ರಣಾಧಿಕಾರಿ'' ಎಂದರೆ 23ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ನಿಯಂತ್ರಣಾಧಿಕಾರಿ.

(ಸಿ) ''ನ್ಯಾಯಾಲಯ'' ಎಂದರೆ,-

(i) ಬೆಂಗಳೂರು ನಗರದ ಮಿತಿಯೊಳಗೆ ಇರುವ ಪ್ರದೇಶದ ಸಂಬಂಧದಲ್ಲಿ ಲಘು ವಿವಾದಗಳ ನ್ಯಾಯಾಲಯ;

(ii) ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚನೆ ನಡೆಸಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರದೇಶಗಳಲ್ಲಿ, ಅಂಥ ಪ್ರದೇಶದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ನ್ಯಾಯಾಲಯ, ಮತ್ತು

(iii) I (i) ಮತ್ತು (ii)ನೇ ಉಪ-ಖಂಡಗಳಲ್ಲಿನ ಉಲ್ಲೇಖಗಳನ್ನು ಹೊರತುಪಡಿಸಿ ಇತರ ಪ್ರದೇಶಗಳ ಸಂಬಂಧದಲ್ಲಿ ಅಂಥ ಪ್ರದೇಶದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ ;

I ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಂತೆ ''ಕುಟುಂಬ'' ಎಂದರೆ ಅಂಥ ವ್ಯಕ್ತಿಯ ಹೆಂಡತಿ ಅಥವಾ ಗಂಡ ಮತ್ತು ಅವನ ಅಥವಾ ಅವಳ ಅವಲಂಬಿತರು ;

(ಇ) ''ಮಾಲೀಕ'' ಎಂದರೆ ಯಾವುವೇ ಆವರಣಗಳಿಗೆ ಸಂಬಂಧಿಸಿದಂತೆ ಸ್ವತಃ ತನಗಾಗಿ ಆಗಲಿ ಅಥವಾ ಯಾವೊಬ್ಬ ಇತರ ವ್ಯಕ್ತಿಗಾಗಿಯಾಗಲಿ ಅಥವಾ ಪರವಾಗಿ ಆಗಲಿ ಅಥವಾ ಪ್ರಯೋಜನಕ್ಕಾಗಿ ಆಗಲಿ ಅಥವಾ ಯಾವೊಬ್ಬ ಇತರ ವ್ಯಕ್ತಿಯ ನ್ಯಾಸಧಾರಿ, ಪಾಲಕ ಅಥವಾ ರಿಸೀವರನೆಂದಾಗಲಿ ತತ್ಕಾಲದಲ್ಲಿ ಬಾಡಿಗೆಯನ್ನು ಸ್ವೀಕರಿಸುತ್ತಿರುವ ಅಥವಾ ಸ್ವೀಕರಿಸಲು ಹಕ್ಕುಳ್ಳವನಾಗಿರುವ ಅಥವಾ ಆವರಣವನ್ನು ಬಾಡಿಗೆಗೆ ಕೊಟ್ಟಿದ್ದರೆ ಬಾಡಿಗೆಯನ್ನು ಹಾಗೆ ಸ್ವೀಕರಿಸುವ ಅಥವಾ ಸ್ವೀಕರಿಸಲು ಹಕ್ಕುಳ್ಳವನಾಗುವ ಯಾವೊಬ್ಬ ವ್ಯಕ್ತಿ ;

(ಎಫ್) "''ಕಾನೂನುಬದ್ಧ ಏರಿಕೆ'' ಎಂದರೆ ಈ ಅಧಿನಿಯಮದ ಉಪಬಂಧಗಳ ಅಡಿ ಅನುಮತಿಸಲಾದ ಬಾಡಿಗೆ ಏರಿಕೆ.

(ಜಿ) ''ಬಾಡಿಗೆಗೆ ಕೊಟ್ಟ ಆವರಣದ ಸಂಬಂಧದಲ್ಲಿ ಸ್ಥಳೀಯ ಪ್ರದೇಶ'' ಎಂದರೆ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಬಾಡಿಗೆಗೆ ಕೊಟ್ಟ ಆವರಣವು ಇರುವ ಸ್ಥಳೀಯ ಪ್ರಾಧಿಕಾರವು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪ್ರದೇಶ ಮತ್ತು ಸುತ್ತಲಿನ ಪ್ರದೇಶ ;

(ಹೆಚ್) ''ಸ್ಥಳೀಯ ಪ್ರಾಧಿಕಾರ'' ಎಂದರೆ.-

(i) ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ರ ಅಡಿ (1977ರ ಕರ್ನಾಟಕ ಅಧಿನಿಯಮ 14) ರಚಿಸಲಾದ ನಗರ ಪಾಲಿಕೆ ;

(ii) ದಂಡು ಪ್ರದೇಶಗಳ ಅಧಿನಿಯಮ, 1924ರ ಅಡಿ (1924ರ ಕೇಂದ್ರ ಅಧಿನಿಯಮ 2) ರಚಿಸಲಾದ ದಂಡು ಪ್ರದೇಶ ಮಂಡಲಿಯೂ ಸೇರಿದಂತೆ, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿ (1964ರ ಕರ್ನಾಟಕ ಅಧಿನಿಯಮ 22) ರಚಿಸಲಾದ ಒಂದು ಮುನ್ಸಿಪಲ್ ಕೌನ್ಸಿಲ್ ಅಥವಾ ಒಂದು ಟೌನ್ ಪಂಚಾಯತಿ;

(iii) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ ಅಡಿ (1987ರ ಕರ್ನಾಟಕ ಅಧಿನಿಯಮ 14) ರಚಿಸಲಾದ ಒಂದು ನಗರಾಭಿವೃದ್ಧಿ ಪ್ರಾಧಿಕಾರ;

(iv) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿ (1993ರ ಕರ್ನಾಟಕ ಅಧಿನಿಯಮ 14) ರಚಿಸಲಾದ ಒಂದು ಗ್ರಾಮ ಪಂಚಾಯತಿ, ಒಂದು ತಾಲ್ಲೂಕು ಪಂಚಾಯತಿ ಅಥವಾ ಒಂದು ಜಿಲ್ಲಾ ಪಂಚಾಯತಿ ;

(v) ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ 1976ರ ಅಡಿ (1976ರ ಕರ್ನಾಟಕ ಅಧಿನಿಯಮ 11) ರಚಿಸಲಾದ ಒಂದು ಸುಧಾರಣಾ ಮಂಡಲಿ;

(vi) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ ಅಡಿ (1976ರ ಕರ್ನಾಟಕ ಅಧಿನಿಯಮ 12) ರಚಿಸಲಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ; ಅಥವಾ

(vii) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಸ್ಥಳೀಯ ಪ್ರಾಧಿಕಾರವೆಂದು ಘೋಷಿಸಬಹುದಾದ ಇತರ ಯಾವುದೇ ಪ್ರಾಧಿಕಾರ ;

(ಐ) ''ಆವರಣ'' ಎಂದರೆ,-

(i) (ಎ) ಖಂಡದಲ್ಲಿ ಪರಿಭಾಷಿಸಲಾದಂತೆ ಒಂದು ಕಟ್ಟಡ ;

(ii) ಕೃಷಿ ಉದ್ದೇಶಗಳಿಗಾಗಿ ಬಳಸದ ಯಾವುದೇ ಭೂಮಿ ;

(ಜೆ) ''ಸಾರ್ವಜನಿಕ ಸಂಸ್ಥೆ'' ಎಂಬುದು ರಾಜ್ಯದ ನಿಧಿಗಳಿಂದ ಅಥವಾ ರಾಜ್ಯದ ನಿಧಿಗಳಿಂದ ಪಡೆಯುವ ಅನುದಾನದಿಂದ ನಿರ್ವಹಿಸಲಾಗುವ ಯಾವುದೇ ಶಿಕ್ಷಣ ಸಂಸ್ಥೆ ಅಥವಾ ಅಂಥ ಶಿಕ್ಷಣ ಸಂಸ್ಥೆಗೆ ಹೊಂದಿಕೊಂಡಂಥ ಉಚಿತ ವಿದ್ಯಾರ್ಥಿ ನಿಲಯ, ಗ್ರಂಥಾಲಯ, ಸರ್ಕಾರಿ ಆಸ್ಪತ್ರೆ, ಧರ್ಮಾದಾಯ ಚಿಕಿತ್ಸಾಲಯ, ಅನಾಥಾಶ್ರಮ, ಅಂಗವಿಕಲ ಕೇಂದ್ರ ಮತ್ತು ನಿರ್ಗತಿಕರ ಕೇಂದ್ರ ಇವುಗಳನ್ನು ಒಳಗೊಳ್ಳುತ್ತದೆ.

(ಕೆ) ''ನಿವಾಸದ ಉದ್ದೇಶಕ್ಕಾಗಿ, "ನಿವಾಸದ ಬಳಕೆದಾರ" ಅಥವಾ "ನಿವಾಸದ ಉದ್ದೇಶ'' ಎಂಬುದರಲ್ಲಿ ಸಾರ್ವಜನಿಕ ಸಂಸ್ಥೆಯನ್ನು ನಡೆಸುವುದಕ್ಕೆ ಬಾಡಿಗೆಗೆ ನೀಡುವುದನ್ನು ಒಳಗೊಳ್ಳುತ್ತದೆ.

(ಎಲ್) ''ಅನುಸೂಚಿ'' ಎಂದರೆ ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(ಎಂ) ''ಯಾವುವೇ ಆವರಣಗಳಿಗೆ ಸಂಬಂಧಿಸಿದಂತೆ "ನಿಗದಿತ ಬಾಡಿಗೆ'' ಎಂದರೆ 7ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನಿಗದಿತ ಬಾಡಿಗೆ ಅಥವಾ 9ನೇ ಪ್ರಕರಣದಡಿ ನಿಗದಿತ ಬಾಡಿಗೆಯನ್ನು ಏರಿಸಲಾಗಿದ್ದರೆ ಹಾಗೆ ಏರಿಸಿದ ಬಾಡಿಗೆ ;

(ಎನ್) ''ಬಾಡಿಗೆದಾರ'' ಎಂದರೆ ಯಾವ ವ್ಯಕ್ತಿಯಿಂದ ಅಥವಾ ಯಾರಿಗಾಗಿ ಅಥವಾ ಯಾರ ಪರವಾಗಿ ಯಾವುದೇ ಆವರಣದ ಬಾಡಿಗೆಯನ್ನು ಸಂದಾಯ ಮಾಡಬೇಕಾಗಿದೆಯೋ ಅಥವಾ ಯಾವುದೇ ವಿಶೇಷ ಕರಾರು ಇರದಿದ್ದ ಸಂದರ್ಭದಲ್ಲಿ ಅದನ್ನು ಸಂದಾಯ ಮಾಡಬೇಕಾಗಿತ್ತೋ ಆ ವ್ಯಕ್ತಿ ; ಮತ್ತು ಇದು,-

(i) ಒಳ ಬಾಡಿಗೆದಾರ ;

(ii) ಬಾಡಿಗೆದಾರಿಕೆಯು ಮುಕ್ತಾಯವಾದ ತರುವಾಯ ಸ್ವಾಧೀನತೆಯಲ್ಲಿ ಮುಂದುವರಿಯುವ ಯಾವೊಬ್ಬ ವ್ಯಕ್ತಿಯನ್ನು ಒಳಗೊಳ್ಳುತ್ತದೆ. ಆದರೆ ಇದು 1882 ರ ಭಾರತೀಯ ಅನುಭೋಗಗಳ ಅಧಿನಿಯಮದ (1882ರ ಕೇಂದ್ರ ಅಧಿನಿಯಮ 5) 52ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಲೈಸೆನ್ಸ್ ನೀಡಲಾಗಿರುವ ಯಾವೊಬ್ಬ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ.

[1][(iii) ತನ್ನ ಗಂಡನು ಸಂಸಾರ ಹೂಡಿದ್ದ ಮನೆಯಲ್ಲಿ ಅಥವಾ ಬಾಡಿಗೆದಾರನಾಗಿದ್ದ ಆವರಣದಲ್ಲಿ ವಾಸವಾಗಿದ್ದ ಅಥವಾ ವಾಸವಾಗಿರಲು ಹಕ್ಕುಳ್ಳ ಬಾಡಿಗೆದಾರನ ಪರಿತ್ಯಕ್ತ ಪತ್ನಿ ; ಮತ್ತು

(iv) ವಿಚ್ಛೇದನದ ಡಿಕ್ರಿಯಲ್ಲಿ ಸಂಸಾರ ಹೂಡಿದ್ದ ಮನೆಯಲ್ಲಿ ಅಥವಾ ಬಾಡಿಗೆ ಇದ್ದ ಆವರಣದಲ್ಲಿ ವಾಸ ಮಾಡುವುದಕ್ಕೆ ಆಕೆಗೆ ಹಕ್ಕಿದೆ ಎನ್ನುವುದು ಒಂದು ಷರತ್ತಾಗಿ ಇರುವಂಥ ಒಂದು ವಿಚ್ಛೇದನದ ಡಿಕ್ರಿಯನ್ನು ಹೊಂದಿರುವ ಬಾಡಿಗೆದಾರನ ವಿಚ್ಛೇದಿತ ಪತ್ನಿ.][1]

1. 2011ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 22.06.2011 ರಿಂದ ಸೇರಿಸಲಾಗಿದೆ.

(ಓ) ''ನಗರ ಪ್ರದೇಶ'' ಎಂದರೆ ಒಂದನೇ ಅಥವಾ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಗಳು.

## ಅಧ್ಯಾಯ - II

## ಬಾಡಿಗೆ ನಿಯಂತ್ರಣ

**4. ಬಾಡಿಗೆ ಒಪ್ಪಂದವು ಲಿಖಿತದಲ್ಲಿ ಇರುವುದು** .-(1) ಸ್ವತ್ತು ವರ್ಗಾವಣೆ ಅಧಿನಿಯಮ, (1882ರ ಕೇಂದ್ರ ಅಧಿನಿಯಮ 4) 107ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಪ್ರಾರಂಭವಾದ ತರುವಾಯ,

ಯಾವೊಬ್ಬ ವ್ಯಕ್ತಿಯು ಲಿಖಿತ ಒಪ್ಪಂದದ ಹೊರತಾಗಿ ಯಾವುದೇ ಕಟ್ಟಡವನ್ನು ಬಾಡಿಗೆಗೆ ಕೊಡತಕ್ಕದ್ದಲ್ಲ ಅಥವಾ ತೆಗೆದುಕೊಳ್ಳತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಸೃಜಿಸಲಾಗಿದ್ದ ಬಾಡಿಗೆದಾರಿಕೆಗೆ ಸಂಬಂಧಿಸಿದಂತೆ ಒಂದು ಲಿಖಿತ ಒಪ್ಪಂದವನ್ನು ಮಾಡಿಕೊಂಡಿರದಿದ್ದಲ್ಲಿ, ಮಾಲೀಕ ಮತ್ತು ಬಾಡಿಗೆದಾರನು, ಬಾಡಿಗೆದಾರಿಕೆಗೆ ಸಂಬಂಧಿಸಿದಂತೆ ಒಂದು ಲಿಖಿತ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ನಿಯಮಿಸಲಾದ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು :

ಪರಂತು, ಈ ಉಪ ಪ್ರಕರಣದ ಅಡಿಯಲ್ಲಿ, ಮಾಲೀಕ ಹಾಗೂ ಬಾಡಿಗೆದಾರನು, ಜಂಟಿಯಾಗಿ ಬಾಡಿಗೆದಾರಿಕೆ ಒಪ್ಪಂದದ ಒಂದು ಪ್ರತಿಯನ್ನು ಸಲ್ಲಿಸಲು ತಪ್ಪಿದರೆ, ಅಂಥ ಮಾಲೀಕ ಮತ್ತು ಬಾಡಿಗೆದಾರನು ಅಂಥ ಬಾಡಿಗೆದಾರಿಕೆಯ ಬಗ್ಗೆ ವಿವರಗಳನ್ನು ನಿಯಮಿಸಲಾದ ಪ್ರಾಧಿಕಾರಿಗೆ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ ಪ್ರತ್ಯೇಕ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.

**೫. ಬಾಡಿಗೆದಾರಿಕೆಯ ಉತ್ತರಾಧಿಕಾರ**.- (1) ಬಾಡಿಗೆದಾರನು ಮರಣ ಹೊಂದಿದ ಸಂದರ್ಭದಲ್ಲಿ, ಬಾಡಿಗೆದಾರಿಕೆಯ ಹಕ್ಕು, ಅವನು ಮರಣ ಹೊಂದಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅವನ ಉತ್ತರಾಧಿಕಾರಿಗಳಿಗೆ ಈ ಮುಂದಿನ ಕ್ರಮದಲ್ಲಿ ಪ್ರಾಪ್ತವಾಗತಕ್ಕದ್ದು, ಎಂದರೆ : -

(ಎ) ಹೆಂಡತಿ ;

(ಬಿ) ಮಗ ಅಥವಾ ಮಗಳು ಅಥವಾ ಮಗ ಮತ್ತು ಮಗಳು ಇಬ್ಬರೂ ಇದ್ದಲ್ಲಿ ಅವರಿಬ್ಬರು ;

(ಸಿ) ತಂದೆ ತಾಯಿ ;

(□ □) ಸೊಸೆ ಎಂದರೆ, ಅವನಿಗಿಂತ ಮೊದಲೇ ಮರಣ ಹೊಂದಿದ ಅವನ ಮಗನ ಹೆಂಡತಿ :

ಪರಂತು, ಉತ್ತರಾಧಿಕಾರಿಯು ಮೃತ ಬಾಡಿಗೆದಾರನೊಂದಿಗೆ ಅವನ ಮರಣದ ದಿನಾಂಕದವರೆಗೆ ಅವನ ಕುಟುಂಬದ ಒಬ್ಬ ಸದಸ್ಯನಾಗಿ ಆವರಣದಲ್ಲಿ ಸಾಮಾನ್ಯವಾಗಿ ವಾಸಿಸುತ್ತಿದ್ದಿರಬೇಕು ಅಥವಾ ವ್ಯವಹಾರ ನಡೆಸುತ್ತಿದ್ದಿರಬೇಕು ಮತ್ತು ಮೃತ ಬಾಡಿಗೆದಾರನ ಮೇಲೆ ಅವಲಂಬಿತನಾಗಿದ್ದಿರಬೇಕು:

ಮತ್ತು ಪರಂತು, ಅಂಥ ಉತ್ತರಾಧಿಕಾರಿ ಅಥವಾ ಅವನ ಹೆಂಡತಿ ಅಥವಾ ಅವನ ಅವಲಂಬಿತ ಮಗ ಅಥವಾ ಮಗಳು ಬಾಡಿಗೆಗೆ ಕೊಟ್ಟ ಆವರಣದ ಸಂಬಂಧದ ಸ್ಥಳೀಯ ಪ್ರದೇಶದಲ್ಲಿ ಆವರಣವನ್ನು ಹೊಂದಿದ್ದರೆ ಅಥವಾ ಅನುಭೋಗಿಸುತ್ತಿದ್ದರೆ ಬಾಡಿಗೆದಾರಿಕೆಯ ಹಕ್ಕು ಆ ಉತ್ತರಾಧಿಕಾರಿಗಳಿಗೆ ಪ್ರಾಪ್ತವಾಗತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಹೇಳಲಾದ ಉತ್ತರಾಧಿಕಾರಿಯಾದ ಒಬ್ಬ ವ್ಯಕ್ತಿಯು ಮೃತ ಬಾಡಿಗೆದಾರನೊಂದಿಗೆ ಆವರಣದಲ್ಲಿ ಸಾಮಾನ್ಯವಾಗಿ ವಾಸಿಸುತ್ತಿದ್ದರೆ ಅಥವಾ ವ್ಯವಹಾರವನ್ನು ನಡೆಸುತ್ತಿದ್ದರೆ ಆದರೆ ಅವನ ಮರಣದ ದಿನಾಂಕದಂದು ಅವನ ಮೇಲೆ ಅವಲಂಬಿತನಾಗಿರದಿದ್ದರೆ, ಅಥವಾ ಅವನು ಅಥವಾ ಅವನ ಹೆಂಡತಿ ಅಥವಾ ಅವನ ಯಾರೇ ಅವಲಂಬಿತ ಮಗ ಅಥವಾ ಮಗಳು ಈ ಅಧಿನಿಯಮ ಅನ್ವಯವಾಗುವ ಬಾಡಿಗೆಗೆ ಕೊಟ್ಟ ಆವರಣದ ಸಂಬಂಧದ ಸ್ಥಳೀಯ ಪ್ರದೇಶದಲ್ಲಿ ಒಂದು ನಿವಾಸ ಆವರಣವನ್ನು ಹೊಂದಿದ್ದರೆ ಅಥವಾ ಅದರ ಅನುಭೋಗದಲ್ಲಿದ್ದರೆ ಅಂಥ ಉತ್ತರಾಧಿಕಾರಿಯು ಬಾಡಿಗೆದಾರನ ಮರಣದ ದಿನಾಂಕದಿಂದ ಒಂದು ವರ್ಷಕ್ಕೆ ಮಿತಗೊಳಿಸಿದ ಅವಧಿಗೆ ಬಾಡಿಗೆದಾರನಾಗಿ ಸ್ವಾಧೀನದಲ್ಲಿ ಮುಂದುವರಿಯುವ ಹಕ್ಕನ್ನು ಪಡೆಯತಕ್ಕದ್ದು ಮತ್ತು ಆ ಅವಧಿ ಮುಕ್ತಾಯವಾದ ತರುವಾಯ ಅಥವಾ ಅವನು ಮರಣ ಹೊಂದಿದಾಗ, ಇವೆರಡರಲ್ಲಿ ಯಾವುದು ಮೊದಲೋ ಆಗ ಆವರಣದ ಸ್ವಾಧೀನತೆಯಲ್ಲಿ ಮುಂದುವರಿಯುವ ಅಂಥ ಉತ್ತರಾಧಿಕಾರಿಯ ಹಕ್ಕು ಅಂತ್ಯಗೊಳ್ಳತಕ್ಕದ್ದು.

**ವಿವರಣೆ** : - ಸಂದೇಹಗಳ ನಿವಾರಣೆಗಾಗಿ.

(ಎ) (2)ನೆ ಉಪ-ಪ್ರಕರಣದ ಕಾರಣದಿಂದಾಗಿ, ಆವರಣಗಳ ಸ್ವಾಧೀನತೆಯಲ್ಲಿ ಮುಂದುವರಿಯುವ ಯಾವೊಬ್ಬ ಉತ್ತರಾಧಿಕಾರಿಯ ಹಕ್ಕು ಅಂತ್ಯಗೊಂಡರೆ, ಹಾಗೆ ಅಂತ್ಯಗೊಳ್ಳುವಿಕೆಯು, ಬಾಡಿಗೆದಾರಿಕೆ ಮುಕ್ತಾಯವಾದ ತರುವಾಯ ಸ್ವಾಧೀನತೆಯಲ್ಲಿ ಮುಂದುವರಿಯುವ ಅದೇ ಪ್ರವರ್ಗದ ಯಾವೊಬ್ಬ ಇತರ ಉತ್ತರಾಧಿಕಾರಿಯ ಹಕ್ಕಿಗೆ ಬಾಧಕವಾಗತಕ್ಕದ್ದಲ್ಲ. ಆದರೆ ಅದೇ ಪ್ರವರ್ಗದ ಇನ್ನೊಬ್ಬ ಉತ್ತರಾಧಿಕಾರಿ ಇಲ್ಲದಿದ್ದರೆ, ಹಾಗೆ ಅಂತ್ಯಗೊಳ್ಳುವುದರಿಂದಾಗಿ ಬಾಡಿಗೆದಾರಿಕೆ

ಮುಕ್ತಾಯವಾದ ತರುವಾಯ ಸ್ವಾಧೀನತೆಯಲ್ಲಿ ಮುಂದುವರಿಯುವ ಹಕ್ಕು, ಯಾವುದೇ ಕೆಳಗಿನ ಪ್ರವರ್ಗದಲ್ಲಿ ಅಥವಾ ಸಂದರ್ಭಾನುಸಾರ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಿದ ಯಾವೊಬ್ಬ ಇತರ ಉತ್ತರಾಧಿಕಾರಿಗೆ ವರ್ಗಾವಣೆಯಾಗತಕ್ಕದ್ದಲ್ಲ ಎಂದು;

(ಬಿ) ಆವರಣಗಳ ಸ್ವಾಧೀನತೆಯಲ್ಲಿ ಮುಂದುವರಿಯಲು (1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿತವಾದ ಪ್ರತಿಯೊಬ್ಬ ಉತ್ತರಾಧಿಕಾರಿಗೆ ಇರುವ ಹಕ್ಕು, ಅವನ ವೈಯುಕ್ತಿಕ ಹಕ್ಕು ಆಗಿರತಕ್ಕದ್ದು ಮತ್ತು ಅಂಥ ಉತ್ತರಾಧಿಕಾರಿಯ ಮರಣದ ನಂತರ ಅದು ಅವನ ಯಾರೇ ವಾರಸುದಾರರಿಗೆ ಪ್ರಾಪ್ತವಾಗತಕ್ಕದ್ದಲ್ಲ ಎಂದು.

- ಈ ಮೂಲಕ ಘೋಷಿಸಲಾಗಿದೆ.

**6. ಸಂದಾಯ ಮಾಡತಕ್ಕ ಬಾಡಿಗೆ.**- (1) ಆವರಣದ ಸಂಬಂಧದಲ್ಲಿ ಸಂದಾಯ ಮಾಡತಕ್ಕ ಬಾಡಿಗೆಯು,-

(ಎ) ಮೂರನೇ ಅನುಸೂಚಿಯಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಏರಿಸಲಾದಂತೆ ಮಾಲೀಕ ಮತ್ತು ಬಾಡಿಗೆದಾರನ ನಡುವೆ ಒಪ್ಪಂದ ಮಾಡಿಕೊಳ್ಳಲಾದ ಬಾಡಿಗೆ; ಅಥವಾ

(ಬಿ) 9ನೇ ಪ್ರಕರಣದ ಅಡಿ ಪರಿಷ್ಕರಿಸಲಾದಂತೆ 7ನೇ ಪ್ರಕರಣದಡಿ ನಿರ್ದಿಷ್ಟಪಡಿಸಲಾದ ನಿಗದಿತ ಬಾಡಿಗೆ.

(2) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಮಾಡಿಕೊಳ್ಳಲಾದ ಬಾಡಿಗೆದಾರಿಕೆಯ ಸಂದರ್ಭದಲ್ಲಿ, ಮಾಲೀಕನು, ಬಾಡಿಗೆದಾರನಿಗೆ ಲಿಖಿತದಲ್ಲಿ ನೋಟೀಸು ನೀಡುವ ಮೂಲಕ ಹಾಗೆ ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳುಗಳೊಳಗಾಗಿ 7ನೇ ಪ್ರಕರಣದ ಅಡಿ ನಿರ್ದಿಷ್ಟಪಡಿಸಲಾದಂತೆ ಬಾಡಿಗೆಯನ್ನು ಏರಿಸಬಹುದು ಮತ್ತು ಹಾಗೆ ಏರಿಸಲಾದ ಬಾಡಿಗೆಯನ್ನು ಅಂಥ ಪ್ರಾರಂಭದ ದಿನಾಂಕದಿಂದ ಸಂದಾಯ ಮಾಡತಕ್ಕದ್ದು.

**7. ನಿಗದಿತ ಬಾಡಿಗೆ.**- (1) ಯಾವುದೇ ಆವರಣಕ್ಕೆ ಸಂಬಂಧಿಸಿದಂತೆ ನಿಗದಿತ ಬಾಡಿಗೆಯು, ನಿರ್ಮಾಣ ವೆಚ್ಚ ಮತ್ತು ನಿರ್ಮಾಣದ ಪ್ರಾರಂಭದ ದಿನಾಂಕದಂದು ಆವರಣದಲ್ಲಿಯ ಭೂಮಿಯ

ಮಾರುಕಟ್ಟೆ ಬೆಲೆಯ ಒಟ್ಟು ಮೊಬಲಗಿನ ವಾರ್ಷಿಕ ಶೇಕಡ ಹತ್ತರಷ್ಟು ಆಧಾರದ ಮೇಲೆ ಲೆಕ್ಕ ಹಾಕಲಾದ ಬಾಡಿಗೆಯಾಗಿರತಕ್ಕದ್ದು:

ಪರಂತು, ಮೇಲೆ ಹೇಳಲಾದಂತೆ ಲೆಕ್ಕ"ಹಾಕಲಾದ ನಿಗದಿತ ಬಾಡಿಗೆಯನ್ನು ಮೂರನೇ ಅನುಸೂಚಿಯಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಏರಿಸತಕ್ಕದ್ದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ನಿರ್ಮಾಣದ ವೆಚ್ಚದಲ್ಲಿ ಆವರಣಗಳಲ್ಲಿ ಜೋಡಿಸಲಾದ ವಿದ್ಯುತ್ ಜೋಡಣೆಗಳು, ನೀರಿನ ಪಂಪುಗಳು, ಓವರ್‌ಹೆಡ್ ಟ್ಯಾಂಕುಗಳು, ಸಂಗ್ರಹಣಾ ಟ್ಯಾಂಕುಗಳು ಮತ್ತು ಇತರ ನೀರು, ಒಳಚರಂಡಿ ಮತ್ತು ಇತರ ಸ್ಥಿರ ಜೋಡಣೆಗಳು ಮತ್ತು ಜೋಡಣೆಗಳು ಸೇರುತ್ತವೆ.

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಲಾದ ಸ್ಥಿರ ಜೋಡಣೆಗಳು ಮತ್ತು ಜೋಡಣೆಗಳು ಒಂದು ಕಟ್ಟಡದಲ್ಲಿನ ಒಬ್ಬನಿಗಿಂತ ಹೆಚ್ಚು ಅನುಭೋಗದಾರರ ಸಾಮಾನ್ಯ ಬಳಕೆಯಲ್ಲಿದ್ದರೆ, ಅಂಥ ಕಟ್ಟಡದ ಮೇಲುಪಾಯ ವಿಸ್ತೀರ್ಣಕ್ಕೆ (ಪ್ಲಿಂತ್ ಏರಿಯಾ) ಅಂಥ ಆವರಣದ ಮೇಲುಪಾಯದ ವಿಸ್ತೀರ್ಣವು ಯಾವ ಅನುಪಾತದಲ್ಲಿದೆಯೋ ಅಂಥ ಅನುಪಾತದಲ್ಲಿ ಸ್ಥಿರ ಜೋಡಣೆಗಳು ಮತ್ತು ಜೋಡಣೆಗಳ ವೆಚ್ಚವನ್ನೂ ಆವರಣದ ನಿರ್ಮಾಣದ ವೆಚ್ಚದಲ್ಲಿ ಸೇರಿಸತಕ್ಕದ್ದು.

(ಸಿ) ನಿರ್ಮಾಣದ ವೆಚ್ಚವು ನಿರ್ಮಾಣಕ್ಕೆ ಖರ್ಚು ಮಾಡಲಾದ ವಾಸ್ತವಿಕ ಮೊಬಲಗಾಗಿರತಕ್ಕದ್ದು ಮತ್ತು ಅಂಥ ಮೊಬಲಗನ್ನು ನಿರ್ಧರಿಸಲಾಗದ ಸಂದರ್ಭದಲ್ಲಿ, ಅಂಥ ವೆಚ್ಚವನ್ನು ಯಾವ ವರ್ಷದಲ್ಲಿ ಆವರಣಗಳ ನಿರ್ಮಾಣವಾಗಿದೆಯೋ ಆ ವರ್ಷದಲ್ಲಿ ಅಂಥಹುದೇ ನಿರ್ಮಾಣಕ್ಕೆ ರಾಜ್ಯ ಲೋಕೋಪಯೋಗಿ ಇಲಾಖೆಯ ನಿರ್ಮಾಣ ವೆಚ್ಚದ ಅನುಸೂಚಿತ ದರಗಳ ಪ್ರಕಾರ ನಿರ್ಧರಿಸತಕ್ಕದ್ದು.

(□ □) ಭೂಮಿಯ ಮಾರುಕಟ್ಟೆ ಬೆಲೆಯು, ನೋಂದಣಿಯ ವರ್ಷದಲ್ಲಿ ನಿರ್ಮಾಣ ಪ್ರಾರಂಭವಾಗಿದ್ದರೆ, 1908ರ ನೋಂದಣಿ ಅಧಿನಿಯಮದ (1908 ಕೇಂದ್ರ ಅಧಿನಿಯಮ 16) ಅಡಿ ನೋಂದಾಯಿಸಲಾದ ಮಾರಾಟ ಪತ್ರದ ಮೂಲಕ ನಿರ್ಧರಿಸಲಾದಂತೆ ಖರೀದಿಸಲಾದ ಭೂಮಿಯ ಬೆಲೆ ಅಥವಾ ನಿರ್ಮಾಣ ಪ್ರಾರಂಭವಾದ ವರ್ಷಕ್ಕೆ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಅಧಿಸೂಚಿಸಿದ ಮಾರಾಟ ದರಗಳು, ಇವೆರಡರಲ್ಲಿ ಯಾವುದು ಹೆಚ್ಚಿನದೋ ಅದಾಗಿರತಕ್ಕದ್ದು ;

(ಇ) ಆವರಣದಲ್ಲಿ ಇರುವ ಭೂಮಿಯು, ಕಟ್ಟಡದ ಮೇಲುಪಾಯ ವಿಸ್ತೀರ್ಣ ಮತ್ತು ಅದಕ್ಕೆ ಹೊಂದಿಕೊಂಡಂತೆ ಮೇಲುಪಾಯ ವಿಸ್ತೀರ್ಣದ ಶೇಕಡ ಐವತ್ತರಷ್ಟು ಖಾಲಿ ಭೂಮಿಯಾಗಿರತಕ್ಕದ್ದು.

(ಎಫ್) ಯಾವುದೇ ಒಂದು ಆವರಣವು ಒಂದಕ್ಕಿಂತ ಹೆಚ್ಚು ಆವರಣಗಳುಳ್ಳ ಕಟ್ಟಡದ ಒಂದು ಭಾಗವಾದರೆ, ಅಂಥ ಕಟ್ಟಡದ ಒಂದು ಭಾಗವಾದ ಭೂಮಿಯ ಮೌಲ್ಯದ ಭಾಗವನ್ನು ಆ ಕಟ್ಟಡದ ಮೇಲುಪಾಯದ ವಿಸ್ತೀರ್ಣದಲ್ಲಿ ಅಂಥ ಆವರಣದ ಮೇಲುಪಾಯದ ವಿಸ್ತೀರ್ಣವು ಹೇಗೆ ಸಮನಾಗಿರುವುದೋ ಹಾಗೆ ಆವರಣದಲ್ಲಿರುವ ಭೂಮಿಯ ಮಾರುಕಟ್ಟೆ ಬೆಲೆಯೆಂಬುದಾಗಿ ಪರಿಗಣಿಸತಕ್ಕದ್ದು ;

(ಜಿ) (ಸಿ) ಮತ್ತು ಖ ಖಂಡಗಳಲ್ಲಿ ಏನೇ ಇದ್ದರೂ, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಖರೀದಿಸಲಾದ ಅಥವಾ ಅವುಗಳು ಹಂಚಿಕೆ ಮಾಡಲಾದ ಆವರಣದ ನಿರ್ಮಾಣ ವೆಚ್ಚ ಮತ್ತು ಆವರಣಗಳಲ್ಲಿರುವ ಭೂಮಿಯ ಮಾರುಕಟ್ಟೆ ಬೆಲೆಯು, ಆವರಣಕ್ಕಾಗಿ ಅಂಥ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಕೆ" ಸಂದಾಯ ಮಾಡತಕ್ಕ ಒಟ್ಟು ಮೊಬಲಗು ಆಗಿರತಕ್ಕದ್ದು :

ಪರಂತು, ನಿಯಂತ್ರಣಾಧಿಕಾರಿಯು, ನಿರ್ಮಾಣದ ವೆಚ್ಚ ಮತ್ತು ಆವರಣದಲ್ಲಿರುವ ಭೂಮಿಯ ಮಾರುಕಟ್ಟೆ ಬೆಲೆಯನ್ನು ಗೊತ್ತುಪಡಿಸುವ ಉದ್ದೇಶಕ್ಕಾಗಿ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕ"ಮೊಬಲಗಿನ ಗರಿಷ್ಠ ಶೇಕಡ ಮೂವತ್ತಕ್ಕೆ ಒಳಪಟ್ಟು, ಆವರಣದಲ್ಲಿನ ಯಾವುದೇ

ಸುಧಾರಣೆ, ಹೆಚ್ಚಳ ಅಥವಾ ಕಟ್ಟಡ ರಚನೆಗೆ ಸಂಬಂಧಪಟ್ಟ ಬದಲಾವಣೆಗಾಗಿ ಮಾಲೀಕ ಅಥವಾ ಮೊದಲ ಅಥವಾ ತರುವಾಯದ ಖರೀದಿದಾರ ಅಥವಾ ಹಂಚಿಕೆದಾರನು ವಹಿಸಿದ ಯಾವುದೇ ವೆಚ್ಚಕ್ಕೆ ಹಾಗೆ ಸಂದಾಯ ಮಾಡತಕ್ಕ ಮೊಬಲಗಿಗಿಂತ ಹೆಚ್ಚಿನ ಮೊಬಲಗಿಗೆ ಅವಕಾಶ ನೀಡಬಹುದು.

**೮. ಸಂದಾಯ ಮಾಡತಕ್ಕ ಇತರ ವೆಚ್ಚಗಳು** .-(1) ಒಬ್ಬ ಬಾಡಿಗೆದಾರನು ಮಾಲೀಕನಿಗೆ ಬಾಡಿಗೆಯ ಜೊತೆಗೆ ಈ ಮುಂದಿನ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು, ಎಂದರೆ.-

(ಎ) ನಾಲ್ಕನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಅಥವಾ ಮಾಲೀಕ ಮತ್ತು ಬಾಡಿಗೆದಾರನ ನಡುವೆ ಮಾಡಿಕೊಳ್ಳಲಾದ ಒಪ್ಪಂದ ಪ್ರಕಾರದ ನಾಗರೀಕ ಸೌಕರ್ಯಗಳಿಗೆ ಬಾಡಿಗೆಯ ಶೇಕಡ ಹದಿನೈದರಷ್ಟನ್ನು ಮೀರದ ವೆಚ್ಚಗಳು;

(ಬಿ) ಬಾಡಿಗೆಯ ಶೇಕಡ ಹತ್ತರ ದರದಲ್ಲಿ ನಿರ್ವಹಣಾ ವೆಚ್ಚಗಳು ;

(ಸಿ) ಮಾಲೀಕನು ಸ್ಥಳೀಯ ಪ್ರಾಧಿಕಾರಕ್ಕೆ"ಸ್ವತ್ತು ತೆರಿಗೆಯನ್ನು ಸಂದಾಯ ಮಾಡಲು ಇರುವ ಹೊಣೆಗಾರಿಕೆಗೆ ಬಾಧಕವಾಗದಂತೆ ದಾಮಾಷಾ ಸ್ವತ್ತು ತೆರಿಗೆ.

**ವಿವರಣೆ** : - ಸ್ವತ್ತು ತೆರಿಗೆಯ ಸಂಬಂಧದಲ್ಲಿ ಮಾಲೀಕನಿಗೆ ಬಾಡಿಗೆದಾರನು ಸಂದಾಯ ಮಾಡತಕ್ಕ" ಮಾಸಿಕ ಚಾರ್ಜುಗಳನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ನಿಕಟ ಪೂರ್ವ ವರ್ಷಕ್ಕೆ ಸ್ವತ್ತು ತೆರಿಗೆಯಾಗಿ ಸಂದಾಯ ಮಾಡಿದ ಅಥವಾ ಸಂದಾಯ ಮಾಡತಕ್ಕ ಮೊಬಲಗು ಅಥವಾ ಸಂದಾಯ ಮಾಡತಕ್ಕ ಅಂದಾಜು ತೆರಿಗೆಯು ಆಧಾರವಾಗಿರತಕ್ಕದ್ದು.

(2) ಮಾಲೀಕನು, ಸಾಮಾನ್ಯವಾಗಿ ಬಾಡಿಗೆದಾರನು ಸಂದಾಯ ಮಾಡತಕ್ಕಂಥ, ಬಾಡಿಗೆದಾರನು ಬಳಸಿದ ವಿದ್ಯುಚ್ಛಕ್ತಿ ಅಥವಾ ನೀರು ದರದ ಅಥವಾ ಒಂದು ಸ್ಥಳೀಯ ಅಥವಾ ಇತರ ಪ್ರಾಧಿಕಾರವು ವಿಧಿಸಿದ ಇತರ ಚಾರ್ಜುಗಳ ಸಂಬಂಧದಲ್ಲಿ ತಾನು ಸಂದಾಯ ಮಾಡಿದ ಮೊಬಲಗನ್ನು ಬಾಡಿಗೆದಾರನಿಂದ ವಸೂಲು ಮಾಡಲು ಹಕ್ಕು"ಳ್ಳವನಾಗಿರತಕ್ಕದ್ದು.

**೯. ಕೆಲವು ಸಂದರ್ಭಗಳಲ್ಲಿ ಬಾಡಿಗೆಯ ಪರಿಷ್ಕರಣೆ** .- (1) ಯಾವೊಬ್ಬ ಮಾಲೀಕನು ಯಾವುದೇ ಸಮಯದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಬಾಡಿಗೆದಾರನ ಅನುಮೋದನೆಯೊಂದಿಗೆ ಅಥವಾ ಅನುಮೋದನೆಯಿಲ್ಲದೆ ಅಥವಾ ಈ ಅಧಿನಿಯಮದ ಪ್ರಾರಂಭದ ತರುವಾಯ ಬಾಡಿಗೆದಾರನ ಲಿಖಿತ ಅನುಮೋದನೆಯೊಂದಿಗೆ ಅಂಥ ಆವರಣಕ್ಕೆ ಅಗತ್ಯವಾದ ಅಥವಾ ಸಹಜವಾದ ಅಲಂಕರಣಕ್ಕಾಗಿ ಅಥವಾ ವಾಸ ಯೋಗ್ಯವಾದ ದುರಸ್ತಿ ಮಾಡಿಸಲು ತಗಲಿದ ವೆಚ್ಚವಾಗಿರದ, ಯಾವುದೇ ಸುಧಾರಣೆ, ಸೇರ್ಪಡೆ ಅಥವಾ ಕಟ್ಟಡ ರಚನೆಗೆ ಸಂಬಂಧಪಟ್ಟ ಬದಲಾವಣೆ ವೆಚ್ಚವನ್ನು ವಹಿಸಿದರೆ ಮತ್ತು ಅಂಥ ಸುಧಾರಣೆ, ಸೇರ್ಪಡೆ ಅಥವಾ ಬದಲಾವಣೆ ವೆಚ್ಚವನ್ನು ಆವರಣದ ಬಾಡಿಗೆ ನಿರ್ಧರಿಸುವಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರದಿದ್ದಲ್ಲಿ ಪ್ರತಿ ವರ್ಷಕ್ಕೆ ಅಂಥ ವೆಚ್ಚದ ಶೇಕಡ ಹತ್ತರಷ್ಟನ್ನು ಮೀರದ ಮೊಬಲಗಿನಷ್ಟು ಬಾಡಿಗೆಯನ್ನು ಮಾಲೀಕನು ಕಾನೂನುಬದ್ಧವಾಗಿ ಏರಿಸಬಹುದು.

(2) ಈ ಅಧಿನಿಯಮದ ಅಡಿ ಆವರಣದ ಬಾಡಿಗೆಯನ್ನು ನಿಗದಿಪಡಿಸಲಾದ ಅಥವಾ ಸಂದರ್ಭಾನುಸಾರ ಒಪ್ಪಿಕೊಂಡ ತರುವಾಯ, ಅಂಥ ಆವರಣದಲ್ಲಿನ ಸ್ಥಳಾವಕಾಶವು ಕಡಿಮೆಯಾದರೆ, ಚಿಕ್ಕದಾದರೆ ಅಥವಾ ದುಸ್ಥಿತಿಗೊಳಗಾದರೆ ಬಾಡಿಗೆದಾರನು ಬಾಡಿಗೆಯಲ್ಲಿ ಇಳಿತವನ್ನು ಕೋರಬಹುದು.

**10. ಬಾಡಿಗೆ ಪರಿಷ್ಕರಣೆಯ ನೋಟೀಸು.**- (1) ಮಾಲೀಕನು 9ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿ ಯಾವುದೇ ಆವರಣದ ಬಾಡಿಗೆಯನ್ನು ಪರಿಷ್ಕರಿಸಲು ಬಯಸಿದಲ್ಲಿ, ಅವನು ಬಾಡಿಗೆದಾರನಿಗೆ ಬಾಡಿಗೆ ಪರಿಷ್ಕರಿಸುವ ತನ್ನ ಉದ್ದೇಶದ ಬಗ್ಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಅಂಥ ಪರಿಷ್ಕರಣೆಯು ಈ ಅಧಿನಿಯಮದ ಮೇರೆಗೆ ಕಾನೂನು ಬದ್ಧವಾಗಿರುವಷ್ಟರ ಮಟ್ಟಿಗೆ ಹಾಗೆ ಸುಧಾರಣೆ, ಸೇರ್ಪಡೆ ಅಥವಾ ಕಟ್ಟಡ ರಚನೆಗೆ ಸಂಬಂಧಪಟ್ಟ ಬದಲಾವಣೆ ಮಾಡಿದ ದಿನಾಂಕದಿಂದ ಪರಿಣಾಮಕಾರಿ ಬಾಕಿಯಾಗತಕ್ಕದ್ದು ಮತ್ತು ವಸೂಲಿಯಾಗತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ನೋಟೀಸು ಲಿಖಿತದಲ್ಲಿದ್ದು ಮಾಲೀಕನಿಂದ ಅಥವಾ ಅವನ ಪರವಾಗಿ ಸಹಿ ಮಾಡಿರತಕ್ಕದ್ದು ಮತ್ತು 1882ರ ಸ್ವತ್ತು ವರ್ಗಾವಣೆ ಅಧಿನಿಯಮದ (1882ರ ಕೇಂದ್ರ ಅಧಿನಿಯಮ 4) 106ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ನೀಡತಕ್ಕದ್ದು.

**11. ಕಾನೂನು ಬದ್ಧವಲ್ಲದ ಚಾರ್ಜುಗಳನ್ನು ಕ್ಲೇಮು ಮಾಡಬಾರದು.**- (1) ಬಾಡಿಗೆದಾರನು ಅಥವಾ ಬಾಡಿಗೆದಾರನ ಅಥವಾ ಒಳಬಾಡಿಗೆದಾರನ ಪರವಾಗಿ ಕಾರ್ಯನಿರ್ವಹಿಸುವ ಅಥವಾ ಕಾರ್ಯ ನಿರ್ವಹಿಸುವುದಾಗಿ ತಾತ್ಪರ್ಯವಾಗುವ ಇತರ ಯಾವೊಬ್ಬ ವ್ಯಕ್ತಿಯು, ಯಾವುದೇ ಆವರಣದ ಬಾಡಿಗೆದಾರಿಕೆ ಅಥವಾ ಸಂದರ್ಭಾನುಸಾರ ಒಳಬಾಡಿಗೆದಾರಿಕೆಯನ್ನು ಬಿಟ್ಟುಕೊಡುವುದಕ್ಕೆ, ವರ್ಗಾವಣೆ ಮಾಡುವುದಕ್ಕೆ ಅಥವಾ ಹಸ್ತಾಂತರ ಮಾಡುವುದಕ್ಕೆ ಪ್ರತಿಫಲವಾಗಿ ಯಾವುದೇ ಸಂದಾಯವನ್ನು ಕ್ಲೇಮು ಮಾಡುವುದು ಅಥವಾ ಸ್ವೀಕರಿಸುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವ ಯಾವುದೂ,-

(ಎ) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಮಾಡಿಕೊಳ್ಳಲಾದ ಒಂದು ಒಪ್ಪಂದದ ಅನುಸಾರ ಮಾಡಲಾದ ಯಾವುದೇ ಹಣ ಸಂದಾಯಕ್ಕೆ ;

(ಬಿ) ಯಾವೊಬ್ಬ ವ್ಯಕ್ತಿಯು ಮಾಲೀಕನಿಗೆ ಸೇರಿದ ಅಥವಾ ಅವನು ಗುತ್ತಿಗೆಗೆ, ಪಡೆದುಕೊಂಡ ಭೂಮಿಯ ಮೇಲಿನ ಯಾವುದೇ ಆವರಣದ ಸಂಪೂರ್ಣ ಅಥವಾ ಭಾಗಶಃ ನಿರ್ಮಾಣಕ್ಕೆ ಹಣವನ್ನೊದಗಿಸುವ ಉದ್ದೇಶಕ್ಕಾಗಿ, ಸಂಪೂರ್ಣ ಆವರಣವನ್ನು ಅಥವಾ ಅದರ ಭಾಗವನ್ನು ಅದು ಪೂರ್ಣಗೊಂಡ ನಂತರ ಆ ವ್ಯಕ್ತಿಯ ಅಥವಾ ಅವನ ಕುಟುಂಬದ ಸದಸ್ಯನ ಬಳಕೆಗಾಗಿ ಬಾಡಿಗೆಗೆ ನೀಡಬೇಕೆಂಬುದು ಒಪ್ಪಂದದ ಷರತ್ತುಗಳಲ್ಲಿ ಒಂದಾಗಿದ್ದರೆ, ಆ ಒಪ್ಪಂದದ ಮೇರೆಗೆ ಆವರಣದ ಮಾಲೀಕನಿಗೆ, ಅಂಥ ವ್ಯಕ್ತಿಗೆ ಬಾಡಿಗೆಗೆ ನೀಡಲಾಗುವ ಸಂಪೂರ್ಣ ಆವರಣ ಅಥವಾ ಅದರ ಭಾಗಕ್ಕೆ ಒಪ್ಪಂದ ಮಾಡಿಕೊಂಡ ಐದು ವರ್ಷಗಳ ಅವಧಿಯ ಬಾಡಿಗೆ ಮೊತ್ತವನ್ನು ಮೀರದಂಥ ಮೊಬಲಗನ್ನು ಸಂದಾಯ ಮಾಡುವುದಕ್ಕೆ;

-ಅನ್ವಯಿಸತಕ್ಕದ್ದಲ್ಲ.

**ವಿವರಣೆ.**- ಈ ಉಪ-ಪ್ರಕರಣದ (ಬಿ) ಖಂಡದ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯ ಕುಟುಂಬದ ಒಬ್ಬ ಸದಸ್ಯನೆಂದರೆ ಅವಿಭಕ್ತ ಹಿಂದೂ ಕುಟುಂಬದ ಸಂದರ್ಭದಲ್ಲಿ ಆ ವ್ಯಕ್ತಿಯ ಕುಟುಂಬದ ಯಾವೊಬ್ಬ ಸದಸ್ಯ ಮತ್ತು ಇತರ ಯಾವುದೇ ಕುಟುಂಬದ ಸಂದರ್ಭದಲ್ಲಿ, ಗಂಡ, ಹೆಂಡತಿ, ಮಗ, ಮಗಳು, ತಂದೆ, ತಾಯಿ, ಸಹೋದರ, ಸಹೋದರಿ ಅಥವಾ ಆ ವ್ಯಕ್ತಿಯ ಮೇಲೆ ಅವಲಂಬಿತನಾದ ಇತರ ಯಾರೇ ಸಂಬಂಧಿ.

**12. ನಿಯಂತ್ರಣಾಧಿಕಾರಿಯು ನಿಗದಿತ ಬಾಡಿಗೆಯನ್ನು ನಿಗದಿಪಡಿಸುವುದು, ಇತ್ಯಾದಿ.**- (1) ನಿಯಂತ್ರಣಾಧಿಕಾರಿಯು, ಯಾವುದೇ ಆವರಣಕ್ಕೆ ಸಂಬಂಧಪಟ್ಟಂತೆ,-

(i) 2ನೇ ಪ್ರಕರಣದ (3)ನೇ ಉಪ-ಪ್ರಕರಣದ (ಇ) ಖಂಡದ ಉದ್ದೇಶಕ್ಕಾಗಿ ಪರಿಭಾವಿತ ಬಾಡಿಗೆ ;

(ii) ಮೂರನೇ ಅನುಸೂಚಿಯಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಬಾಡಿಗೆ ಏರಿಕೆ ;

(iii) 7ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿಗದಿತ ಬಾಡಿಗೆ ;

(iv) 8ನೇ ಪ್ರಕರಣದ ಉಪಬಂಧಗಳಗನುಸಾರವಾಗಿ ಸಂದಾಯ ಮಾಡಬೇಕಾದ ಇತರ ಚಾರ್ಜುಗಳು; ಮತ್ತು

(v) 9ನೇ ಪ್ರಕರಣದ ಉಪಬಂಧಗಳಗನುಸಾರವಾಗಿ ಬಾಡಿಗೆ ಪರಿಷ್ಕರಣೆ

ಇವುಗಳನ್ನು ಈ ಸಂಬಂಧವಾಗಿ ನಿಯಮಿಸಲಾದ ರೀತಿಯಲ್ಲಿ ಅವನಿಗೆ ಸಲ್ಲಿಸಲಾದ ಅರ್ಜಿಯ ಮೇಲೆ ನಿಗದಿಪಡಿಸತಕ್ಕದ್ದು :

ಪರಂತು, ಈ ಅಧಿನಿಯಮವು ಪ್ರಾರಂಭವಾದ ತರುವಾಯ ಬಾಡಿಗೆದಾರಿಕೆಯನ್ನು ಮಾಡಿಕೊಂಡಿದ್ದ ಸಂದರ್ಭದಲ್ಲಿ 7ನೇ ಪ್ರಕರಣದ ಉಪಬಂಧಗಳಗನುಸಾರವಾಗಿ ನಿಗದಿತ ಬಾಡಿಗೆಯನ್ನು ನಿರ್ಧರಿಸಲು ಅರ್ಜಿ ಸಲ್ಲಿಸಲು ಮಾಲೀಕನಿಗೆ ಅನುಮತಿ ನೀಡತಕ್ಕದ್ದಲ್ಲ.

(2) 7ನೇ ಪ್ರಕರಣದ ಉದ್ದೇಶಗಳಗಾಗಿ ಯಾವುದೇ ಆವರಣದ ನಿರ್ಮಾಣ ವೆಚ್ಚವನ್ನು ಅಥವಾ ಅಂಥ ಆವರಣದಲ್ಲಿ ಇರುವ ಭೂಮಿಯ ಮಾರುಕಟ್ಟೆ ಬೆಲೆಯನ್ನು ಅಥವಾ 9ನೇ ಪ್ರಕರಣದ ಉದ್ದೇಶಕ್ಕಾಗಿ ಆವರಣದಲ್ಲಿನ ಯಾವುದೇ ಕಟ್ಟಡದ ಸುಧಾರಣೆ, ಸೇರ್ಪಡೆ ಅಥವಾ ಕಟ್ಟಡ ರಚನೆಯಲ್ಲಿನ ಬದಲಾವಣೆಗೆ ಅಥವಾ ಸ್ಥಳಾವಕಾಶದ ಇಳಿತ, ಕಡಿಮೆ ಅಥವಾ ದುಸ್ಥಿತಿಗಾಗಿ ಮಾಡಲಾಗಿರುವ ವೆಚ್ಚವನ್ನು ಲೆಕ್ಕ ಹಾಕುವಾಗ, ನಿಯಂತ್ರಣಾಧಿಕಾರಿಯು, ನಿಯಮಿಸಲಾದ ಮೌಲ್ಯ ನಿರ್ಣಯಕಾರನ ನೆರವು ಪಡೆಯಬಹುದು ಮತ್ತು ಮೌಲ್ಯ ನಿರ್ಣಯಕಾರನು ನಿಯಮಿಸಲಾದ ರೀತಿಯಲ್ಲಿ ಬಾಡಿಗೆ ನಿರ್ಧರಣಾ ಕಾರ್ಯವನ್ನು ನಡೆಸತಕ್ಕದ್ದು.

(3) ಯಾವುದೇ ಆವರಣದ ನಿಗದಿತ ಬಾಡಿಗೆಯನ್ನು ಅಥವಾ ಕಾನೂನು ಬದ್ಧವಾಗಿ ಬಾಡಿಗೆಯನ್ನು ಏರಿಸುವುದು ಅಥವಾ ಇಳಿಸುವುದನ್ನು ಅಥವಾ ಸಂದಾಯ ಮಾಡಬೇಕಾದ ಇತರ ವೆಚ್ಚಗಳನ್ನು ನಿರ್ಧರಿಸುವಾಗ, ನಿಯಂತ್ರಣಾಧಿಕಾರಿಯು, 7ನೇ ಪ್ರಕರಣ ಅಥವಾ 8ನೇ ಪ್ರಕರಣ ಅಥವಾ 9ನೇ ಪ್ರಕರಣದ ಉಪಬಂಧಗಳಗೆ ಮತ್ತು ಈ ಪ್ರಕರಣದ ಇತರ ಪರಿಸ್ಥಿತಿಗಳಗೆ ಸಂಬಂಧಪಟ್ಟಂತೆ ಅವನಿಗೆ ಸೂಕ್ತವೆಂದು ಕಂಡುಬರುವಂಥ ಮೊಬಲಗನ್ನು ನಿಗದಿಪಡಿಸಬಹುದು ಅಥವಾ ನಿರ್ಧರಿಸಬಹುದು.

(4) ಯಾವುದೇ ಆವರಣದ ಭಾಗವನ್ನು ಕಾನೂನುಬದ್ಧವಾಗಿ ಒಳಬಾಡಿಗೆಗೆ ನೀಡಲಾಗಿರುವಂಥ ಆವರಣದ ನಿಗದಿತ ಬಾಡಿಗೆಯನ್ನು ನಿಗದಿಪಡಿಸುವಾಗ, ನಿಯಂತ್ರಣಾಧಿಕಾರಿಯು ಒಳಬಾಡಿಗೆಗೆ ನೀಡಲಾಗಿರುವಂಥ ಭಾಗದ ನಿಗದಿತ ಬಾಡಿಗೆಯನ್ನು ಸಹ ನಿರ್ಧರಿಸಬಹುದು.

(5) ಯಾವುದೇ ಕಾರಣಕ್ಕಾಗಿ 7ನೇ ಪ್ರಕರಣದಡಿ ರೂಪಿಸಲಾದ ತತ್ವಗಳ ಆಧಾರದ ಮೇಲೆ ಯಾವುದೇ ಆವರಣದ ನಿಗದಿತ ಬಾಡಿಗೆ ನಿರ್ಧರಿಸಲು ಸಾಧ್ಯವಾಗದಿದ್ದಲ್ಲಿ, ಆವರಣದ ಸ್ಥಳ, ಪ್ರದೇಶ ಮತ್ತು ಪರಿಸ್ಥಿತಿಯನ್ನು ಮತ್ತು ಅದರಲ್ಲಿ ಕಲ್ಪಿಸಲಾಗಿರುವ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಆ ಪ್ರದೇಶದಲ್ಲಿ ಅಂತಹುದೇ ಅಥವಾ ಅದಕ್ಕೆ ಸ್ವಲ್ಪ ಹೋಲಿಕೆಯಿರುವಂಥ ಆವರಣವಿದ್ದರೆ ಅಂಥ ಆವರಣದ ಸಂಬಂಧದಲ್ಲಿ ಸಂದಾಯ ಮಾಡುವ ಬಾಡಿಗೆಯನ್ನು ಸಹ ಗಮನದಲ್ಲಿಟ್ಟುಕೊಂಡು ನಿಯಂತ್ರಣಾಧಿಕಾರಿಯು, ಸೂಕ್ತವೆಂದು ಭಾವಿಸುವಂಥ ಬಾಡಿಗೆಯನ್ನು ನಿಗದಿಪಡಿಸಬಹುದು.

(6) ನಿಗದಿತ ಬಾಡಿಗೆಯನ್ನು ಎಲ್ಲಾ ಸಂದರ್ಭಗಳಲ್ಲೂ ಹನ್ನೆರಡು ತಿಂಗಳ ಬಾಡಿಗೆದಾರಿಕೆಗೆ ನಿರ್ಧರಿಸತಕ್ಕದ್ದು:

ಪರಂತು, ಯಾವುದೇ ಆವರಣವನ್ನು ಹನ್ನೆರಡು ತಿಂಗಳಗಿಂತ ಕಡಿಮೆ ಅವಧಿಗೆ ಬಾಡಿಗೆಗೆ ಅಥವಾ ಮರು ಬಾಡಿಗೆಗೆ ನೀಡಲಾಗಿದ್ದರೆ, ಅಂಥ ಬಾಡಿಗೆದಾರಿಕೆಯ ನಿಗದಿತ ಬಾಡಿಗೆಯು, ಬಾಡಿಗೆದಾರಿಕೆಯ ಅವಧಿಯು ಹನ್ನೆರಡು ತಿಂಗಳುಗಳ ಅವಧಿಗೆ ಇರುವ ಅನುಪಾತದಲ್ಲಿಯೇ ವಾರ್ಷಿಕ ನಿಗದಿತ ಬಾಡಿಗೆಯಲ್ಲಿನ ಅನುಪಾತದಲ್ಲಿರತಕ್ಕದ್ದು.

(7) ಈ ಪ್ರಕರಣದಡಿಯಲ್ಲಿ ಯಾವುದೇ ಆವರಣದ ನಿಗದಿತ ಬಾಡಿಗೆಯನ್ನು ನಿರ್ಧರಿಸುವಾಗ, ನಿಯಂತ್ರಣಾಧಿಕಾರಿಯು, ಆವರಣದ ಸುಸಜ್ಜಿತವಲ್ಲದ ಸ್ಥಿತಿಯಲ್ಲಿ ನಿಗದಿತ ಬಾಡಿಗೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಮಾಲೀಕನು ಸರಬರಾಜು ಮಾಡಿದ ಯಾವುವೇ ಜೋಡಣೆಗಳು ಅಥವಾ ಪೀಠೋಪಕರಣದ ಬಗ್ಗೆ ಸಂದಾಯ ಮಾಡಬೇಕಾಗಿರುವ ಹೆಚ್ಚುವರಿ ವೆಚ್ಚವನ್ನು ಸಹ ನಿರ್ಧರಿಸಬಹುದು

ಮತ್ತು ಮಾಲೀಕನು ಅಂಥ ಹೆಚ್ಚುವರಿ ವೆಚ್ಚವನ್ನು ಬಾಡಿಗೆದಾರನಿಂದ ವಸೂಲು ಮಾಡುವುದು ಕಾನೂನು ಬದ್ಧವಾಗಿರತಕ್ಕದ್ದು.

(8) ಈ ಪ್ರಕರಣದಡಿ ಯಾವುದೇ ಆವರಣದ ಸಂಬಂಧದಲ್ಲಿ ನಿಗದಿತ ಬಾಡಿಗೆಯನ್ನು ಅಥವಾ ಬಾಡಿಗೆಯನ್ನು ಕಾನೂನು ಸಮ್ಮತವಾಗಿ ಏರಿಸುವುದನ್ನು ಅಥವಾ ತಗ್ಗಿಸುವುದನ್ನು ಅಥವಾ ಸಂದಾಯ ಮಾಡಬೇಕಾದ ಇತರ ವೆಚ್ಚಗಳನ್ನು

ನಿರ್ಧರಿಸುವಲ್ಲಿ ನಿಯಂತ್ರಣಾಧಿಕಾರಿಯು ಹಾಗೆ ನಿರ್ಧರಿಸಲಾದ ಮೊತ್ತವು ಯಾವ ದಿನಾಂಕದಿಂದ ಪರಿಣಾಮಕಾರಿಯಾಗುವುದೆಂದು ಭಾವಿಸತಕ್ಕದ್ದೋ ಅಂಥ ಒಂದು ದಿನಾಂಕವನ್ನು ನಿರ್ದಿಷ್ಟಪಡಿಸತಕ್ಕದ್ದು :

ಪರಂತು, ಯಾವ ಸಂದರ್ಭದಲ್ಲೂ ಹಾಗೆ ನಿರ್ದಿಷ್ಟಪಡಿಸಲಾದ ದಿನಾಂಕವು ನಿಗದಿತ ಬಾಡಿಗೆಯನ್ನು ಏರಿಸುವುದಕ್ಕೆ ಅಥವಾ ತಗ್ಗಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸುವ ದಿನಾಂಕಕ್ಕಿಂತ ಮುಂಚಿತವಾದ ದಿನಾಂಕವಾಗಿರತಕ್ಕದ್ದಲ್ಲ :

ಮತ್ತೂ ಪರಂತು, ಏರಿಕೆಯು ಸುಧಾರಣೆ, ಸೇರ್ಪಡೆ ಅಥವಾ ಕಟ್ಟಡ ರಚನೆಗೆ ಸಂಬಂಧಿಸಿದ ಬದಲಾವಣೆಯ ಕಾರಣದಿಂದಾದಲ್ಲಿ, ಏರಿಕೆಯು ಅಂಥ ಸುಧಾರಣೆ, ಸೇರ್ಪಡೆ ಅಥವಾ ಬದಲಾವಣೆಯು ಪೂರ್ಣಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(9) ನಿಯಂತ್ರಣಾಧಿಕಾರಿಯು ನಿಗದಿತ ಬಾಡಿಗೆಯನ್ನು ಅಥವಾ ಬಾಡಿಗೆಯನ್ನು ಕಾನೂನು ಸಮ್ಮತವಾಗಿ ಏರಿಸುವುದು ಅಥವಾ ತಗ್ಗಿಸುವುದನ್ನು ಅಥವಾ ಸಂದಾಯ ಮಾಡಬೇಕಾದ ಇತರ ವೆಚ್ಚಗಳನ್ನು ನಿಗದಿಪಡಿಸುವಾಗ, ಮಾಲೀಕನಿಗೆ ಬಾಡಿಗೆದಾರರಿಂದ ಬಾಕಿಯಿರುವ ಮೊಬಲಗನ್ನು, ತಾನು ಸೂಕ್ತವೆಂದು ಭಾವಿಸುವಂಥ ಕಂತುಗಳಲ್ಲಿ ಸಂದಾಯ ಮಾಡಲು ಆದೇಶಿಸಬಹುದು.

**13. ಮಧ್ಯಕಾಲೀನ ಬಾಡಿಗೆಯನ್ನು ಗೊತ್ತುಪಡಿಸುವುದು**.- ನಿಗದಿತ ಬಾಡಿಗೆಯನ್ನು ಗೊತ್ತುಪಡಿಸುವುದಕ್ಕಾಗಿ ಅಥವಾ ಅಂಥ ಬಾಡಿಗೆಯನ್ನು ಕಾನೂನು ಸಮ್ಮತವಾಗಿ ಏರಿಸುವುದನ್ನು ಅಥವಾ ತಗ್ಗಿಸುವುದನ್ನು ಮತ್ತು ಸಂದಾಯ ಮಾಡಬೇಕಾದ ಇತರ ವೆಚ್ಚಗಳನ್ನು ನಿರ್ಧರಿಸುವುದಕ್ಕಾಗಿ 12ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅರ್ಜಿಯ ಮೇಲಿನ ಅಂತಿಮ ತೀರ್ಮಾನವು ಇತ್ಯರ್ಥದಲ್ಲಿರುವಾಗ, ನಿಯಂತ್ರಣಾಧಿಕಾರಿಯು ಸಾಧ್ಯವಾದಷ್ಟು ಶೀಘ್ರವಾಗಿ, ಬಾಡಿಗೆದಾರನು ಮಾಲೀಕನಿಗೆ ಸಂದಾಯ ಮಾಡಬೇಕಾದ ಬಾಡಿಗೆಯ ಮತ್ತು ಇತರ ವೆಚ್ಚಗಳ ಮೊಬಲಗನ್ನು ಅಥವಾ ಕಾನೂನುಸಮ್ಮತವಾಗಿ ಏರಿಸಲಾದ ಅಂಥ ಬಾಡಿಗೆಯನ್ನು ನಿರ್ದಿಷ್ಟಪಡಿಸುವ ಆದೇಶವನ್ನು ಮಾಡತಕ್ಕದ್ದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಬಾಡಿಗೆ ಮತ್ತು ಇತರ ವೆಚ್ಚಗಳು ಅಥವಾ ಕಾನೂನು ಸಮ್ಮತವಾಗಿ ಏರಿಸಲಾದ ಬಾಡಿಗೆಯು ಯಾವ ದಿನಾಂಕದಿಂದ ಪರಿಣಾಮಕಾರಿಯಾಗುವುದೋ ಆ ದಿನಾಂಕವನ್ನು ನಿರ್ದಿಷ್ಟಪಡಿಸತಕ್ಕದ್ದು.

**14. ನಿಗದಿತ ಬಾಡಿಗೆಯನ್ನು ಗೊತ್ತುಪಡಿಸಲು ಕೋರುವ ಅರ್ಜಿಗೆ ಕಾಲಪರಿಮಿತಿ**.- ಯಾವೊಬ್ಬ ಮಾಲೀಕ ಅಥವಾ ಬಾಡಿಗೆದಾರನು ಆವರಣದ ನಿಗದಿತ ಬಾಡಿಗೆಯನ್ನು ಮತ್ತು ಇತರ ವೆಚ್ಚಗಳನ್ನು ಗೊತ್ತುಪಡಿಸಲು ಅಥವಾ ಅಂಥ ಬಾಡಿಗೆಯನ್ನು ಮತ್ತು ಇತರ ವೆಚ್ಚಗಳನ್ನು ಕಾನೂನುಸಮ್ಮತವಾಗಿ ಏರಿಸುವುದನ್ನು ಅಥವಾ ತಗ್ಗಿಸುವುದನ್ನು ನಿರ್ಣಯಿಸಲು,-

(ಎ) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಯಾವುವೇ ಆವರಣಗಳನ್ನು ಬಾಡಿಗೆಗೆ ಕೊಟ್ಟಿದ್ದು ಅಥವಾ ಬಾಡಿಗೆಯನ್ನು ಮತ್ತು ಇತರ ವೆಚ್ಚಗಳನ್ನು ಕಾನೂನುಸಮ್ಮತವಾಗಿ ಏರಿಸುವುದಕ್ಕಾಗಿ ಅಥವಾ ತಗ್ಗಿಸುವುದಕ್ಕಾಗಿ ವ್ಯಾಜ್ಯ ಕಾರಣವು ಉದ್ಭವಿಸಿದ್ದ ಸಂದರ್ಭದಲ್ಲಿ ಹಾಗೆ ಪ್ರಾರಂಭವಾದ ಎರಡು ವರ್ಷಗಳೊಳಗಾಗಿ ;

(ಬಿ) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಬಾಡಿಗೆಯನ್ನು ಮತ್ತು ಇತರ ವೆಚ್ಚಗಳನ್ನು ಕಾನೂನುಸಮ್ಮತವಾಗಿ ಏರಿಸುವುದಕ್ಕಾಗಿ ಅಥವಾ ತಗ್ಗಿಸುವುದಕ್ಕಾಗಿ ವ್ಯಾಜ್ಯ ಕಾರಣವು

ಉದ್ಭವಿಸಿದ ಸಂದರ್ಭದಲ್ಲಿ ಆ ವ್ಯಾಜ್ಯ ಕಾರಣವು ಉದ್ಭವಿಸಿದ ದಿನಾಂಕದಿಂದ ಎರಡು ವರ್ಷಗಳೊಳಗಾಗಿ ;

(ಸಿ) ಈ ಅಧಿನಿಯಮದ ಪ್ರಾರಂಭದಂದು ಅಥವಾ ತರುವಾಯ ನಿರ್ಮಾಣ ಮಾಡಲಾಗಿದ್ದು 2ನೇ ಪ್ರಕರಣದ (4)ನೇ ಉಪಪ್ರಕರಣದಿಂದಾಗಿ ಅಧಿನಿಯಮದ ಉಪಬಂಧಗಳು ಅನ್ವಯಿಸುವಂತೆ ಮಾಡಲಾಗಿರುವ ಯಾವುವೇ ಆವರಣಗಳ ಸಂದರ್ಭದಲ್ಲಿ ಹಾಗೆ ಅನ್ವಯವಾಗುವಂತೆ ಮಾಡಿದ ದಿನಾಂಕದಿಂದ ಎರಡು ವರ್ಷಗಳೊಳಗೆ

ನಿಯಂತ್ರಣಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು :

ಪರಂತು, ನಿಯಂತ್ರಣಾಧಿಕಾರಿಗೆ, ಅರ್ಜಿದಾರನಿಗೆ ಸಾಕಷ್ಟು ಕಾರಣಗಳಿಂದಾಗಿ ಸಕಾಲದಲ್ಲಿ ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗಿರಲಿಲ್ಲವೆಂಬುದಾಗಿ ಮನವರಿಕೆಯಾದರೆ, ಅವನು ಎರಡು ವರ್ಷಗಳ ಸದರಿ ಅವಧಿಯು ಮುಕ್ತಾಯವಾದ ನಂತರ ಸಹ ಅರ್ಜಿಯನ್ನು ಸ್ವೀಕರಿಸಬಹುದು.

**15. ಬಾಡಿಗೆ, ಪ್ರೀಮಿಯಂ ಇತ್ಯಾದಿಗಳ ಮರುಪಾವತಿ**: -ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಅಥವಾ ಅನಂತರ, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಬಾಡಿಗೆದಾರನು ಅಥವಾ ಅವನ ಪರವಾಗಿ ಮಾಲೀಕನಿಗೆ ಯಾವುದೇ ಮೊತ್ತ ಅಥವಾ ಯಾವುದೇ ಇತರ ಪ್ರತಿಫಲವನ್ನು ಸಂದಾಯ ಮಾಡಿದ್ದಲ್ಲಿ, ಹಾಗೆ ಸಂದಾಯ ಮಾಡಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ನಿಯಂತ್ರಣಾಧಿಕಾರಿಗೆ ಸಲ್ಲಿಸಲಾದ ಅರ್ಜಿಯ ಮೇಲೆ ಅವನು ಅಂಥ ಮೊತ್ತವನ್ನು ಅಥವಾ ಅಂಥ ಪ್ರತಿಫಲದ ಮೌಲ್ಯವನ್ನು ಬಾಡಿಗೆದಾರನಿಗೆ ಮರು ಪಾವತಿ ಮಾಡುವಂತೆ ಮಾಲೀಕನಿಗೆ ಆದೇಶ ನೀಡಬಹುದು ಅಥವಾ ಅಂಥ ಮೊತ್ತವನ್ನು ಅಥವಾ ಅಂಥ ಪ್ರತಿಫಲದ ಮೌಲ್ಯವನ್ನು ಬಾಡಿಗೆದಾರನಿಂದ ಸಂದಾಯವಾಗಬೇಕಾದ ಬಾಡಿಗೆಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಆದೇಶಿಸಬಹುದು.

**16. ಸಂದಾಯ ಮಾಡಲಾದ ಬಾಡಿಗೆ ಮತ್ತು ಇತರ ವೆಚ್ಚಗಳ ಬಗ್ಗೆ ಕೊಡಬೇಕಾಗಿರುವ ರಸೀತಿ**.- (1) ಪ್ರತಿಯೊಬ್ಬ ಬಾಡಿಗೆದಾರನೂ, ಕರಾರಿನಲ್ಲಿ ನಿಗದಿಪಡಿಸಿದ ಸಮಯದೊಳಗೆ ಅಥವಾ ಹಾಗೆ ನಿಗದಿಪಡಿಸಿದ ಸಮಯ ಯಾವುದೂ ಇಲ್ಲದಿದ್ದರೆ ಯಾವ ತಿಂಗಳಿಗೆ ಅದನ್ನು ಸಂದಾಯ ಮಾಡಬೇಕಾಗಿದೆಯೋ ಅದರ ತರುವಾಯದ ತಿಂಗಳಿನ ಹದಿನೈದನೇ ದಿನಾಂಕದೊಳಗೆ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು ಮತ್ತು ಬಾಡಿಗೆ ಅಥವಾ ಇತರ ವೆಚ್ಚಗಳನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಬಾಡಿಗೆದಾರನು ಅದನ್ನು ಸಂದಾಯ ಮಾಡಬೇಕಾಗಿ ಬಂದ ದಿನಾಂಕದಿಂದ ವರ್ಷಕ್ಕೆ ಶೇಕಡಾ ಹನ್ನೆರಡರ ದರದಲ್ಲಿ ಸರಳ ಬಡ್ಡಿಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(2) ಪ್ರತಿಯೊಬ್ಬ ಬಾಡಿಗೆದಾರನು ತನ್ನ ಮಾಲೀಕನಿಗೆ ಸಂದಾಯ ಮಾಡಬೇಕಾದ ಬಾಡಿಗೆ ಅಥವಾ ಇತರ ವೆಚ್ಚವನ್ನು ಸಂದಾಯ ಮಾಡಿದ ಬಗ್ಗೆ ಅಥವಾ ಬಾಡಿಗೆ ಅಥವಾ ಇತರ ವೆಚ್ಚಗಳನ್ನು ಮುಂಗಡವಾಗಿ ಸಂದಾಯ ಮಾಡಿದ ಬಗ್ಗೆ ಮಾಲೀಕ ಅಥವಾ ಆತನ ಅಧಿಕೃತ ಏಜೆಂಟನು ಸಹಿ ಮಾಡಿದ ಲಿಖಿತ ರಸೀತಿಯನ್ನು ಮಾಲೀಕನಿಂದ ಅಥವಾ ಆತನ ಅಧಿಕೃತ ಏಜೆಂಟನಿಂದ ಕೂಡಲೇ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು :

ಪರಂತು, ಬಾಡಿಗೆದಾರನು ತನ್ನ ಮಾಲೀಕನಿಗೆ ಬಾಡಿಗೆ ಅಥವಾ ಇತರ ವೆಚ್ಚಗಳನ್ನು ಅಂಚೆಯ ಮನಿ ಆರ್ಡರ್ ಮೂಲಕ ಕಳಿಸಿಕೊಡುವುದು ಆತನ ಇಚ್ಛೆಗೆ ಬಿಟ್ಟಿರುವುದಾಗಿರತಕ್ಕದ್ದು.

(3) ಮಾಲೀಕ ಅಥವಾ ಆತನ ಅಧಿಕೃತ ಏಜೆಂಟನು, (2)ನೇ ಉಪ-ಪ್ರಕರಣದಲ್ಲಿ ಹೇಳಲಾದ ರಸೀತಿಯನ್ನು ಬಾಡಿಗೆದಾರನಿಗೆ ಕೊಡಲು ನಿರಾಕರಿಸಿದರೆ ಅಥವಾ ಅಲಕ್ಷ್ಯ ಮಾಡಿದರೆ, ನಿಯಂತ್ರಣಾಧಿಕಾರಿಯು, ಹಾಗೆ ಸಂದಾಯ ಮಾಡಿದ ದಿನಾಂಕದಿಂದ ಎರಡು ತಿಂಗಳೊಳಗೆ ಬಾಡಿಗೆದಾರನು ಈ ಸಂಬಂಧದಲ್ಲಿ ಅರ್ಜಿಯನ್ನು ಸಲ್ಲಿಸಿದ ತರುವಾಯ ಮತ್ತು ಮಾಲೀಕನ ಅಥವಾ ಆತನ ಅಧಿಕೃತ ಏಜೆಂಟನ ವಿಚಾರಣೆ ನಡೆಸಿದ ತರುವಾಯ ನಷ್ಟ ಪರಿಹಾರ ರೂಪದಲ್ಲಿ ಬಾಡಿಗೆದಾರನು ಸಂದಾಯ ಮಾಡಿದ ಬಾಡಿಗೆ ಅಥವಾ ಇತರ ವೆಚ್ಚಗಳ ಮೊಬಲಗಿನ ಎರಡರಷ್ಟು ಮೊತ್ತವನ್ನು ಮೀರದ ಮೊತ್ತವನ್ನು ಮತ್ತು ಅರ್ಜಿಯ ವೆಚ್ಚದ ಮೊತ್ತವನ್ನು ಬಾಡಿಗೆದಾರನಿಗೆ ಸಂದಾಯ ಮಾಡಬೇಕೆಂದು ಮಾಲೀಕನಿಗೆ ಅಥವಾ ಆತನ ಅಧಿಕೃತ ಏಜೆಂಟನಿಗೆ ಆದೇಶ ನೀಡಬಹುದು ಮತ್ತು ಸಂದಾಯ ಮಾಡಲಾದ ಬಾಡಿಗೆ ಅಥವಾ ಇತರ ವೆಚ್ಚಗಳ ಸಂಬಂಧದಲ್ಲಿ ಬಾಡಿಗೆದಾರನಿಗೆ ಒಂದು ಪ್ರಮಾಣ ಪತ್ರವನ್ನು ಸಹ ನೀಡತಕ್ಕದ್ದು.

(4) ಮಾಲೀಕನು ಅಥವಾ ಆತನ ಅಧಿಕೃತ ಏಜೆಂಟನು ಆತನಿಗೆ ಸಂದಾಯವಾಗಬೇಕಾದ ಬಾಡಿಗೆ ಅಥವಾ ಇತರ ವೆಚ್ಚಗಳ ಸ್ವೀಕೃತಿಯನ್ನು ಅಂಗೀಕರಿಸಲು ನಿರಾಕರಿಸಿದಲ್ಲಿ ಅಥವಾ ಅಂಗೀಕರಿಸಲು ತಪ್ಪಿಸಿಕೊಂಡಲ್ಲಿ ಬಾಡಿಗೆದಾರನು ಮಾಲೀಕನಿಗೆ ತಾನು ಸಂದಾಯ ಮಾಡಬೇಕಾದ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಆತನ ಖಾತೆಗೆ ಜಮಾ ಮಾಡಬಹುದಾದಂಥ ಆವರಣ ಇರುವ ಸ್ಥಳದಲ್ಲಿರುವ ಬ್ಯಾಂಕಿನಲ್ಲಿನ ಆತನ ಬ್ಯಾಂಕ್ ಖಾತೆಯ ವಿವರವನ್ನು ಒದಗಿಸುವಂತೆ ಲಿಖಿತ ನೋಟೀಸಿನ ಮೂಲಕ ಮಾಲೀಕನನ್ನು ಕೇಳಬಹುದು.

(5) ಮಾಲೀಕನು ತನ್ನ ಬ್ಯಾಂಕ್ ಖಾತೆಯ ಬಗ್ಗೆ ವಿವರಗಳನ್ನು ಒದಗಿಸಿದಲ್ಲಿ ಬಾಡಿಗೆದಾರನು ಸಂದಾಯ ಮಾಡಬೇಕಾದ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಅಂಥ ಬ್ಯಾಂಕ್ ಖಾತೆಗೆ ಕಾಲ ಕಾಲಕ್ಕೆ ಜಮಾ ಮಾಡತಕ್ಕದ್ದು.

(6) ಮಾಲೀಕನು, (4)ನೇ ಉಪ-ಪ್ರಕರಣದಡಿ ಬ್ಯಾಂಕ್ ಖಾತೆಯ ಬಗ್ಗೆ ವಿವರಗಳನ್ನು ಒದಗಿಸದಿದ್ದಲ್ಲಿ, ಬಾಡಿಗೆದಾರನು ಮಾಲೀಕನಿಗೆ ಸಂದಾಯ ಮಾಡಬೇಕಾದ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಅಂಚೆಯ ವೆಚ್ಚಗಳನ್ನು ಕಳೆದುಕೊಂಡು ಕಾಲಕಾಲಕ್ಕೆ ಅಂಚೆಯ ಮನಿ ಆರ್ಡರ್ ಮೂಲಕ ಕಳುಹಿಸತಕ್ಕದ್ದು.

## ಅಧ್ಯಾಯ - III

## ಬಾಡಿಗೆಯನ್ನು ಠೇವಣಿ ಇಡುವುದು

**17. ಬಾಡಿಗೆದಾರನು ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಠೇವಣಿ ಇಡುವುದು.-** (1) ಮಾಲೀಕನು, 16ನೇ ಪ್ರಕರಣದಲ್ಲಿ ಹೇಳಲಾದ ಸಮಯದೊಳಗೆ ಮತ್ತು ರೀತಿಯಲ್ಲಿ ಬಾಡಿಗೆದಾರನು ನೀಡಿದ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಅಂಗೀಕರಿಸದಿದ್ದರೆ ಅಥವಾ ಅದರಲ್ಲಿ ಹೇಳಲಾದ ರಸೀತಿಯನ್ನು ಕೊಡಲು ನಿರಾಕರಿಸಿದರೆ ಅಥವಾ ಅಲಕ್ಷ್ಯ ಮಾಡಿದರೆ ಅಥವಾ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡಬೇಕೆಂಬ ಬಗ್ಗೆ ಪ್ರಾಮಾಣಿಕವಾದ ಸಂದೇಹವಿದ್ದರೆ, ಬಾಡಿಗೆದಾರನು ಅಂಥ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ನಿಯಮಿಸಲಾದ ರೀತಿಯಲ್ಲಿ ನಿಯಂತ್ರಣಾಧಿಕಾರಿಯಲ್ಲಿ ಠೇವಣಿ ಇಡಬಹುದು.

(2) ಠೇವಣಿಯೊಡನೆ, ಬಾಡಿಗೆದಾರನಿಂದ ಈ ಮುಂದಿನ ವಿವರಗಳನ್ನು ಒಳಗೊಂಡ ಅರ್ಜಿಯು ಇರತಕ್ಕದ್ದು, ಎಂದರೆ :-

(ಎ) ಯಾವ ಆವರಣಗಳಿಗಾಗಿ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಠೇವಣಿ ಇಡಲಾಗಿದೆಯೋ ಆ ಆವರಣವನ್ನು ಗುರುತಿಸಲು ಸಾಕಾಗುವಷ್ಟು ವಿವರಗಳು;

(ಬಿ) ಯಾವ ಅವಧಿಗಾಗಿ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಠೇವಣಿ ಇಡಲಾಗಿದೆಯೋ ಆ ಅವಧಿ;

(ಸಿ) ಮಾಲೀಕನ ಅಥವಾ ಅಂಥ ಬಾಡಿಗೆ ಮತ್ತು ಇತರ ವೆಚ್ಚಗಳಿಗೆ ಹಕ್ಕುಳ್ಳವರೆಂಬುದಾಗಿ ಕ್ಲೇಮು ಮಾಡುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಹೆಸರು ಮತ್ತು ವಿಳಾಸ ;

(□ □) ಯಾವ ಕಾರಣಗಳು ಮತ್ತು ಸನ್ನಿವೇಶಗಳಲ್ಲಿ ಬಾಡಿಗೆಯನ್ನು ಠೇವಣಿ ಇಡಲು ಅರ್ಜಿಯನ್ನು ಸಲ್ಲಿಸಲಾಗಿದೆಯೊ ಆ ಕಾರಣಗಳು ಮತ್ತು ಸನ್ನಿವೇಶಗಳು ;

(ಇ) ನಿಯಮಿಸಬಹುದಾದ ಅಂಥ ಇತರ ವಿವರಗಳು.

(3) ಬಾಡಿಗೆ ಮತ್ತು ಇತರ ವೆಚ್ಚಗಳಿಗಾಗಿ ಹಾಗೆ ಠೇವಣಿ ಇಟ್ಟ ನಂತರ ನಿಯಂತ್ರಣಾಧಿಕಾರಿಯು, ಠೇವಣಿಯ ದಿನಾಂಕದ ಹಿಂಬರಹದೊಡನೆ ಅರ್ಜಿಯ ಪ್ರತಿಯನ್ನು ನಿಯಮಿಸಲಾದ ರೀತಿಯಲ್ಲಿ ಮಾಲೀಕ ಅಥವಾ ಬಾಡಿಗೆ ಮತ್ತು ಇತರ ವೆಚ್ಚಗಳಿಗೆ ಹಕ್ಕುಳ್ಳವರೆಂದು ಕ್ಲೇಮು ಮಾಡುತ್ತಿರುವ ವ್ಯಕ್ತಿಗಳಿಗೆ ಕಳುಹಿಸತಕ್ಕದ್ದು.

(4) ಬಾಡಿಗೆ ಮತ್ತು ಇತರ ವೆಚ್ಚಗಳ ಯಾವುದೇ ಠೇವಣಿಯನ್ನು ಹಿಂದಕ್ಕೆ ಪಡೆಯಲು ಅರ್ಜಿಯನ್ನು ಸಲ್ಲಿಸಿದಲ್ಲಿ, ನಿಯಂತ್ರಣಾಧಿಕಾರಿಯು, ಠೇವಣಿ ಇಡಲಾದ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಪಡೆಯಲು ಅರ್ಜಿದಾರನು ಹಕ್ಕುಳ್ಳ ವ್ಯಕ್ತಿಯಾಗಿದ್ದಾನೆ ಎಂಬುದು ಮನದಟ್ಟಾದರೆ, ನಿಯಮಿಸಲಾದ ರೀತಿಯಲ್ಲಿ ಅವನಿಗೆ ಬಾಡಿಗೆ ಮತ್ತು ಇತರ ವೆಚ್ಚಗಳ ಮೊಬಲಗನ್ನು ಸಂದಾಯ ಮಾಡುವಂತೆ ಆದೇಶ ನೀಡತಕ್ಕದ್ದು :

ಪರಂತು, ನಿಯಂತ್ರಣಾಧಿಕಾರಿಯು, (2)ನೇ ಉಪ-ಪ್ರಕರಣದಡಿಯಲ್ಲಿ ಬಾಡಿಗೆದಾರನು ತನ್ನ ಅರ್ಜಿಯಲ್ಲಿ ಅಂಥ ಬಾಡಿಗೆ ಮತ್ತು ಇತರ ವೆಚ್ಚಗಳ ಸಂದಾಯಕ್ಕೆ ಹಕ್ಕುಳ್ಳವರಾಗಿ ಕ್ಲೇಮು ಮಾಡುವವರೆಂದು ಹೆಸರಿಸಲಾದ ಎಲ್ಲ ವ್ಯಕ್ತಿಗಳಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಡದೆ ಈ ಉಪ-ಪ್ರಕರಣದಡಿಯಲ್ಲಿ ಬಾಡಿಗೆ ಮತ್ತು ಇತರ ವೆಚ್ಚಗಳ ಯಾವುದೇ ಠೇವಣಿಯ ಸಂದಾಯಕೆ" ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ ಮತ್ತು ಅಂಥ ಆದೇಶವು ಸಕ್ಷಮ ಅಧಿಕಾರ ವ್ಯಾಪ್ತಿ ಇರುವ ನ್ಯಾಯಾಲಯದಿಂದ ನಿರ್ಧಾರವಾದ ನಂತರ ಅಂಥ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಪಡೆಯುವ ಅಂಥ ವ್ಯಕ್ತಿಗಳ ಹಕ್ಕುಗಳಿಗೆ ಪ್ರತಿಕೂಲವಾಗದಂತೆ ಇರತಕ್ಕದ್ದು.

(5) (4)ನೇ ಉಪ-ಪ್ರಕಣದಡಿಯಲ್ಲಿ, ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಆದರೆ ಠೇವಣಿಯ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಮುಕ್ತಾಯದ ನಂತರವಲ್ಲದೆ, ಮಾಲೀಕ ಅಥವಾ ಬಾಡಿಗೆ ಮತ್ತು ಇತರ ವೆಚ್ಚಗಳಿಗೆ ಹಕ್ಕುಳ್ಳವರೆಂದು ಕ್ಲೇಮು ಮಾಡುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳು, ನಿಯಂತ್ರಣಾಧಿಕಾರಿಗೆ ಬಾಡಿಗೆದಾರನು ತನ್ನ ಅರ್ಜಿಯಲ್ಲಿ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಠೇವಣಿ ಮಾಡಲು ನೀಡಿರುವ ಕಾರಣಗಳ ಮತ್ತು ಸನ್ನಿವೇಶಗಳ ವಿವರಗಳು ನಿಜವಲ್ಲವೆಂದು ದೂರು ನೀಡಿದರೆ, ಬಾಡಿಗೆದಾರನಿಗೆ ಅಹವಾಲು ಹೇಳಿಕೊಳ್ಳುವ ಒಂದು ಅವಕಾಶ ಕೊಟ್ಟ ನಂತರ ನಿಯಂತ್ರಣಾಧಿಕಾರಿಗೆ ಸದರಿ ಹೇಳಿಕೆಗಳು ವಾಸ್ತವವಾಗಿ ನಿಜವಲ್ಲವೆಂದು ಮನದಟ್ಟಾದರೆ ಅವನು ಎರಡು ತಿಂಗಳ ಬಾಡಿಗೆ

ಮತ್ತು ಇತರ ವೆಚ್ಚಗಳಿಗೆ ಸಮನಾದ ಮೊಬಲಗನ್ನು ಮೀರದ ಜುಲ್ಮಾನೆಯನ್ನು ಬಾಡಿಗೆದಾರನಿಗೆ ವಿಧಿಸಬಹುದು ಮತ್ತು ಹಾಗೆ ವಸೂಲು ಮಾಡಲಾದ ಜುಲ್ಮಾನೆಯ ಮೊತ್ತವನ್ನು ಅಥವಾ ಅದರ ಯಾವುದೇ ಭಾಗವನ್ನು ಮಾಲೀಕನಿಗೆ ನಷ್ಟ ಪರಿಹಾರವಾಗಿ ಸಂದಾಯ ಮಾಡಲು ಆದೇಶಿಸಬಹುದು.

(6) ನಿಯಂತ್ರಣಾಧಿಕಾರಿಯು, ಬಾಡಿಗೆದಾರನ ದೂರಿನ ಮೇಲೆ ಮತ್ತು ಮಾಲೀಕನಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ನಂತರ, ನಿಯಂತ್ರಣಾಧಿಕಾರಿಗೆ, ಮಾಲೀಕನು, 16ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಹೇಳಲಾದ ಸಮಯದೊಳಗೆ ಬಾಡಿಗೆಯನ್ನು ನೀಡಿದ್ದರೂ ಸಹ ಯಾವುದೇ ಸೂಕ್ತ ಕಾರಣವಿಲ್ಲದೆ ಬಾಡಿಗೆಯನ್ನು ಸ್ವೀಕರಿಸಲು ನಿರಾಕರಿಸಿದ್ದಾನೆಂದು ಮನದಟ್ಟಾದರೆ ಎರಡು ತಿಂಗಳ ಬಾಡಿಗೆಗೆ ಸಮನಾದ ಮೊಬಲಗಿನವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಮಾಲೀಕನಿಗೆ ವಿಧಿಸಬಹುದು ಮತ್ತು ಹಾಗೆ ಪಡೆದ ಜುಲ್ಮಾನೆಯ ಮೊತ್ತವನ್ನು ಅಥವಾ ಅದರ ಯಾವುದೇ ಭಾಗವನ್ನು ಬಾಡಿಗೆದಾರನಿಗೆ ನಷ್ಟ ಪರಿಹಾರವಾಗಿ ಸಂದಾಯ ಮಾಡುವಂತೆ ಆದೇಶಿಸಬಹುದು.

**18. ಠೇವಣಿ ಇಡಲು ಕಾಲಮಿತಿ ಮತ್ತು ಠೇವಣಿ ಅರ್ಜಿಯಲ್ಲಿ ತಪ್ಪು ವಿವರಗಳನ್ನು ಒದಗಿಸುವುದರ ಪರಿಣಾಮಗಳು :-** (1) 17ನೇ ಪ್ರಕರಣದಡಿ ಠೇವಣಿ ಇಡಲಾದ ಯಾವುದೇ ಬಾಡಿಗೆ ಮತ್ತು ಇತರ ವೆಚ್ಚಗಳನ್ನು, ಬಾಡಿಗೆ ಮತ್ತು ಇತರ ವೆಚ್ಚಗಳ ಸಂದಾಯಕ್ಕಾಗಿ 16ನೇ ಪ್ರಕರಣದಲ್ಲಿ ಹೇಳಲಾದ ಸಮಯದಿಂದ ಇಪ್ಪತ್ತೊಂದು ದಿನಗಳೊಳಗೆ ಠೇವಣಿಯನ್ನು ಇಡದಿದ್ದ ಹೊರತು, ಆ ಪ್ರಕರಣದಡಿಯಲ್ಲಿ ಕಾನೂನು ಸಮ್ಮತವಾಗಿ ಠೇವಣಿ ಇಡಲಾಗಿದೆ ಎಂದು ಪರಿಗಣಿಸತಕ್ಕದ್ದಲ್ಲ.

(2) ಯಾವುದೇ ಅಂಥ ಠೇವಣಿಯನ್ನು, ಬಾಡಿಗೆದಾರನು ಬಾಡಿಗೆ ಮತ್ತು ಇತರ ವೆಚ್ಚಗಳಿಗಾಗಿ ಠೇವಣಿ ಇಡುವ ತನ್ನ ಅರ್ಜಿಯಲ್ಲಿ ಉದ್ದೇಶಪೂರ್ವಕವಾಗಿ ಯಾವುದೇ ಸುಳ್ಳು ಹೇಳಿಕೆಯನ್ನು ಕೊಟ್ಟರೆ, ಬಾಡಿಗೆದಾರನಿಂದ ಆವರಣದ ಸ್ವಾಧೀನತೆಯನ್ನು ಮತ್ತೆ ಪಡೆಯುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಬೇಕಾದ ದಿನಾಂಕಕ್ಕೆ ಮುಂಚೆ ಠೇವಣಿ ಇಡಲಾದ ಮೊಬಲಗನ್ನು ಮಾಲೀಕನು ಹಿಂದಕ್ಕೆ ಪಡೆದಿದ್ದ ಹೊರತು, ಕಾನೂನು ಸಮ್ಮತ ರೀತಿಯಲ್ಲಿ ಮಾಡಲಾಗಿದೆ ಎಂದು ಪರಿಗಣಿಸತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣದಲ್ಲಿ ತಿಳಿಸಲಾದ ಸಮಯದೊಳಗೆ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಠೇವಣಿ ಇಟ್ಟಿದ್ದರೆ ಮತ್ತು (2)ನೇ ಉಪ-ಪ್ರಕರಣದಲ್ಲಿ ತಿಳಿಸಲಾದ ಕಾರಣಗಳಿಗಾಗಿ ಕಾನೂನು ಸಮ್ಮತ ಠೇವಣಿಯಾಗಿರುವುದು ನಿಂತು ಹೋಗದಿದ್ದರೆ, ಠೇವಣಿ ಇಡಲಾದ ಮೊಬಲಗನ್ನು ಕಾನೂನುಸಮ್ಮತ ರೀತಿಯಲ್ಲಿ ನೀಡಲಾಗಿದ್ದರೆ ಹೇಗೋ ಹಾಗೆ ಠೇವಣಿಯು ಮಾಲೀಕನಿಗೆ ಬಾಡಿಗೆ ಮತ್ತು ಇತರ ವೆಚ್ಚಗಳ ಸಂದಾಯವಾಗಿ ಪರಿಣಮಿಸತಕ್ಕದ್ದು.

**19. ಠೇವಣಿಯಲ್ಲಿರುವ ಬಾಡಿಗೆಯನ್ನು ಮತ್ತು ಇತರ ವೆಚ್ಚಗಳನ್ನು ಅಂಗೀಕರಿಸುವುದು ಮತ್ತು ಬಾಡಿಗೆಯ ಮುಟ್ಟುಗೋಲು ಇವುಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆಗಳು :-** (1) 17ನೇ ಪ್ರಕರಣದಡಿಯಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಆ ಪ್ರಕರಣದಡಿ ಠೇವಣಿ ಇಡಲಾದ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಹಿಂದಕ್ಕೆ ಪಡೆದುಕೊಂಡಿರುವುದು, ಸದರಿ ಪ್ರಕರಣದಡಿಯಲ್ಲಿ ಬಾಡಿಗೆ ಮತ್ತು ಇತರ ವೆಚ್ಚಗಳ್ಳು ಠೇವಣಿ ಇಡಲು ಬಾಡಿಗೆದಾರನು ತನ್ನ ಅರ್ಜಿಯಲ್ಲಿ ತಿಳಿಸಲಾದ ಬಾಡಿಗೆ ಮತ್ತು ಇತರ ವೆಚ್ಚಗಳ ದರದ ಬಗ್ಗೆ, ಬಾಡಿಗೆ ಕೊಡಲು ತಪ್ಪಿದ ಅವಧಿ, ಬಾಕಿ ಇರುವ ಮೊಬಲಗು ಅಥವಾ ಅರ್ಜಿಯಲ್ಲಿ ತಿಳಿಸಿದ ಇತರ ಯಾವುವೇ ಸಂಗತಿಗಳ ಬಗ್ಗೆ ಬಾಡಿಗೆಯನ್ನು ಹಿಂದಕ್ಕೆ ಪಡೆದುಕೊಳ್ಳುತ್ತಿರುವ ವ್ಯಕ್ತಿಯು ಮಾಡಿದ ಒಪ್ಪಿಗೆಯಾಗಿರತಕ್ಕದ್ದಲ್ಲ.

(2) ಮಾಲೀಕನು ಅಥವಾ ಅಂಥ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಪಡೆಯಲು ಹಕ್ಕುಳ್ಳ ವ್ಯಕ್ತಿ ಅಥವಾ ವ್ಯಕ್ತಿಗಳು ಹಿಂದಕ್ಕೆ ಪಡೆದುಕೊಳ್ಳದಿರುವ ಅಂಥ ಯಾವುವೇ ಠೇವಣಿ ಇಟ್ಟಿರುವ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಹಕ್ಕು ಸ್ವಾಮ್ಯದ ಬಗ್ಗೆ ಪ್ರಾಮಾಣಿಕವಾದ ವಿವಾದವಿರುವಂತಹ ಸಂದರ್ಭಗಳನ್ನು ಹೊರತುಪಡಿಸಿ, ಠೇವಣಿಯ ನೋಟೀಸನ್ನು ಕಳುಹಿಸಿದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾಗುವುದರೊಳಗೆ ಅದನ್ನು ಹಿಂದಕ್ಕೆ ಪಡೆಯದಿದ್ದರೆ, ನಿಯಂತ್ರಣಾಧಿಕಾರಿಯು ಮಾಡಿದ ಆದೇಶದ ಮೂಲಕ ಸರ್ಕಾರವು ಅದನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

(3) ಮುಟ್ಟುಗೋಲು ಹಾಕಿಕೊಳ್ಳುವ ಆದೇಶವನ್ನು ಹೊರಡಿಸುವ ಮೊದಲು ನಿಯಂತ್ರಣಾಧಿಕಾರಿಯು, ಮಾಲೀಕನಿಗೆ ಅಥವಾ ಠೇವಣಿ ಇಟ್ಟಿರುವ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ, ಅಂಥ ಮಾಲೀಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳ ಇತ್ತೀಚಿನ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆಯ ಮೂಲಕ ನೋಟೀಸು

ನೀಡತಕ್ಕದ್ದು ಮತ್ತು ತನ್ನ ಕಛೇರಿಯಲ್ಲಿ ಹಾಗೂ ಯಾವುದಾದರೂ ಸ್ಥಳೀಯ ವಾರ್ತಾ ಪತ್ರಿಕೆಯಲ್ಲಿ ಸಹ ನೋಟೀಸನ್ನು ಪ್ರಕಟಿಸತಕ್ಕದ್ದು.

## ಅಧ್ಯಾಯ - IV

### ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟರುಗಳ ನೋಂದಣಿ

**20. ಮಧ್ಯವರ್ತಿ ಅಥವಾ ಎಸ್ಟೇಟ್ ಏಜಂಟರುಗಳ ನೋಂದಣಿ.**- (1) ಮನೆಗಳ ದಲ್ಲಾಳ ಕೆಲಸದಲ್ಲಿ ತೊಡಗಿರುವ ಯಾವ ಹೆಸರಿನಿಂದಲಾದರೂ ಕರೆಯಲಾಗುವ ಪ್ರತಿಯೊಬ್ಬ ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟನು, ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ಮತ್ತು ಅಂಥ

ಶುಲ್ಕವನ್ನು ಸಂದಾಯ ಮಾಡಿ ಆ ರೀತಿಯ ಕೆಲಸಕ್ಕೆ ತಾನು ತೊಡಗಿರುವ ಪ್ರದೇಶದ ನಿಯಂತ್ರಣಾಧಿಕಾರಿಯ ಕಛೇರಿಯಲ್ಲಿ ತನ್ನ ಹೆಸರನ್ನು ನೋಂದಾಯಿಸತಕ್ಕದ್ದು.

(2) ಒಬ್ಬ ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟನು, ನಿಯಮಿಸಹುದಾದ ಅಂಥ ದರದಲ್ಲಿ ಕಮೀಷನ್ ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(3) ಪ್ರತಿಯೊಬ್ಬ ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟನು ನಿಯಮಿಸಬಹುದಾದ ಅಂಥ ಸಮಯದೊಳಗೆ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡಿ ತನ್ನ ನೋಂದಣಿಯನ್ನು ನವೀಕರಿಸಿಕೊಳ್ಳತಕ್ಕದ್ದು.

**21. ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟರುಗಳು ಮಾಹಿತಿ ಮತ್ತು ವಿವರಪಟ್ಟಿಯನ್ನು ಸಲ್ಲಿಸುವುದು.**- (1) ಯಾವುದೇ ಪ್ರದೇಶದಲ್ಲಿ ಆ ಪ್ರದೇಶಕ್ಕೆ ಈ ಅಧ್ಯಾಯ ಅನ್ವಯಿಸುವ ದಿನಾಂಕಕ್ಕಿಂತ ಮುಂಚಿತವಾಗಿ ವ್ಯವಹಾರವನ್ನು ನಡೆಸುತ್ತಿದ್ದ ಪ್ರತಿಯೊಬ್ಬ ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟನು, ಈ ಭಾಗವು ಅನ್ವಯಿಸುವ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಿಯಮಿತ ನಮೂನೆಯಲ್ಲಿ ತನ್ನ ಹೆಸರು, ವ್ಯವಹಾರ ನಡೆಸುವ ಸ್ಥಳ ಮತ್ತು ಕಾರ್ಯ ಚಟುವಟಿಕೆ ಪ್ರದೇಶವನ್ನು ತೋರಿಸುವ ಹೇಳಿಕೆಯನ್ನು ನಿಯಂತ್ರಣಾಧಿಕಾರಿಗೆ ಒಪ್ಪಿಸತಕ್ಕದ್ದು.

(2) ಪ್ರತಿಯೊಬ್ಬ ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟನು ಪ್ರತಿಯೊಂದು ಕ್ಯಾಲೆಂಡರ್ ವರ್ಷದ ಪ್ರತಿ ಮೂರು ತಿಂಗಳ ಕೊನೆಯ ದಿನಾಂಕದಿಂದ ಹತ್ತು ದಿನಗಳೊಳಗೆ ಈ ಮೂರು ತಿಂಗಳ ಅವಧಿಯಲ್ಲಿ ತಾನು ನಡೆಸಿದ ಪ್ರತಿಯೊಂದು ವ್ಯವಹಾರದ ವಿವರಗಳನ್ನು ಮತ್ತು ಪ್ರತಿಯೊಂದು ಪ್ರಕರಣದಲ್ಲಿ ತಾನು ಪಡೆದುಕೊಂಡ ದಲ್ಲಾಳ ಅಥವಾ ಕಮೀಷನ್ ಬಗ್ಗೆ ತಿಳಿಸಿ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ನಿಯಂತ್ರಣಾಧಿಕಾರಿಗೆ ವಿವರಪಟ್ಟಿಯನ್ನು ಸಲ್ಲಿಸತಕ್ಕದ್ದು.

**22. ಮಧ್ಯವರ್ತಿಯ ಹೊಣೆಗಾರಿಕೆಯ ಪರಿಮಿತಿ.**- ಯಾವನೇ ಮಧ್ಯವರ್ತಿ ಅಥವಾ ಎಸ್ಟೇಟ್ ಏಜೆಂಟನು ಆವರಣಗಳ ಬಾಡಿಗೆದಾರ ಅಥವಾ ಬಾಡಿಗೆದಾರರುಗಳಂದ ಈ ಅಧಿನಿಯಮದಡಿ ತಾನು ಪಡೆಯಲು ಹಕ್ಕುಳ್ಳ ಮೊಬಲಗನ್ನು ಮೀರಿದ ಮೊಬಲಗನ್ನು, ಯಾವುದೇ ಆವರಣದ ಸಂಬಂಧದಲ್ಲಿ ತನ್ನ ಯಜಮಾನನಿಗೆ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದಲ್ಲ.

## ಅಧ್ಯಾಯ - V

### ನಿಯಂತ್ರಣಾಧಿಕಾರಿಗಳು, ಅವರ ಅಧಿಕಾರಗಳು ಮತ್ತು ಕಾರ್ಯವಿಧಾನ

**23. ನಿಯಂತ್ರಣಾಧಿಕಾರಿಗಳ ನೇಮಕ.**- (1) ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವ ಸಂಖ್ಯೆಯ ನಿಯಂತ್ರಣಾಧಿಕಾರಿಗಳನ್ನು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ನೇಮಕ ಮಾಡಬಹುದು ಮತ್ತು ಪ್ರತಿಯೊಬ್ಬ ನಿಯಂತ್ರಣಾಧಿಕಾರಿಯು ಯಾವ ಸ್ಥಳೀಯ ಪರಿಮಿತಿಯೊಳಗೆ ಈ ಅಧಿನಿಯಮದ ಮೂಲಕ ಅಥವಾ ಅದರಡಿ ತಮಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದೋ ಅಥವಾ ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದೋ ಆ ಸ್ಥಳೀಯ ಪರಿಮಿತಿಗಳನ್ನು ನಿರ್ಧರಿಸಬಹುದು.

(2) ಒಬ್ಬ ವ್ಯಕ್ತಿಯು, ರಾಜ್ಯದ ಕಂದಾಯ ಸೇವೆಯಲ್ಲಿ,

(i) ಸಹಾಯಕ ಕಮೀಷನರನಾಗಿ ಕಡೆಯಪಕ್ಷ ಐದು ವರ್ಷಗಳವರೆಗೆ ಪದಧಾರಣ ಮಾಡಿದ್ದ ಹೊರತು ಮೊದಲನೇ ಅನುಸೂಚಿಯ ಎ ಭಾಗದಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರದೇಶದಲ್ಲಿ ;

(ii) ಹಿರಿಯ ತಹಶೀಲ್ದಾರನಾಗಿ ಕಡೆಯಪಕ್ಷ ಐದು ವರ್ಷಗಳವರೆಗೆ ಪದಧಾರಣ ಮಾಡಿದ್ದ ಹೊರತು ಮೊದಲನೇ ಅನುಸೂಚಿಯ ಬಿ ಭಾಗದಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರದೇಶದಲ್ಲಿ ; ಮತ್ತು

(iii) ತಹಶೀಲ್ದಾರನಾಗಿ ಕಡೆಯಪಕ್ಷ ಮೂರು ವರ್ಷಗಳವರೆಗೆ ಪದಧಾರಣ ಮಾಡಿದ್ದ ಹೊರತು ಯಾವುದೇ ಇತರ ಪ್ರದೇಶದಲ್ಲಿ-

ನಿಯಂತ್ರಣಾಧಿಕಾರಿಯಾಗಿ ನೇಮಕ ಹೊಂದಲು ಅರ್ಹನಾಗಿರತಕ್ಕದ್ದಲ್ಲ.

**24. ನಿಯಂತ್ರಣಾಧಿಕಾರಿಯ ಅಧಿಕಾರಗಳು**.- [1][(1)][1] ನಿಯಂತ್ರಣಾಧಿಕಾರಿಯು, 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ ಕೇಂದ್ರ ಅಧಿನಿಯಮ 5) ಅಡಿಯಲ್ಲಿ ಈ ಕೆಳಗಿನ ವಿಷಯಗಳ ಬಗ್ಗೆ ಸಿವಿಲ್ ನ್ಯಾಯಾಲಯಕ್ಕೆ ನಿಹಿತವಾಗಿರುವಂಥಹುವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ :-

(ಎ) ಅಫಿದವಿತ್ತಿನ ಮೂಲಕ ಸಂಗತಿಗಳನ್ನು ರುಜುವಾತುಪಡಿಸುವುದು ;

(ಬಿ) ಯಾವನೇ ವ್ಯಕ್ತಿಯನ್ನು ಕರೆಸುವುದು ಮತ್ತು ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣವಚನದ ಮೇಲೆ ಆತನನ್ನು ಪರೀಕ್ಷಿಸುವುದು ;

(ಸಿ) ದಸ್ತಾವೇಜುಗಳನ್ನು ಹುಡುಕಿಸುವುದು ಮತ್ತು ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದು ;

(ಡಿ) ಸ್ಥಳೀಯ ಪರಿವೀಕ್ಷಣೆಗಳಿಗಾಗಿ ಮತ್ತು ಸಾಕ್ಷಿಗಳನ್ನು ಪರೀಕ್ಷಿಸುವುದಕ್ಕಾಗಿ ಕಮೀಷನ್ನುಗಳನ್ನು ಹೊರಡಿಸುವುದು;

[1][(1-ಎ) 54ನೇ ಪ್ರಕರಣದಡಿ ಉಪಬಂಧಿಸಲಾದಂತೆ, ನಿಯಂತ್ರಣಾಧಿಕಾರಿಯು ದಂಡಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ನ್ಯಾಯ ನಿರ್ಣಯ ಅಧಿಕಾರಿಯ ಅಧಿಕಾರಗಳನ್ನು ಹೊಂದಿರತಕ್ಕದ್ದು.][1]

1. 2026ರ ಅಧಿನಿಯಮ 07ರ ಮೂಲಕ ದಿ:8.01.2026ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವಿಚಾರಣೆಯನ್ನು ನಡೆಸುವ ಅಥವಾ ಯಾವುದೇ ಕರ್ತವ್ಯವನ್ನು ನೆರವೇರಿಸುವ ಉದ್ದೇಶಗಳಿಗಾಗಿ, ನಿಯಂತ್ರಣಾಧಿಕಾರಿಯು,-

(ಎ) "ಇಪ್ಪತ್ತನಾಲ್ಕು" ಘಂಟೆಗಳಿಗೆ ಕಡಿಮೆಯಿಲ್ಲದ ಅವಧಿಯ ಲಿಖಿತ ನೋಟೀಸು ನೀಡಿದ ತರುವಾಯ, ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಯಾವುದೇ ಸಮಯದಲ್ಲಿ ಆವರಣವನ್ನು ಪ್ರವೇಶಿಸಿ ಪರಿಶೀಲಿಸಬಹುದು ಅಥವಾ ಅವನಿಗೆ ಅಧೀನನಾದ ಯಾರೇ ಅಧಿಕಾರಿಯನ್ನು ಆ ಆವರಣವನ್ನು ಪ್ರವೇಶಿಸಿ ಪರಿಶೀಲಿಸಲು ಪ್ರಾಧೀಕರಿಸಬಹುದು; ಅಥವಾ

(ಬಿ) ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಸಮಯದಲ್ಲಿ ಹಾಗೂ ಅಂಥ ಸ್ಥಳದಲ್ಲಿ ವಿಚಾರಣೆಗೆ ಸಂಬಂಧಪಡುವ ಎಲ್ಲಾ ಅಂಥ ಲೆಕ್ಕಪತ್ರಗಳು, ಪುಸ್ತಕಗಳು ಅಥವಾ ಇತರ ದಸ್ತಾವೇಜುಗಳನ್ನು ತನ್ನ ಪರಿಶೀಲನೆಗಾಗಿ ಹಾಜರುಪಡಿಸಲು ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(3) ನಿಯಂತ್ರಣಾಧಿಕಾರಿಯು, ಅವನು ಯುಕ್ತವೆಂದು ಭಾವಿಸಬಹುದಾದರೆ, ಅವನ ಮುಂದಿರುವ ವ್ಯವಹರಣೆಯಲ್ಲಿ ಆ ಸಂಬಂಧದ ನಿರ್ಧಾರಕನಾಗಿ ಅವನಿಗೆ ಸಲಹೆ ನೀಡಲು ಪರಿಶೀಲನೆಯಲ್ಲಿರುವ ವಿಷಯದ ಬಗ್ಗೆ ವಿಶೇಷ ಜ್ಞಾನವನ್ನು ಹೊಂದಿರುವ ಒಬ್ಬ ಅಥವಾ ಹೆಚ್ಚು ಜನರನ್ನು ನೇಮಕ ಮಾಡಬಹುದು.

**25. ಪ್ರಕರಣಗಳನ್ನು ತೀರ್ಮಾನ ಮಾಡಲು ಸಾಮಾನ್ಯವಾಗಿ ನಿಯಂತ್ರಣಾಧಿಕಾರಿಯು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಕಾಲಮಿತಿ**.- (1) ನಿಯಂತ್ರಣಾಧಿಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಯಾರೇ ವ್ಯಕ್ತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದಾದ ಯಾವುದೇ ಆದೇಶವನ್ನು, ಅಂಥ ವ್ಯಕ್ತಿಗೆ ನೀಡಲು ಉದ್ದೇಶಿಸಲಾಗಿರುವ ಆದೇಶದ

ವಿರುದ್ಧ ಕಾರಣಗಳನ್ನು ತಿಳಿಸಲು ಸೂಕ್ತ ಕಾಲಾವಕಾಶವನ್ನು ನೀಡದೆ ಮತ್ತು ಅವನು ಒದಗಿಸಬಹುದಾದ ಆಕ್ಷೇಪಣೆ ಯಾವುದಾದರೂ ಇದ್ದಲ್ಲಿ ಅದನ್ನು ಹಾಗೂ ಅದರ ಸಮರ್ಥನೆಗಾಗಿ ನೀಡಬಹುದಾದ ಯಾವುದೇ ಸಾಕ್ಷ್ಯವನ್ನು ನಿಯಂತ್ರಣಾಧಿಕಾರಿಯು ಪರಿಶೀಲಿಸುವವರೆಗೂ ಹೊರಡಿಸತಕ್ಕದ್ದಲ್ಲ.

(2) ನಿಯಂತ್ರಣಾಧಿಕಾರಿಯು ಅವನ ಮುಂದಿರುವ ಯಾವುದೇ ವ್ಯವಹರಣೆಯ ವಿಚಾರಣೆ ನಡೆಸುವಾಗ ನಿಯಮಿಸಬಹುದಾದ ಅಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(3) ನಿಯಂತ್ರಣಾಧಿಕಾರಿಯ ಮುಂದಿರುವ ಎಲ್ಲ ವ್ಯವಹರಣೆಗಳನ್ನು ಸಾಮಾನ್ಯವಾಗಿ ಆ ಮೊಕದ್ದಮೆಯಲ್ಲಿನ ಪ್ರತಿವಾದಿಗೆ ಹಾಜರಾಗಲು ನೀಡಿದ್ದ ಸಮನ್ಸಿನ ಪರಿಣಾಮವಾಗಿ ಪ್ರತಿವಾದಿಯು ಮೊದಲ ಬಾರಿ ಹಾಗೆ ಹಾಜರಾದ ದಿನಾಂಕದಿಂದ ಅಥವಾ ಪ್ರತಿವಾದಿಯನ್ನು ಏಕಪಕ್ಷೀಯ ಎಂಬುದಾಗಿ ಮಾಡಿದ ದಿನಾಂಕದಿಂದ ಆರು ತಿಂಗಳೊಳಗೆ ಮುಕ್ತಾಯಗೊಳಿಸತಕ್ಕದ್ದು :

ಪರಂತು, ನಿಯಂತ್ರಣಾಧಿಕಾರಿಯು ವಿಚಾರಣೆ ನಡೆಸುವ ಪ್ರತಿಯೊಂದು ದಿನವೂ, ಕಾರಣಗಳನ್ನು ದಾಖಲಿಸಿ ವಿಚಾರಣೆಯನ್ನು ಆರು ತಿಂಗಳನ್ನು ಮೀರಿಯೂ ಮುಂದಕ್ಕೆ ಹಾಕಬಹುದು.

(4) 49ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯ ಸಂದರ್ಭದಲ್ಲಿ ಅದನ್ನು ಸಲ್ಲಿಸಿದ ಏಳು ದಿನಗಳೊಳಗಾಗಿ ನಿಯಂತ್ರಣಾಧಿಕಾರಿಯು, ಆ ಅರ್ಜಿಯ ವಿಚಾರಣೆಯನ್ನು ಪ್ರಾರಂಭಿಸತಕ್ಕದ್ದು ಮತ್ತು ನಿಯಂತ್ರಣಾಧಿಕಾರಿಯು ಅಂಥ ಸಮಯವನ್ನು ಮೀರಿ ಪ್ರಕರಣವನ್ನು ಮುಂದೂಡಿದರೆ ಅದಕ್ಕೆ ಕಾರಣಗಳನ್ನು ದಾಖಲ್ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಅಂಥ ವಿಚಾರಣೆಯ ಆರಂಭದ ಮೂವತ್ತು ದಿನಗಳೊಳಗಾಗಿ ಅದನ್ನು ಇತ್ಯರ್ಥಗೊಳಿಸತಕ್ಕದ್ದು.

**26**. **ಅಪೀಲು**.– II, III ಅಥವಾ IVನೇ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ನಿಯಂತ್ರಣಧಿಕಾರಿಯು ಹೊರಡಿಸಿದ ಆದೇಶದಿಂದ ತೊಂದರೆಗೊಳಗಾದ ಯಾವೊಬ್ಬ ವ್ಯಕ್ತಿಯು ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ,-

(i) ಆದೇಶಗಳನ್ನು ಹೊರಡಿಸುವ ಅಧಿಕಾರಿಯು ಸಹಾಯಕ ಕಮೀಷನರ್ ದರ್ಜೆಗಿಂತ ಕಡಿಮೆ ದರ್ಜೆಯವನಾಗಿಲ್ಲದಿದ್ದರೆ, ಡೆಪ್ಯೂಟಿ ಕಮೀಷನರ್‌ಗೆ ; ಮತ್ತು

(ii) ಯಾವುದೇ ಇತರ ಸಂದರ್ಭದಲ್ಲಿ ಸಹಾಯಕ ಕಮೀಷನರಿಗೆ

-ಅಪೀಲು ಸಲ್ಲಿಸಬಹುದು ಮತ್ತು ಅಪೀಲು ವಿಚಾರಣಾ ಪ್ರಾಧಿಕಾರವು ಅಪೀಲಿನ ಬಗ್ಗೆ ಅದು ಯುಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸತಕ್ಕದ್ದು.

## ಅಧ್ಯಾಯ - VI

## ಬಾಡಿಗೆದಾರರನ್ನು ಹೊರಹಾಕುವುದನ್ನು ನಿಯಂತ್ರಿಸುವುದು

**27**. **ಬಾಡಿಗೆದಾರರನ್ನು ಹೊರಹಾಕುವುದರ ವಿರುದ್ಧ ರಕ್ಷಣೆ** :- (1) ಯಾವುದೇ ಇತರ ಕಾನೂನು ಅಥವಾ ಕರಾರಿನಲ್ಲಿ ಇರುವುದಕ್ಕೆ ವಿರುದ್ಧವಾಗಿ ಏನೇ ಇದ್ದರೂ (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು ಯಾವುದೇ ಆವರಣದಲ್ಲಿ ಸ್ವಾಧೀನತೆಯನ್ನು ಪುನಃ ಪಡೆಯುವಂತೆ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯವು ಬಾಡಿಗೆದಾರನ ವಿರುದ್ಧ ಮಾಲೀಕನ ಪರವಾಗಿ ಯಾವುದೇ ಆಜ್ಞೆ ಅಥವಾ ಡಿಕ್ರಿಯನ್ನು ಮಾಡತಕ್ಕದ್ದಲ್ಲ.

(2) ನ್ಯಾಯಾಲಯವು, ನಿಯಮಿಸಲಾದ ರೀತಿಯಲ್ಲಿ ತನಗೆ ಸಲ್ಲಿಸಲಾದ ಅರ್ಜಿಯ ಮೇಲೆ ಈ ಮುಂದಿನ ಒಂದು ಅಥವಾ ಹೆಚ್ಚಿನ ಕಾರಣಗಳಿಗಾಗಿ, ಎಂದರೆ :-

(ಎ) 1882ರ ಸ್ವತ್ತು ವರ್ಗಾವಣೆ ಅಧಿನಿಯಮದ (1882ರ ಕೇಂದ್ರ ಅಧಿನಿಯಮ 4) 106ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಮಾಲೀಕನು ಬಾಡಿಗೆದಾರನಿಗೆ ಕಾನೂನುಬದ್ಧವಾಗಿ ಅವನಿಂದ ವಸೂಲು ಮಾಡಬಹುದಾದ ಅಂಥ ಬಾಡಿಗೆ ಮತ್ತು ಇತರ ವೆಚ್ಚಗಳ ಬಾಕಿಗಾಗಿ ತಗಾದೆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ಬಾಡಿಗೆ ಅಥವಾ ಇತರ ವೆಚ್ಚದ ಬಾಕಿಯ ಮೊತ್ತವನ್ನು ಸಂಪೂರ್ಣವಾಗಿ ಸಂದಾಯ ಮಾಡಿಲ್ಲದಿದ್ದರೆ ಅಥವಾ ಪಾವತಿ ಮಾಡಿಲ್ಲದಿದ್ದರೆ :

ಪರಂತು, ಬಾಡಿಗೆದಾರನು ಮಾಲೀಕನಿಂದ ನೋಟೀಸು ಜಾರಿಯಾಗುವ ಈ ಪ್ರಯೋಜನವನ್ನು ಯಾವುದೇ ಆವರಣದ ಸಂಬಂಧದಲ್ಲಿ ಒಮ್ಮೆ ಹೊಂದಿದ್ದು ಆ ಆವರಣದ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಸಂದಾಯ ಮಾಡಲು ಮತ್ತೆ ತಪ್ಪಿದರೆ ಆ ಪ್ರಯೋಜನಕ್ಕೆ" ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಮತ್ತೂ ಪರಂತು, ಈ ಖಂಡದಲ್ಲಿ ನಿರ್ದಿಷ್ಟಪಡಿಸಿದ ಕಾರಣದ ಮೇಲೆ ಬಾಡಿಗೆದಾರನ ಹೊರಹಾಕುವಿಕೆಗಾಗಿನ ನಡೆವಳಿಗಳಲ್ಲಿ, ಬಾಡಿಗೆದಾರನನ್ನು ಹೊರಹಾಕುವುದಾದಲ್ಲಿ, ಬಾಡಿಗೆದಾರನು, ಆದೇಶದ ದಿನಾಂಕದಿಂದ ಒಂದು ತಿಂಗಳೊಳಗೆ ಕೊನೆಯ ಸಲ ಸಂದಾಯ ಮಾಡಿದ್ದ ದರದಲ್ಲಿ, ಯಾವ ಅವಧಿಗಾಗಿ ಕಾನೂನುಬದ್ಧವಾಗಿ ಅವನಿಂದ ಬಾಡಿಗೆಯ ಬಾಕಿ ಹಾಗೂ ಇತರ ವೆಚ್ಚಗಳು ಬರಬೇಕಾಗಿದ್ದವೋ ಆ ಅವಧಿಗಾಗಿ, ಯಾವ ತಿಂಗಳಲ್ಲಿ ಸಂದಾಯವನ್ನು ಮಾಡಲಾಗಿತ್ತೋ ಅಥವಾ ಠೇವಣಿಯನ್ನು ಇಡಲಾಗಿತ್ತೋ ಆ ತಿಂಗಳಿನ ಹಿಂದಿನ ತಿಂಗಳಿನ ಕೊನೆಯವರೆಗಿನ ತರುವಾಯದ ಅವಧಿಯೂ ಸೇರಿದಂತೆ, ಲೆಕ್ಕಹಾಕಲಾದ ಮೊಬಲಗನ್ನು ಮಾಲೀಕನಿಗೆ ಸಂದಾಯ ಮಾಡದಿದ್ದರೆ ಅಥವಾ ನ್ಯಾಯಾಲಯದಲ್ಲಿ ಠೇವಣಿ ಇಡದಿದ್ದರೆ ಆವರಣವನ್ನು ಖಾಲಿ ಮಾಡುವಂತೆ ಬಾಡಿಗೆದಾರನನ್ನು ನಿರ್ದೇಶಿಸುವ ಆದೇಶವನ್ನು ನ್ಯಾಯಾಲಯವು ಮಾಡತಕ್ಕದ್ದು.

(ಬಿ) ಬಾಡಿಗೆದಾರನು,-

(i) ಆವರಣದ ಸಂಬಂಧದಲ್ಲಿ ಸ್ಥಳೀಯ ಪ್ರದೇಶಕ್ಕೆ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ 1961ರ (1961ರ ಕರ್ನಾಟಕ ಅಧಿನಿಯಮ 22) V ನೇ ಭಾಗ ಅನ್ವಯವಾಗುವಂದು ಅಥವಾ ನಂತರ, ಆದರೆ ಅಂಥ ಸ್ಥಳೀಯ ಪ್ರದೇಶಕ್ಕೆ ಈ ಅಧ್ಯಾಯವು ಅನ್ವಯವಾಗುವ ಮೊದಲು, ಅಥವಾ

(ii) ಈ ಅಧಿನಿಯಮವು ಅನ್ವಯವಾಗುವ ದಿನಾಂಕದ ನಂತರ ಮಾಲೀಕನ ಲಿಖಿತ ಒಪ್ಪಿಗೆ ಇಲ್ಲದೆ.-

ಆವರಣದ ಪೂರ್ಣ ಅಥವಾ ಯಾವುದೇ ಭಾಗವನ್ನು ಒಳ ಬಾಡಿಗೆಗೆ ಕೊಟ್ಟಿದ್ದರೆ, ಹಸ್ತಾಂತರಿಸಿದ್ದರೆ ಅಥವಾ ಇತರ ರೀತಿಯಲ್ಲಿ ಅದರ ಸ್ವಾಧೀನತೆಯನ್ನು ಬಿಟ್ಟುಕೊಟ್ಟಿದ್ದರೆ,

(ಸಿ) ಬಾಡಿಗೆದಾರನು ಮಾಲೀಕನ ಲಿಖಿತ ಒಪ್ಪಿಗೆ ಪಡೆಯದೆ ಆವರಣವನ್ನು ಯಾವ ಉದ್ದೇಶಕ್ಕಾಗಿ ಬಾಡಿಗೆಗೆ ನೀಡಲಾಗಿತ್ತೋ ಅದರ ಹೊರತು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿದ್ದರೆ :

ಪರಂತು, ಬಾಡಿಗೆದಾರನಿಗೆ ಆವರಣದ ದುರುಪಯೋಗವನ್ನು ನಿಲ್ಲಿಸುವಂತೆ ಅಗತ್ಯಪಡಿಸುವ ನೋಟೀಸನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಅವನ ಹೆಸರಿಗೇ ನೀಡಿದ್ದು, ಬಾಡಿಗೆದಾರನು ನೋಟಿಸು ಜಾರಿಯಾದ ದಿನಾಂಕದಿಂದ ಒಂದು ತಿಂಗಳೊಳಗೆ ಅದರ ಅಗತ್ಯತೆಯನ್ನು ಪಾಲಿಸಲು ತಿರಸ್ಕರಿಸಿದ್ದ ಅಥವಾ ವಿಫಲನಾಗಿದ್ದ ಹೊರತು, ಇದರ ಆಧಾರದ ಮೇಲೆ ಯಾವುದೇ ಆವರಣದ ಸ್ವಾಧೀನತೆಯನ್ನು ಪಡೆಯುವುದಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ ಮತ್ತು ಆವರಣದ ದುರುಪಯೋಗವು ಸಾರ್ವಜನಿಕ ಉಪದ್ರವ ಸ್ವರೂಪದ್ದದೆಂದು ಅಥವಾ ಮಾಲೀಕನ ಹಿತಾಸಕ್ತಿಗೆ ಹಾನಿಯುಂಟು ಮಾಡುತ್ತದೆ ಎಂಬುದಾಗಿ ನ್ಯಾಯಾಲಯಕ್ಕೆ ಮನವರಿಕೆಯಾದ ಹೊರತು, ಅಂಥ ಪ್ರಕರಣದಲ್ಲಿ ಬಾಡಿಗೆದಾರನ ವಿರುದ್ಧ ಹೊರ ಹಾಕುವ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(□ □) ಆವರಣವನ್ನು ಬಾಡಿಗೆಗೆ ನೀಡಲಾಗಿದ್ದು ಮತ್ತು ಅದರ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದ ನಿಕಟ ಪೂರ್ವದಲ್ಲಿ,-

(i) ಬಾಡಿಗೆದಾರನಾಗಲಿ ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯನಾಗಲಿ ಆರು ತಿಂಗಳ ಅವಧಿಯವರೆಗೆ ಅದರ ಅಧಿಭೋಗದಲ್ಲಿಲ್ಲದಿದ್ದರೆ : ಅಥವಾ

(ii) ಎರಡು ವರ್ಷಗಳ ಅವಧಿಯವರೆಗೆ ಸಮಂಜಸ ಕಾರಣವಿಲ್ಲದೆ ಬಾಡಿಗೆದಾರನು ಅದರ ಅಧಿಭೋಗದಲ್ಲಿರದಿದ್ದರೆ:

ಪರಂತು, ಬಾಡಿಗೆದಾರನ ಲಿಖಿತ ಮನವಿಯ ಮೇಲೆ ಬಾಡಿಗೆದಾರನಲ್ಲದ ಅಥವಾ ಅವನ ಕುಟುಂಬದವರಲ್ಲದ ಬೇರೆ ವ್ಯಕ್ತಿಯು ಬಾಡಿಗೆದಾರಿಕೆಯ ಅವಧಿಯನ್ನು ಮೀರದ ಅವಧಿಯವರೆಗೆ ಆವರಣದ ಅಧಿಭೋಗವನ್ನು ಹೊಂದಲು ಮಾಲೀಕನು ಅನುಮತಿಸಬಹುದು.

**ವಿವರಣೆ.–** ಈ ಖಂಡದ ಮತ್ತು (ಆರ್) ಖಂಡದ ಉದ್ದೇಶಗಳಿಗಾಗಿ ''ಕುಟುಂಬ'' ಎಂದರೆ ತಂದೆ, ತಾಯಿ, ಹೆಂಡತಿ/ಗಂಡ, ಅವಲಂಬಿತ ಗಂಡುಮಕ್ಕಳು, ಹೆಣ್ಣು ಮಕ್ಕಳು ಅಥವಾ ಸಾಮಾನ್ಯವಾಗಿ ಬಾಡಿಗೆದಾರನೊಂದಿಗೆ ವಾಸಿಸುತ್ತಿರುವ ಮತ್ತು ಅವನ ಮೇಲೆ ಅವಲಂಬಿತರಾಗಿರುವ ಅಂಥ ಇತರ ಸಂಬಂಧಿಗಳು.

(ಇ) ಆವರಣವು ಮಾನವನ ವಸತಿಗೆ ಸುರಕ್ಷಿತವಾಗಿ ಅಥವಾ ಯೋಗ್ಯವಾಗಿ ಇರದಿದ್ದರೆ ಮತ್ತು ಆವರಣವನ್ನು ಖಾಲಿ ಮಾಡದೆ ಮಾಡುವುದು ಸಾಧ್ಯವಿಲ್ಲದಂಥ ದುರಸ್ತಿಗಳನ್ನು ಮಾಡಲು ಆವರಣವು ಮಾಲೀಕನಿಗೆ ಅಗತ್ಯವಾಗಿದ್ದರೆ :

ಪರಂತು, ಸಂದರ್ಭಾನುಸಾರ ಅಂಥ ದುರಸ್ತಿಗಳ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದ ನಕ್ಷೆಗಳು ಮತ್ತು ಅಂದಾಜುಗಳನ್ನು ಸರಿಯಾಗಿ ತಯಾರಿಸಲಾಗಿದೆ ಮತ್ತು ಮಾಲೀಕನು ಸದರಿ ದುರಸ್ತಿಗಳು ಅಥವಾ ಪುನರ್ ನಿರ್ಮಾಣವನ್ನು ಕೈಗೊಳ್ಳಲು ಅಗತ್ಯವಿರುವ ಹಣವನ್ನು ಹೊಂದಿದ್ದಾನೆಂದು ನ್ಯಾಯಾಲಯಕ್ಕೆ ಮನದಟ್ಟಾದ ಹೊರತು, ಈ ಖಂಡದ ಅಥವಾ (ಜಿ), (ಹೆಚ್) ಅಥವಾ (ಐ) ಖಂಡಗಳ ಅಡಿ ಸ್ವಾಧೀನತೆಯನ್ನು ಪುನಃ ಪಡೆಯುವ ಯಾವ ಆದೇಶವನ್ನು ಹೊರಡಿಸತಕ್ಕದ್ದಲ್ಲ;

ಮತ್ತು ಪರಂತು, ಮಾಲೀಕನು ಪುನರ್‌ನಿರ್ಮಾಣದ ತರುವಾಯ ಆವರಣಗಳ ಬಳಕೆಯನ್ನು ಬದಲಾಯಿಸಲು ಉದ್ದೇಶಿಸಿದ್ದರೆ, ಆಗ, ಅವನು ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕೆ ಸಲ್ಲಿಸುವ ಅರ್ಜಿಯಲ್ಲಿ ಹಾಗೆ ಅದನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಹಾಗೆ ಪುನರ್‌ನಿರ್ಮಿಸಿದ ತರುವಾಯ, ಮಾಲೀಕನು, ಅದು ಕಾನೂನಿನ ಅಡಿ ಅನ್ಯಥಾ ಅನುಮತೀಯವಾದ ಹೊರತು ಈ ಹಿಂದಿನ ಜಾಗಕ್ಕೆ ಸಮನಾದ ಕಟ್ಟಿದ ಜಾಗವನ್ನು 35ನೇ ಪ್ರಕರಣದ (1)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ ಸ್ವಂತ ಬಳಕೆಗಾಗಿ ಅಗತ್ಯವಿರುವಷ್ಟರ ಮಟ್ಟಿಗೆ ಬಳಸಿಕೊಳ್ಳತಕ್ಕದ್ದು ಮತ್ತು ಉಳಿದುದನ್ನು ಇತರ ಯಾವುದೇ ಬಳಕೆಗಾಗಿ ಬಳಸಿಕೊಳ್ಳತಕ್ಕದ್ದು,

(ಎಫ್) ಆವರಣ ಅಥವಾ ಯಾವುದೇ ಭಾಗವು ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಆದೇಶಿಸಿರುವಂತೆ ಕೂಡಲೇ ನೆಲಸಮ ಮಾಡುವ ಉದ್ದೇಶಕ್ಕಾಗಿ ಮಾಲೀಕನಿಗೆ ಅಗತ್ಯವಿದ್ದರೆ ಅಥವಾ ಯಾವುದೇ ಸುಧಾರಣಾ ಯೋಜನೆ ಅಥವಾ ಅಭಿವೃದ್ಧಿ ಯೋಜನೆಗೆ ಅನುಸಾರವಾಗಿ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಸೂಚನೆಯ ಮೇರೆಗೆ ಯಾವುದೇ ಕಟ್ಟಡ ನಿರ್ಮಾಣದ ಕೆಲಸ ನಿರ್ವಹಿಸುವುದಕ್ಕಾಗಿ ಮಾಲೀಕನಿಗೆ ಆವರಣವು ಅಗತ್ಯವಿದ್ದರೆ ಮತ್ತು ಅಂಥ ಕಟ್ಟಡ ನಿರ್ಮಾಣದ ಕೆಲಸವನ್ನು, ಆವರಣವನ್ನು ಖಾಲಿ ಮಾಡದೆ ನಡೆಸುವುದು ಸಾಧ್ಯವಿಲ್ಲದಿದ್ದರೆ,

(ಜಿ) ಆವರಣ ಅಥವಾ ಅದರ ಯಾವುದೇ ಭಾಗವು ಯಾವುದೇ ದುರಸ್ತಿ ಕಾರ್ಯ ನಡೆಸುವ ಉದ್ದೇಶಕ್ಕಾಗಿ ಮಾಲೀಕನಿಗೆ ಅಗತ್ಯವಿದ್ದು ಆವರಣವನ್ನು ಖಾಲಿ ಮಾಡದೆ ಆ ದುರಸ್ತಿ ಕಾರ್ಯ ನಡೆಸುವುದು ಸಾಧ್ಯವಿಲ್ಲದಿದ್ದರೆ,

(ಹೆಚ್) ಆವರಣದ ಮಾಳಿಗೆಯ ಮೇಲೆ ಅಥವಾ ಆವರಣಕ್ಕೆ ಹೊಂದಿಕೊಂಡಿರುವ ಭೂಮಿಯ ಮೇಲಿನ ನಿರ್ಮಾಣ ಕಾರ್ಯವನ್ನು ಒಳಗೊಂಡಂತೆ ಆವರಣದಲ್ಲಿ ಕಟ್ಟಡ ನಿರ್ಮಾಣ ಅಥವಾ ಕಟ್ಟಡದ ಮರು ನಿರ್ಮಾಣ ಅಥವಾ ಸಾಕಷ್ಟು ಸೇರ್ಪಡೆ ಅಥವಾ ಮಾರ್ಪಾಡು ಮಾಡುವ ಉದ್ದೇಶಕ್ಕಾಗಿ ಆವರಣವು ಮಾಲೀಕನಿಗೆ ಬೇಕಾಗಿರುವಲ್ಲಿ ಮತ್ತು ಅಂಥ ಕಟ್ಟಡ ನಿರ್ಮಾಣ ಅಥವಾ ಮರು ನಿರ್ಮಾಣ ಅಥವಾ ಸೇರ್ಪಡೆ ಅಥವಾ ಮಾರ್ಪಾಟನ್ನು, ಆವರಣವನ್ನು ಖಾಲಿ ಮಾಡದೆ ಕೈಗೊಳ್ಳಲು ಸಾಧ್ಯವಿಲ್ಲದಿದ್ದರೆ,

(ಐ) ಆವರಣವು ಎರಡಕ್ಕಿಂತ ಹೆಚ್ಚಲ್ಲದ ಮಹಡಿಗಳನ್ನು ಹೊಂದಿದ್ದು ಅದರ ಪುನರ್ ನಿರ್ಮಾಣ ಮಾಡುವುದಕ್ಕೆ ಅದನ್ನು ಕೂಡಲೇ ನೆಲಸಮ ಮಾಡುವ ಉದ್ದೇಶಕ್ಕಾಗಿ ಮಾಲೀಕನಿಗೆ ಅದರ ಅಗತ್ಯವಿದ್ದರೆ :

ಪರಂತು, ಅಂಥ ಆವರಣ ಅಥವಾ ಆವರಣಗಳ ಸ್ವಾಧೀನತೆಯನ್ನು (ಇ) ಖಂಡ, (ಎಫ್) ಖಂಡ, (ಜಿ) ಖಂಡ ಅಥವಾ (ಹೆಚ್) ಖಂಡದ ಅಡಿ ಪುನಃ ಪಡೆಯಲಾಗಿದ್ದು ಅದು ಕಟ್ಟಡದ ಒಂದು ಭಾಗವಾಗಿದ್ದರೆ ಹಾಗೂ ಶೇಕಡ ಎಪ್ಪತ್ತೈದಕ್ಕಿಂತ ಕಡಿಮೆ ವಿಸ್ತೀರ್ಣದಷ್ಟನ್ನು ಪುನರ್‌ನಿರ್ಮಿಸಿದ್ದರೆ, ಹಾಗೆ ಸ್ವಾಧೀನತೆಯನ್ನು ಕಳೆದುಕೊಂಡ ಬಾಡಿಗೆದಾರನು ಹಾಗೆ ಪುನಃ ನಿರ್ಮಿಸಿದ ಕಟ್ಟಡದ ಆವರಣದಲ್ಲಿ ಅವನು ಬಾಡಿಗೆದಾರನಾಗಿದ್ದ ಮೊದಲಿನ ಆವರಣಕ್ಕೆ ಸಮನಾದ ಪ್ರದೇಶಕ್ಕೆ ಹೊಸ ಬಾಡಿಗೆ ನಿಬಂಧನೆಗಳ ಪ್ರಕಾರ ಪುನಃ ಪ್ರವೇಶ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(ಜೆ) ಬಾಡಿಗೆದಾರನು, ಅವನ ಹೆಂಡತಿ, ಅವನೊಡನೆ ಸಾಮಾನ್ಯವಾಗಿ ವಾಸಿಸುವ ಅವನ ಅವಲಂಬಿತ ಮಗ ಅಥವಾ ಮಗಳು ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ ವಾಸ ಗೃಹವನ್ನು ಅಥವಾ ಸಂದರ್ಭಾನುಸಾರ ವಾಣಿಜ್ಯ ಆವರಣವನ್ನು ಕಟ್ಟಿದ್ದರೆ ಅಥವಾ ಖಾಲಿಯಿದ್ದಂತೆ ಅವುಗಳ ಸ್ವಾಧೀನತೆಯನ್ನು ಪಡೆದುಕೊಂಡಿದ್ದರೆ ಅಥವಾ ಹಂಚಿಕೆ ಮಾಡಲಾಗಿದ್ದರೆ :

ಪರಂತು, ನ್ಯಾಯಾಲಯವು ಸೂಕ್ತ ಮೊಕದ್ದಮೆಗಳಲ್ಲಿ, ಅದು ಅನುಮತಿಸಬಹುದಾದಂಥ ಅವಧಿಯೊಳಗೆ ಆವರಣವನ್ನು ಖಾಲಿ ಮಾಡಲು ಬಾಡಿಗೆದಾರನಿಗೆ ಅನುಮತಿ ನೀಡಬಹುದು, ಆದರೆ ಈ ಅವಧಿಯು ಹೊರಹಾಕುವ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಒಂದು ವರ್ಷವನ್ನು ಮೀರಿರಬಾರದು.

(ಕೆ) ಬಾಡಿಗೆದಾರನು ಮಾಲೀಕನ ಬಳಿ ಸೇವೆ ಸಲ್ಲಿಸುತ್ತಿರುವ ಅಥವಾ ನೌಕರಿ ಮಾಡುತ್ತಿರುವ ಕಾರಣದಿಂದಾಗಿ ಆವರಣವನ್ನು ಅವನಿಗೆ ನಿವಾಸವನ್ನಾಗಿ ಬಳಸಲು ಬಾಡಿಗೆಗೆ ಕೊಟ್ಟಿದ್ದರೆ, ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ ಬಾಡಿಗೆದಾರನು ಹಾಗೆ ಸೇವೆ ಅಥವಾ ನೌಕರಿಯಲ್ಲಿರುವುದು ಮುಕ್ತಾಯವಾಗಿದ್ದರೆ :

ಪರಂತು, ಬಾಡಿಗೆದಾರನು ಮಾಲೀಕನ ಬಳಿ ಸೇವೆಯಲ್ಲಿ ಅಥವಾ ನೌಕರಿಯಲ್ಲಿರುವುದು ಮುಕ್ತಾಯವಾಗಿರುವ ಬಗ್ಗೆ ಯಾವುದೇ ಪ್ರಾಮಾಣಿಕ ವಿವಾದ ಇದೆಯೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ ಈ ಕಾರಣದ ಆಧಾರದ ಮೇಲೆ ಯಾವುದೇ ಆವರಣದ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕೆ ಯಾವ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(ಎಲ್) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ ಬಾಡಿಗೆದಾರನು, ಆವರಣದ ಸ್ವರೂಪವನ್ನು ಬದಲಾಯಿಸುವಂತೆ ಅಥವಾ ಅದರ ಮೌಲ್ಯವನ್ನು ಕಡಿಮೆಗೊಳಿಸುವಂತೆ ಆವರಣಕ್ಕೆ"ಗಣನೀಯ ಹಾನಿಯನ್ನು ಅಥವಾ ಆವರಣದ ಬದಲಾವಣೆಯನ್ನು ಮಾಡಿದ್ದರೆ ಅಥವಾ ಹಾಗೆ ಮಾಡಲು ಅನುಮತಿ ನೀಡಿದ್ದರೆ;

**ವಿವರಣೆ**.– ಈ ಖಂಡದ ಉದ್ದೇಶಗಳಿಗಾಗಿ, "ಗಣನೀಯ ಹಾನಿ" ಎಂದರೆ ಆವರಣದ ಆರು ತಿಂಗಳ ಅಥವಾ ಅದಕ್ಕೂ ಹೆಚ್ಚಿನ ಬಾಡಿಗೆಗೆ ಸಮನಾದ ವೆಚ್ಚವನ್ನು ಅಥವಾ ಹಾನಿಯ ವಿಶೇಷ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಅಂಥ ಹಾನಿಯ ಬಗ್ಗೆ ದುರಸ್ತಿಗಳನ್ನು ನಿರ್ವಹಿಸುವುದಕ್ಕಾಗಿ ಗಣನೀಯವಾಗಿದೆಯೆಂಬುದಾಗಿ ಪರಿಗಣಿಸಲು ಸಮರ್ಥನೀಯವೆಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ ಅಂಥ ದುರಸ್ತಿಯ ಕಡಿಮೆ ವೆಚ್ಚವನ್ನು ಒಳಗೊಳ್ಳತಕ್ಕಂಥ ಹಾನಿ :

ಪರಂತು, ಬಾಡಿಗೆದಾರನು, ನ್ಯಾಯಾಲಯವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸ ಬಹುದಾದಂಥ ಸಮಯದೊಳಗೆ ಉಂಟಾಗಿರುವ ಹಾನಿಯ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ದುರಸ್ತಿ ನಡೆಸಿದರೆ ಅಥವಾ ನ್ಯಾಯಾಲಯವು ನಿರ್ದೇಶಿಸಬಹುದಾದಂತೆ ಪರಿಹಾರದ ರೂಪದಲ್ಲಿ ಮೊತ್ತವನ್ನು

ಸಂದಾಯ ಮಾಡಿದರೆ ಈ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಕಾರಣದ ಮೇಲೆ ಯಾವುದೇ ಆವರಣದ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕೆ ಯಾವ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(ಎಮ್) ಬಾಡಿಗೆದಾರನು ಅಥವಾ ಬಾಡಿಗೆದಾರನೊಡನೆ ವಾಸಿಸುವ ಅಥವಾ ವ್ಯವಹಾರ ನಡೆಸುತ್ತಿರುವ ಯಾವೊಬ್ಬ ವ್ಯಕ್ತಿಯು ಆವರಣಗಳ ಅಕ್ಕ ಪಕ್ಕದಲ್ಲಿ ವಾಸಿಸುತ್ತಿರುವ ವ್ಯಕ್ತಿಗೆ ಉಪದ್ರವ ಅಥವಾ ಕಿರುಕುಳ ಕೊಡುತ್ತಿರುವ ಬಗ್ಗೆ ಸಿದ್ಧ ದೋಷಿಯಾಗಿದ್ದರೆ ಅಥವಾ ನೈತಿಕ ಅಥವಾ ಕಾನೂನು ಬಾಹಿರ ಉದ್ದೇಶಕ್ಕಾಗಿ ಆವರಣಗಳನ್ನು ಬಳಸಿಕೊಳ್ಳುತ್ತಿರುವ ಬಗ್ಗೆ ಅಥವಾ ಬಳಸಿಕೊಳ್ಳುವ ಅನುಮತಿ ನೀಡಿರುವ ಬಗ್ಗೆ ಸಿದ್ಧದೋಷಿಯಾಗಿದ್ದರೆ;

(ಎನ್) ಬಾಡಿಗೆದಾರನು ಹಿಂದೆ ನೋಟೀಸನ್ನು ನೀಡಿದ್ದಾಗ್ಯೂ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಈಗ ಆವರಣವಿರುವ ಭೂಮಿಯನ್ನು ಮಾಲೀಕನಿಗೆ ಗುತ್ತಿಗೆಗೆ ನೀಡುವಾಗ ಆತನಿಗೆ ಯಾವ ಷರತ್ತನ್ನು ವಿಧಿಸಿದ್ದಿತೋ ಆ ಷರತ್ತಿಗೆ ವ್ಯತಿರಿಕ್ತವಾಗುವ ರೀತಿಯಲ್ಲಿ ಆವರಣವನ್ನು ಬಳಸಿಕೊಂಡಿದ್ದರೆ ಅಥವಾ ವ್ಯವಹರಿಸಿದ್ದರೆ :

ಪರಂತು, ಬಾಡಿಗೆದಾರನು ನ್ಯಾಯಾಲಯವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಈ ಖಂಡದಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರಗಳ ಪೈಕಿ ಯಾವುದೇ ಪ್ರಾಧಿಕಾರವು ಮಾಲೀಕನ ಮೇಲೆ ವಿಧಿಸಲಾದ ಷರತ್ತನ್ನು ಪಾಲಿಸಿದರೆ ಅಥವಾ ಅಂಥ ಷರತ್ತುಗಳನ್ನು ವಿಧಿಸಿರುವ ಪ್ರಾಧಿಕಾರಕ್ಕೆ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ಮೊಬಲಗನ್ನು ಪರಿಹಾರದ ರೂಪದಲ್ಲಿ ಸಂದಾಯ ಮಾಡಿದರೆ, ಈ ಕಾರಣದ ಮೇಲೆ ಯಾವುದೇ ಆವರಣದ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(ಒ) ಬಾಡಿಗೆದಾರನು ತನ್ನ ಉತ್ತರದಲ್ಲಿ ಮಾಲೀಕನ ಮಾಲೀಕತ್ವವನ್ನು ನಿರಾಕರಿಸಿದ್ದು, ಅದನ್ನು ರುಜುವಾತುಪಡಿಸಲು ವಿಫಲನಾದರೆ ಅಥವಾ ಅಂಥ ನಿರಾಕರಣೆಯನ್ನು ಪ್ರಾಮಾಣಿಕ ರೀತಿಯಲ್ಲಿ ಮಾಡಿಲ್ಲದಿದ್ದರೆ;

(ಪಿ) ಆವರಣದ ಅಧಿಭೋಗವನ್ನು ಹೊಂದಿರುವ ವ್ಯಕ್ತಿಯು ತಾನು ಪ್ರಾಮಾಣಿಕ ಬಾಡಿಗೆದಾರನೆಂದು ರುಜುವಾತುಪಡಿಸಲು ವಿಫಲನಾದರೆ ;

(ಕ್ಯೂ) ಬಾಡಿಗೆದಾರನು ಆವರಣವನ್ನು ಖಾಲಿ ಮಾಡಲು ಒಪ್ಪಿಕೊಂಡಿದ್ದು ಅಥವಾ ಖಾಲಿ ಮಾಡುವ ದಿನಾಂಕವನ್ನು ಬರಹದಲ್ಲಿ ಮಾಲೀಕನಿಗೆ ತಿಳಿಸಿದ್ದು ಹಾಗೆ ಒಪ್ಪಿಕೊಂಡ ಅಥವಾ ತಿಳಿಸಲಾದ ದಿನಾಂಕದಂದು ಅಥವಾ ತರುವಾಯ ಖಾಲಿ ಮಾಡದಿದ್ದರೆ ;

(ಆರ್) ಬಾಡಿಗೆಗೆ ನೀಡಲಾದ ಆವರಣಗಳು ಮಾಲೀಕನು ತನ್ನ ಅಧಿಭೋಗಕ್ಕಾಗಿ ಅಥವಾ ತಾನು ಅದರ ಒಡೆಯನಾಗಿದ್ದರೆ ತನ್ನ ಕುಟುಂಬದ ಯಾರೇ ಸದಸ್ಯನಿಗಾಗಿ ಅಥವಾ ಯಾವ ವ್ಯಕ್ತಿಯ ಲಾಭಕ್ಕಾಗಿ ಆವರಣವನ್ನು ಹೊಂದಲಾಗಿದೆಯೋ ಆ ವ್ಯಕ್ತಿಗಾಗಿ ಅವುಗಳನ್ನು ಬಾಡಿಗೆಗೆ ನೀಡಲಾದ ರೂಪದಲ್ಲಿಯೇ ಅಥವಾ ಪುನರ್ ನಿರ್ಮಾಣದ ಅಥವಾ ಪುನಃ ಕಟ್ಟಡ ಕಟ್ಟಿದ ತರುವಾಯ ಆತನಿಗೆ ಅಗತ್ಯವಾಗಿದ್ದರೆ ಮತ್ತು ಮಾಲೀಕನಿಗೆ ಅಥವಾ ಅಂಥ ವ್ಯಕ್ತಿಗೆ ಸಕಾರಣವಾಗಿ ಸೂಕ್ತವಾದ ಯಾವುದೇ ಇತರ ವಾಸಸ್ಥಳವಿಲ್ಲದಿದ್ದರೆ :

ಪರಂತು, ಮಾಲೀಕನು ವರ್ಗಾವಣೆಯ ಮೂಲಕ ಆವರಣವನ್ನು ಆರ್ಜಿಸಿರುವಲ್ಲಿ, ಅಂಥ ಆವರಣದ ಸ್ವಾಧೀನತೆಯನ್ನು ಪುನಃ ಪಡೆದುಕೊಳ್ಳುವುದಕ್ಕಾಗಿ ಯಾವ ಅರ್ಜಿಯನ್ನೂ, ಆರ್ಜನೆಯ ದಿನಾಂಕದಿಂದ ಒಂದು ವರ್ಷದ ಅವಧಿ ಮುಕ್ತಾಯವಾಗದ ಹೊರತು, ಈ ಖಂಡದಡಿ ಸಲ್ಲಿಸತಕ್ಕದ್ದಲ್ಲ :

**ವಿವರಣೆ** I.– ಈ ಖಂಡ ಮತ್ತು 28ರಿಂದ 31ರ ವರೆಗಿನ ಪ್ರಕರಣಗಳ ಉದ್ದೇಶಗಳಿಗಾಗಿ,-

(i) ಮಾಲೀಕನು ಅಫಿದಾವಿತ್ತಿನಿಂದ ಸಮರ್ಥಿಸಲ್ಪಟ್ಟ ತನ್ನ ಅರ್ಜಿಯಲ್ಲಿ ಆವರಣವು ಸ್ವತಃ ತನ್ನ ಅಧಿಭೋಗಕ್ಕಾಗಿ ತನಗೆ ಅಥವಾ ತನ್ನನ್ನು ಅವಲಂಬಿಸಿರುವ ತನ್ನ ಕುಟುಂಬದ ಯಾರೇ ಸದಸ್ಯನಿಗಾಗಿ ಅಗತ್ಯವಾಗಿದೆಯೆಂದು ಅರಿಕೆ ಮಾಡಿಕೊಂಡಿರುವಾಗ, ನ್ಯಾಯಾಲಯವು ಆವರಣವು ಹಾಗೆ ಅಗತ್ಯವಾಗಿದೆಯೆಂದು ಭಾವಿಸತಕ್ಕದ್ದು ;

(ii) ಒಂದು ನಿರ್ದಿಷ್ಟ ಉಪಯೋಗಕ್ಕಾಗಿ ಬಾಡಿಗೆಗೆ ನೀಡಲಾದ ಆವರಣವನ್ನು ಬೇರೆ ಉಪಯೋಗಕ್ಕೆ ಬಳಸುವುದನ್ನು ಕಾನೂನಿನ ಮೇರೆಗೆ ಅನುಮತಿಸಬಹುದಾಗಿದ್ದರೆ, ಮಾಲೀಕನು ಅಂಥ ಉಪಯೋಗವನ್ನು ಅಗತ್ಯಪಡಿಸಬಹುದು.

**ವಿವರಣೆ II**.- ಈ ಖಂಡದ ಮತ್ತು 28ರಿಂದ 31ರವರೆಗಿನ ಪ್ರಕರಣಗಳ ಉದ್ದೇಶಗಳಿಗಾಗಿ, ಕಟ್ಟಡದ ಯಾವುದೇ ಭಾಗದಲ್ಲಿ ಮಾಲೀಕನು ಬಾಡಿಗೆಗೆ ನೀಡಲಾದ ಯಾವುದೇ ಆವರಣವು ಕಟ್ಟಡದ ಒಂದು ಭಾಗವಾಗಿದ್ದು, ಇದು ಆತನ ಅಧಿಭೋಗದಲ್ಲಿರುವುದು, ಅಂಥ ಆವರಣದ ಸ್ವಾಧೀನತೆಯನ್ನು ಪುನಃ ಪಡೆದುಕೊಳ್ಳುವುದಕ್ಕೆ ಆತನನ್ನು ಹಕ್ಕುಳ್ಳವನಲ್ಲವೆಂಬಂತೆ ಮಾಡತಕ್ಕದ್ದಲ್ಲ.

**ವಿವರಣೆ III**.-ಈ ಖಂಡದ ಮತ್ತು 28ರಿಂದ 31ರವರೆಗಿನ ಪ್ರಕರಣಗಳ ಉದ್ದೇಶಗಳಿಗಾಗಿ, "ಆವರಣದ ಮಾಲೀಕ" ಎಂಬುದರಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಥವಾ ಇತರ ಯಾವುದೇ ಸ್ಥಳೀಯ ಪ್ರಾಧಿಕಾರದಿಂದ ಕಂತು ಖರೀದಿ, ಗುತ್ತಿಗೆ ಅಥವಾ ಒಳ ಗುತ್ತಿಗೆಯ ಒಪ್ಪಂದ ಮೂಲಕ ಅಂಥ ಕಂತು ಖರೀದಿದಾರನಿಗೆ, ಗುತ್ತಿಗೆದಾರನಿಗೆ ಅಥವಾ ಸಂದರ್ಭಾನುಸಾರವಾಗಿ ಒಳಗುತ್ತಿಗೆದಾರನಿಗೆ ಸಂಪೂರ್ಣ ಮಾಲೀಕತ್ವದ ಹಕ್ಕುಗಳು ಪ್ರಾಪ್ತವಾಗುವುದಕ್ಕೆ ಮೊದಲೇ ಅಂಥ ಆವರಣಗಳನ್ನು ಹಂಚಿಕೆಯಾಗಿ ಪಡೆದಂಥ ವ್ಯಕ್ತಿಗಳೂ ಸೇರುತ್ತಾರೆ.

(ಎಸ್) ಮಾಲೀಕನು, ಯಾವುದೇ ಸಾರ್ವಜನಿಕ ಧರ್ಮಾದಾಯ ನ್ಯಾಸದ ನ್ಯಾಸಧಾರಿಯಾಗಿದ್ದು, ನ್ಯಾಸದ ಉದ್ದೇಶಕ್ಕಾಗಿ ಅಧಿಭೋಗಕ್ಕಾಗಿ ಆವರಣವು ಆವಶ್ಯಕವಾಗಿದ್ದರೆ,

- ಆವರಣದ ಸ್ವಾಧೀನತೆಯನ್ನು ಪುನಃ ಪಡೆಯಲು ಆದೇಶ ನೀಡಬಹುದು.

(3) (2)ನೇ ಉಪ-ಪ್ರಕರಣದ (ಇ), (ಎಫ್), (ಜಿ), (ಎಚ್) ಅಥವಾ (ಆರ್) ಖಂಡ ಅಥವಾ 28ರಿಂದ 31ರವರೆಗಿನ ಪ್ರಕರಣಗಳಡಿ ಹೊರ ಹಾಕುವುದಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹರಣೆಯಲ್ಲಿ ಮಾಲೀಕನು ಒಪ್ಪಿಕೊಳ್ಳಬಹುದಾದಲ್ಲಿ, ಆವರಣದ ಒಂದು ಭಾಗದಿಂದ ಮಾತ್ರ ಹೊರಹಾಕುವುದಕ್ಕೆ, ನ್ಯಾಯಾಲಯವು ಅನುಮತಿಸಬಹುದು :

ಪರಂತು, ಹಾಗೆ ಭಾಗಶಃ ಹೊರಹಾಕುವ ಸಂದರ್ಭದಲ್ಲಿ ಬಾಡಿಗೆದಾರನು ಸಂದಾಯ ಮಾಡತಕ್ಕ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಖಾಲಿ ಮಾಡಲಾದ ಭಾಗಕ್ಕೆ ಸಮವಾಗಿ ಕಡಿಮೆ ಮಾಡತಕ್ಕದ್ದು.

(4) (2)ನೇ ಉಪ-ಪ್ರಕರಣದ ಅಡಿಯ ವ್ಯವಹರಣೆಯಲ್ಲಿ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕಾಗಿ ಮಾಡಲಾದ ಯಾವುದೇ ಆದೇಶವೂ, ಈ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಮಾಲೀಕನಿಗೆ ಒಳ ಬಾಡಿಗೆದಾರಿಕೆಯ ನೋಟೀಸನ್ನು ನೀಡಿರುವ 33ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಒಳ ಬಾಡಿಗೆದಾರನನ್ನು ವ್ಯವಹರಣೆಯಲ್ಲಿ ಪಕ್ಷಕಾರನನ್ನಾಗಿ ಮಾಡಿದ್ದ ಮತ್ತು ಹೊರ ಹಾಕುವ ಆದೇಶವನ್ನು ಅವನ ಮೇಲೆ ಬಂಧನಕಾರಿಯಾಗಿ ಮಾಡಿದ್ದ ಹೊರತು, ಬಂಧನಕಾರಿಯಾಗತಕ್ಕದ್ದಲ್ಲ.

**28. ಆವರಣದ ತಕ್ಷಣದ ಸ್ವಾಧೀನತೆಯನ್ನು ಪಡೆಯುವ ಹಕ್ಕು ಕೆಲವು ವ್ಯಕ್ತಿಗಳಿಗೆ ಪ್ರಾಪ್ತವಾಗುವುದು.**- (1)ಮಾಲೀಕನು, ಅವನಿಗೆ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದಿಂದ ಹಂಚಿಕೆಯಾದ ಯಾವುದೇ ಆವರಣದ ಅಧಿಭೋಗದಲ್ಲಿದ್ದು, ಆ ಸರ್ಕಾರ ಅಥವಾ ಪ್ರಾಧಿಕಾರವು ಹೊರಡಿಸಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಥವಾ ಅದಕ್ಕೆ ಅನುಸಾರವಾಗಿ, ಸಾಮಾನ್ಯವಾಗಿ ಅವನು ಯಾವ ಸ್ಥಳೀಯ ಪ್ರದೇಶದಲ್ಲಿ ವಾಸಿಸುತ್ತಾನೋ ಅಥವಾ ವ್ಯವಹಾರ ನಡೆಸುತ್ತಾನೋ ಆ ಸ್ಥಳೀಯ ಪ್ರದೇಶದಲ್ಲಿ ತನ್ನ ಸ್ವಂತ ಹೆಸರಿನಲ್ಲಿ ಅಥವಾ ತನ್ನ ಹೆಂಡತಿಯ ಅಥವಾ ಅವಲಂಬಿತ ಮಗುವಿನ ಹೆಸರಿನಲ್ಲಿ ಸ್ವಂತ ಆವರಣವನ್ನು ಹೊಂದಿದ್ದಾನೆಂಬ ಕಾರಣದಿಂದಾಗಿ ಖಾಲಿ ಮಾಡತಕ್ಕದ್ದೆಂದು ಅಥವಾ ಅದಕ್ಕೆ ತಪ್ಪಿದಲ್ಲಿ, ಕೆಲವೊಂದು ಬಾಧ್ಯತೆಗಳಿಗೆ ಗುರಿಯಾಗತಕ್ಕದ್ದೆಂದು ಅಗತ್ಯಪಡಿಸಿದಲ್ಲಿ, ಅಂಥ ಆದೇಶವನ್ನು ಹೊರಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಅಂತಹ ಮಾಲೀಕನಿಗೆ, ಈ ಅಧಿನಿಯಮದ ಬೇರೆಡೆಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಕರಾರಿನಲ್ಲಿ (ವ್ಯಕ್ತವಾಗಿರಲಿ ಅಥವಾ ಇಂಗಿತವಾಗಿರಲಿ), ರೂಢಿ ಅಥವಾ ಆಚರಣೆಯಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಅವನು ಬಾಡಿಗೆಗೆ ನೀಡಿದ್ದ ಯಾವುದೇ ಆವರಣದ ತಕ್ಷಣದ ಸ್ವಾಧೀನತೆಯನ್ನು ಪುನಃ ಪಡೆಯುವ ಹಕ್ಕು ಅವನಿಗೆ ಪ್ರಾಪ್ತವಾಗತಕ್ಕದ್ದು :

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಮಾಲೀಕನು ಹಾಗೆ ಸಾಮಾನ್ಯವಾಗಿ ವಾಸ ಮಾಡುವ ಅಥವಾ ವ್ಯವಹಾರ ನಡೆಸುವ ಸ್ಥಳೀಯ ಪ್ರದೇಶದಲ್ಲಿ ಎರಡು ಅಥವಾ ಹೆಚ್ಚಿನ ಆವರಣಗಳನ್ನು ತನ್ನ ಸ್ವಂತ ಹೆಸರಿನಲ್ಲಾಗಲಿ ಅಥವಾ ತನ್ನ ಹೆಂಡತಿಯ ಅಥವಾ ಅವಲಂಬಿತ ಮಗುವಿನ ಹೆಸರಿನಲ್ಲಾಗಲಿ ಹೊಂದಿದ್ದರೆ, ಆ ಮಾಲೀಕನಿಗೆ ಒಂದಕ್ಕಿಂತ ಹೆಚ್ಚಿನ ಆವರಣಗಳ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕೆ ಹಕ್ಕು ನೀಡುವುದೆಂದು ಅರ್ಥೈಸತಕ್ಕದ್ದಲ್ಲ ಮತ್ತು ಅವನು ಯಾವ ಆವರಣದ ಸ್ವಾಧೀನತೆಯನ್ನು ಪುನಃ ಪಡೆಯಲು ಉದ್ದೇಶಿಸಿದ್ದಾನೆಂಬುದನ್ನು ಸೂಚಿಸುವುದು ಅಂಥ ಮಾಲೀಕನಿಗೆ ನ್ಯಾಯ ಸಮ್ಮತವಾಗಿರತಕ್ಕದ್ದು.

**ವಿವರಣೆ :-** ಈ ಪ್ರಕರಣದ ಮತ್ತು 29, 30 ಮತ್ತು 31ನೇ ಪ್ರಕರಣದ ಉದ್ದೇಶಕ್ಕಾಗಿ "ತಕ್ಷಣದ ಸ್ವಾಧೀನತೆ" ಎಂದರೆ ಹೊರಹಾಕುವ ಆದೇಶದ ದಿನಾಂಕದಿಂದ ಅರವತ್ತು ದಿನಗಳ ಅವಧಿಯು ಮುಕ್ತಾಯದ ನಂತರ ಪುನಃ ಪಡೆದುಕೊಳ್ಳುವ ಸ್ವಾಧೀನತೆ.

(2) ಮಾಲೀಕನು, (1)ನೇ ಉಪ ಪ್ರಕರಣದಿಂದ ಅಥವಾ 27, 29, 30 ಅಥವಾ 31ನೇ ಪ್ರಕರಣದಿಂದ ತನಗೆ ಪ್ರದತ್ತವಾದ ವಸೂಲಿಯ ಅಧಿಕಾರವನ್ನು ಚಲಾಯಿಸಿರುವಲ್ಲಿ ಮತ್ತು

(ಎ) ಬಾಡಿಗೆದಾರನಿಂದ ಮುಂಗಡವಾಗಿ ಯಾವುದೇ ಬಾಡಿಗೆಯನ್ನು ಪಡೆದಿದ್ದಲ್ಲಿ, ಅವನು ಆವರಣದ ಸ್ವಾಧೀನತೆಯನ್ನು ಪುನಃ ಪಡೆದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಗುತ್ತಿಗೆಯ ಮುಕ್ತಾಯವಾಗದ ಅವಧಿಗೆ ಸಂದಾಯವಾಗಬೇಕಾದ ಬಾಡಿಗೆಯ ಮೊತ್ತದಷ್ಟನ್ನು ಬಾಡಿಗೆದಾರನಿಗೆ ಮರು ಪಾವತಿ ಮಾಡತಕ್ಕದ್ದು ;

(ಬಿ) ಇತರ ಯಾವುದೇ ಸಂದಾಯವನ್ನು ಪಡೆದಿದ್ದಲ್ಲಿ ಮೇಲೆ ಹೇಳಿದ ಅವಧಿಯೊಳಗೆ ಕರಾರು, ಒಪ್ಪಂದ ಅಥವಾ ಗುತ್ತಿಗೆಯ ಬಾಕಿ ಉಳಿದ ಅವಧಿಯು ಕರಾರು, ಒಪ್ಪಂದ ಅಥವಾ ಗುತ್ತಿಗೆಯ ಪೂರ್ಣ ಅವಧಿಗೆ ಯಾವ ಅನುಪಾತದಲ್ಲಿಯೋ ಅದೇ ಅನುಪಾತದಲ್ಲಿ ಮೊಬಲಗನ್ನು ಸ್ವೀಕರಿಸಿದ ಒಟ್ಟು ಮೊತ್ತದಲ್ಲಿ ಬಾಡಿಗೆದಾರನಿಗೆ ಮರುಪಾವತಿ ಮಾಡತಕ್ಕದ್ದು :

ಪರಂತು, ಮೇಲೆ ಹೇಳಿದಂತೆ ಮರುಪಾವತಿ ಮಾಡುವಲ್ಲಿ ಯಾವುದೇ ಲೋಪ ಉಂಟಾದಲ್ಲಿ, ಮಾಲೀಕನು, ತಾನು ಮರುಪಾವತಿ ಮಾಡಲು ಬಿಟ್ಟುಬಿಟ್ಟ ಅಥವಾ ವಿಫಲನಾದ ಮೊತ್ತಕ್ಕೆ ವಾರ್ಷಿಕ ಶೇ. ಹನ್ನೆರಡರಂತೆ ಸರಳ ಬಡ್ಡಿಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

**29. ಸಶಸ್ತ್ರ ಪಡೆಗಳು, ಇತ್ಯಾದಿಗಳ ಸದಸ್ಯರಿಗೆ ಆವರಣದ ತಕ್ಷಣದ ಸ್ವಾಧೀನತೆಯನ್ನು ಪುನಃ ಪಡೆಯುವ ಹಕ್ಕು ಪ್ರಾಪ್ತವಾಗುವುದು.**- (1) ಮಾಲೀಕನು,-

(ಎ) ಯಾವುವೇ ಸಶಸ್ತ್ರ ಪಡೆಗಳ ಸೇವೆಗಳಿಂದ ಬಿಡುಗಡೆ ಹೊಂದಿದ ಅಥವಾ ನಿವೃತ್ತನಾದ ವ್ಯಕ್ತಿಯಾಗಿದ್ದು ಮತ್ತು ಅವನು / ಅವನ ಹೆಂಡತಿ ಅಥವಾ ಅವನ ಅವಲಂಬಿತ ಮಗ ಅಥವಾ ಮಗಳು ಬಾಡಿಗೆಗೆ ನೀಡಿದ್ದ ಆವರಣವು ಅವನ ಸ್ವಂತ ಉಪಯೋಗಕ್ಕಾಗಿ ಅಗತ್ಯವಿದ್ದಲ್ಲಿ ; ಅಥವಾ

(ಬಿ) ಸಶಸ್ತ್ರ ಪಡೆಗಳ ಸೇವೆಯಲ್ಲಿದ್ದು ಯುದ್ಧ ಕಾರ್ಯಾಚರಣೆಯಲ್ಲಿ ಮರಣ ಹೊಂದಿದ ಯಾವೊಬ್ಬ ಸದಸ್ಯನು ಅವಲಂಬಿತನಾಗಿದ್ದರೆ ಮತ್ತು ಅಂಥ ಸದಸ್ಯನು ಬಾಡಿಗೆಗೆ ಕೊಟ್ಟಿದ್ದ ಆವರಣವು ಅವನ ಕುಟುಂಬದವರ ಉಪಯೋಗಕ್ಕಾಗಿ ಅಗತ್ಯವಿದ್ದಲ್ಲಿ ;

ಅಂಥ ವ್ಯಕ್ತಿ ಅಥವಾ ಸಂದರ್ಭಾನುಸಾರ ಅವನ ಹೆಂಡತಿ ಅಥವಾ ಅವಲಂಬಿತ ಮಗ ಅಥವಾ ಮಗಳು ತಾನು ಅಂಥ ಸಶಸ್ತ್ರ ಪಡೆಗಳಿಂದ ಬಿಡುಗಡೆ ಹೊಂದಿದ ಅಥವಾ ನಿವೃತ್ತಿ ಹೊಂದಿದ ದಿನಾಂಕದಿಂದ ಅಥವಾ ಸಂದರ್ಭಾನುಸಾರ ಅಂಥ ವ್ಯಕ್ತಿಯ ಮರಣದ ದಿನಾಂಕದಿಂದ ಒಂದು ವರ್ಷದೊಳಗೆ ಅಥವಾ ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ, ಇದರಲ್ಲಿ ಯಾವುದು ಅನಂತರವೋ ಅಂಥ ಅವಧಿಯೊಳಗೆ ಅಂಥ ಆವರಣದ ತಕ್ಷಣದ ಸ್ವಾಧೀನತೆಯನ್ನು ಪಡೆಯುವುದಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ಮಾಲೀಕನು, ಯಾವುದೇ ಸಶಸ್ತ್ರ ಪಡೆಗೆ ಸೇರಿದವನಾಗಿದ್ದು, ತನ್ನ ನಿವೃತ್ತಿಯ ದಿನಾಂಕಕ್ಕೆ ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿಯನ್ನು ಹೊಂದಿದ್ದು ಅವನು ಅಥವಾ ಅವನ ಹೆಂಡತಿ ಅಥವಾ ಅವಲಂಬಿತ ಮಗ ಅಥವಾ ಮಗಳು ಬಾಡಿಗೆಗೆ ನೀಡಿದ್ದ ಆವರಣವು ಅವನು ನಿವೃತ್ತಿ ಹೊಂದಿದ ನಂತರ ಸ್ವಂತ ಉಪಯೋಗಕ್ಕೆ ಅಗತ್ಯವಾಗಿದ್ದಲ್ಲಿ, ಅವನು ತನ್ನ ನಿವೃತ್ತಿಯ ದಿನಾಂಕಕ್ಕಿಂತಲೂ ಮೊದಲಿನ ಒಂದು ವರ್ಷದ ಅವಧಿಯೊಳಗೆ ಯಾವುದೇ ಸಮಯದಲ್ಲಿ ಅಂಥ ಆವರಣದ ತಕ್ಷಣದ ಸ್ವಾಧೀನತೆ ಪಡೆಯುವುದಕ್ಕಾಗಿ ನ್ಯಾಯಾಲಯಕ್ಕೆ "ಅರ್ಜಿ ಸಲ್ಲಿಸಬಹುದು.

(3) (1)ನೇ ಉಪ-ಪ್ರಕರಣದಲ್ಲಿ ಅಥವಾ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ಮಾಲೀಕನು, ಒಂದಕ್ಕಿಂತಲೂ ಹೆಚ್ಚಿನ ಆವರಣಗಳನ್ನು ಬಾಡಿಗೆಗೆ ಕೊಟ್ಟಿದ್ದಲ್ಲಿ ಅವನು ಅಥವಾ ಅವನ ಹೆಂಡತಿ, ಅವಲಂಬಿತ ಮಗ ಅಥವಾ ಮಗಳು ಆಯ್ಕೆ ಮಾಡುವ ಒಂದು ಆವರಣಕ್ಕೆ ಮಾತ್ರವೇ ಸಂಬಂಧಿಸಿದಂತೆ ಆ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರತಕ್ಕದ್ದು.

**ವಿವರಣೆ**.- ಈ ಪ್ರಕರಣದ ಉದ್ದೇಶಕ್ಕಾಗಿ ಸಶಸ್ತ್ರ ಪಡೆಗಳು ಎಂದರೆ, ಸಂಸತ್ತಿನ ಒಂದು ಅಧಿನಿಯಮದ ಅಡಿಯಲ್ಲಿ ರಚಿತವಾದ ಒಕ್ಕೂಟದ ಸಶಸ್ತ್ರ ಪಡೆ ಮತ್ತು ಇದು 1963ರ ಕರ್ನಾಟಕ ಪೊಲೀಸು ಅಧಿನಿಯಮದ ಅಡಿಯಲ್ಲಿ ರಚಿತವಾದ ಪೊಲೀಸು ಪಡೆಯನ್ನು ಒಳಗೊಳ್ಳುತ್ತದೆ.

**30. ರಾಜ್ಯ ಅಥವಾ ಕೇಂದ್ರ ಸರ್ಕಾರದ ನೌಕರರಿಗೆ ಆವರಣದ ತಕ್ಷಣದ ಸ್ವಾಧೀನತೆಯನ್ನು ಪಡೆಯುವ ಹಕ್ಕು ಪ್ರಾಪ್ತವಾಗುವುದು**.- (1) ಮಾಲೀಕನು ರಾಜ್ಯ ಅಥವಾ ಕೇಂದ್ರ ಸರ್ಕಾರದ ನಿವೃತ್ತ ನೌಕರನಾಗಿದ್ದು ಮತ್ತು ಅವನು / ಅವನ ಹೆಂಡತಿ ಅಥವಾ ಅವಲಂಬಿತ ಮಗ ಅಥವಾ ಮಗಳು ಬಾಡಿಗೆಗೆ ನೀಡಿದ್ದ ಆವರಣವು ಅವನ ಸ್ವಂತ ಉಪಯೋಗಕ್ಕೆ ಅಗತ್ಯವಾಗಿದ್ದರೆ ಅಂಥ ನೌಕರನು ಅವನ ನಿವೃತ್ತಿ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಅಥವಾ ಈ ಅಧಿನಿಯಮದ ಪ್ರಾರಂಭದ ಒಂದು ವರ್ಷದ ಅವಧಿಯೊಳಗೆ ಯಾವುದು ನಂತರವೋ ಆ ಅವಧಿಯೊಳಗೆ ಅಂಥ ಆವರಣದ ತಕ್ಷಣದ ಸ್ವಾಧೀನತೆಯನ್ನು ಪಡೆಯುವುದಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ಮಾಲೀಕನು ರಾಜ್ಯ ಅಥವಾ ಕೇಂದ್ರ ಸರ್ಕಾರದ ನೌಕರನಾಗಿದ್ದು ಮತ್ತು ತನ್ನ ನಿವೃತ್ತಿಯ ದಿನಾಂಕಕ್ಕೆ ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿಯನ್ನು ಹೊಂದಿದ್ದು ಅವನು ಅಥವಾ ಅವನ ಹೆಂಡತಿ ಅಥವಾ ಅವಲಂಬಿತ ಮಗ ಅಥವಾ ಮಗಳು ಬಾಡಿಗೆಗೆ ನೀಡಿದ್ದ ಆವರಣವು ಅವನು ನಿವೃತ್ತಿ ಹೊಂದಿದ ನಂತರ ಸ್ವತಃ ಉಪಯೋಗಕ್ಕೆ ಅಗತ್ಯವಾಗಿದ್ದಲ್ಲಿ ಅವನು ತನ್ನ ನಿವೃತ್ತಿಯ ದಿನಾಂಕಕ್ಕಿಂತ ಮೊದಲಿನ ಒಂದು ವರ್ಷದ ಅವಧಿಯೊಳಗೆ ಯಾವುದೇ ಸಮಯದಲ್ಲಿ ಅಂಥ ಆವರಣದ ತಕ್ಷಣದ ಸ್ವಾಧೀನತೆ ಪಡೆಯುವುದಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

(3) (1)ನೇ ಉಪ-ಪ್ರಕರಣ ಅಥವಾ (2) ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ಮಾಲೀಕ, ಅವನ ಹೆಂಡತಿ, ಅವಲಂಬಿತ ಮಗ ಅಥವಾ ಮಗಳು ಒಂದಕ್ಕಿಂತಲೂ ಹೆಚ್ಚಿನ ಆವರಣಗಳನ್ನು ಬಾಡಿಗೆಗೆ ನೀಡಿರುವಲ್ಲಿ ಅವನು ಅಥವಾ ಅವನ ಹೆಂಡತಿ ಅಥವಾ ಅವಲಂಬಿತ ಮಗ ಅಥವಾ ಮಗಳಿಗೆ ಅವರು

ಆಯ್ಕೆ ಮಾಡುವ ಒಂದು ಆವರಣಕ್ಕೆ ಮಾತ್ರವೇ ಸಂಬಂಧಿಸಿದಂತೆ ಆ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರತಕ್ಕದ್ದು.

**31. ವಿಧವೆ ಮುಂತಾದವರಿಗೆ ಆವರಣದ ತಕ್ಷಣದ ಸ್ವಾಧೀನತೆಯನ್ನು ಪುನಃ ಪಡೆಯುವ ಹಕ್ಕು ಪ್ರಾಪ್ತವಾಗುವುದು.**- (1)

(ಎ) ಮಾಲೀಕಳು ವಿಧವೆಯಾಗಿದ್ದಲ್ಲಿ ಮತ್ತು ಆವರಣವನ್ನು ಆಕೆ ಅಥವಾ ಆಕೆಯ ಪತಿಯು ಬಾಡಿಗೆಗೆ ನೀಡಿದ್ದಲ್ಲಿ ;

(ಬಿ) ಮಾಲೀಕನು ಅಂಗವಿಕಲ ವ್ಯಕ್ತಿಯಾಗಿದ್ದು ಆವರಣವನ್ನು ಆ ವ್ಯಕ್ತಿಯು ಬಾಡಿಗೆಗೆ ನೀಡಿದ್ದಲ್ಲಿ ;

(ಸಿ) ಮಾಲೀಕನು ಅರವತ್ತೈದು ವರ್ಷ ಅಥವಾ ಅದಕ್ಕೂ ಹೆಚ್ಚು ವಯಸ್ಸಿನ ವ್ಯಕ್ತಿಯಾಗಿದ್ದು ಆವರಣವನ್ನು ಆ ವ್ಯಕ್ತಿಯು ಬಾಡಿಗೆಗೆ ನೀಡಿದ್ದಲ್ಲಿ,

-ಬಾಡಿಗೆಗೆ ನೀಡಿರುವ ಆವರಣವು ಆಕೆಗೆ ಅಥವಾ ಆತನಿಗೆ ಅಥವಾ ಆಕೆಯ ಅಥವಾ ಆತನ ಕುಟುಂಬಕ್ಕೆ ಅಥವಾ ಆಕೆಯ ಅಥವಾ ಆತನ ಜೊತೆಯಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವ ಯಾರೊಬ್ಬರಿಗೆ ಉಪಯೋಗಕ್ಕಾಗಿ ಅಗತ್ಯವಾಗಿದ್ದಲ್ಲಿ ಆಕೆ ಅಥವಾ ಆತ ಅಂಥ ಆವರಣದ ತಕ್ಷಣದ ಸ್ವಾಧೀನತೆಯನ್ನು ಪಡೆಯುವುದಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಮಾಲೀಕಳು/ಮಾಲೀಕನು ಒಂದಕ್ಕಿಂತ ಹೆಚ್ಚಿನ ಆವರಣಗಳನ್ನು ಬಾಡಿಗೆಗೆ ಕೊಟ್ಟಿದ್ದಲ್ಲಿ ಆಕೆ ಅಥವಾ ಆತನು ಆಯ್ಕೆ ಮಾಡುವ ಒಂದು ನಿವಾಸದ ಮತ್ತು ಒಂದು ನಿವಾಸೇತರ ಆವರಣಕ್ಕೆ ಸಂಬಂಧಪಟ್ಟಂತೆ ಆ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವುದಕ್ಕೆ ಆಕೆಗೆ ಅಥವಾ ಆತನಿಗೆ ಅವಕಾಶವಿರತಕ್ಕದ್ದು.

**ವಿವರಣೆ I**.- ಈ ಪ್ರಕರಣದ ಉದ್ದೇಶಕ್ಕಾಗಿ"ಅಂಗವಿಕಲ ವ್ಯಕ್ತಿ" ಎಂದರೆ ವರಮಾನ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರಾಧಿನಿಯಮ 48) 80ಯು ಪ್ರಕರಣದ ಅಡಿಯಲ್ಲಿ ತತ್ಕಾಲದಲ್ಲಿ ಕಡಿತಗಳ ಸೌಲಭ್ಯಗಳಿಗೆ ಹಕ್ಕುಳ್ಳ ತೆರಿಗೆದಾರನಾಗಿರುವಂಥ ವ್ಯಕ್ತಿ.

**ವಿವರಣೆ II** .-ನಿವಾಸದ ಮತ್ತು ನಿವಾಸೇತರ ಬಳಕೆಯ ಪ್ರತಿಯೊಂದರ ಸಂಬಂಧದಲ್ಲಿಯೂ ಸ್ವಾಧೀನತೆಯನ್ನು ಪುನಃ ಪಡೆಯುವ ಹಕ್ಕನ್ನು ಒಂದು ಬಾರಿ ಮಾತ್ರವೇ ಚಲಾಯಿಸಬಹುದಾಗಿದೆ.

**32. ಒಳಬಾಡಿಗೆಗೆ ನೀಡುವುದಕ್ಕೆ ನಿರ್ಬಂಧಗಳು.**- (1) ಆವರಣದ ಸಂಬಂಧದಲ್ಲಿನ ಸ್ಥಳೀಯ ಪ್ರದೇಶಕ್ಕೆ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ 1961ರ (1961ರ ಕರ್ನಾಟಕ ಅಧಿನಿಯಮ 22) ಭಾಗ-**V** ಅನ್ವಯವಾಗುವ ದಿನಾಂಕಕ್ಕಿಂತಲೂ ಮೊದಲು ಯಾವುದೇ ಸಮಯದಲ್ಲಿ, ಒಬ್ಬ ಬಾಡಿಗೆದಾರನು ಆವರಣವನ್ನು ಸಂಪೂರ್ಣವಾಗಿ ಅಥವಾ ಅದರ ಭಾಗವನ್ನು ಒಳಬಾಡಿಗೆಗೆ ನೀಡಿದ್ದರೆ ಮತ್ತು ಈ ಅಧಿನಿಯಮದ ಪ್ರಾರಂಭದಲ್ಲಿ ಒಳಬಾಡಿಗೆದಾರನು ಅಂಥ ಆವರಣದ ಅಧಿಭೋಗದಲ್ಲಿದ್ದರೆ, ಹಾಗೆ ಒಳಬಾಡಿಗೆಗೆ ನೀಡಲು ಮಾಲೀಕನ ಸಮ್ಮತಿಯನ್ನು ಪಡೆಯದೇ ಇದ್ದರೂ ಆವರಣವನ್ನು ಕಾನೂನು ಬದ್ಧವಾಗಿ ಒಳಬಾಡಿಗೆಗೆ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಯಾವೊಬ್ಬ ಬಾಡಿಗೆದಾರನು ಮಾಲೀಕನ ಲಿಖಿತ ಪೂರ್ವ ಸಮ್ಮತಿಯಿಲ್ಲದೆ,-

(ಎ) ಬಾಡಿಗೆದಾರನಾಗಿ ಅವನು ಹೊಂದಿರುವ ಆವರಣವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಒಳಬಾಡಿಗೆಗೆ ನೀಡತಕ್ಕದ್ದಲ್ಲ ; ಅಥವಾ

(ಬಿ) ಬಾಡಿಗೆದಾರಿಕೆಯಲ್ಲಿನ ಅಥವಾ ಅದರ ಯಾವುದೇ ಭಾಗದಲ್ಲಿನ ಅವನ ಹಕ್ಕುಗಳನ್ನು ವರ್ಗಾಯಿಸತಕ್ಕದ್ದಲ್ಲ ಅಥವಾ ಹಸ್ತಾಂತರ ಮಾಡತಕ್ಕದ್ದಲ್ಲ.

(3) ಬಾಡಿಗೆದಾರನು ಹೊಂದಿರುವ ಆವರಣವನ್ನು ಪೂರ್ಣವಾಗಿ ಅಥವಾ ಭಾಗಶಃವಾಗಿ ಒಳಬಾಡಿಗೆಗೆ ನೀಡುವುದಕ್ಕಾಗಿ ತನ್ನ ಅನುಮತಿಯನ್ನು ನೀಡಲು ಮಾಲೀಕನು ಕಂತು ಅಥವಾ ಪಗಡಿಯಾಗಿ ಯಾವುದೇ ಮೊತ್ತದ ಸಂದಾಯಕ್ಕೆ ಕ್ಲೇಮು ಮಾಡತಕ್ಕದ್ದಲ್ಲ ಅಥವಾ ಸ್ವೀಕರಿಸತಕ್ಕದ್ದಲ್ಲ ಅಥವಾ ನಗದು ರೂಪದಲ್ಲಾಗಲೀ ಅಥವಾ ವಸ್ತು ರೂಪದಲ್ಲಾಗಲೀ ಯಾವುದೇ ಪ್ರತಿಫಲವನ್ನು ಕ್ಲೇಮು ಮಾಡತಕ್ಕದ್ದಲ್ಲ ಅಥವಾ ಸ್ವೀಕರಿಸತಕ್ಕದ್ದಲ್ಲ.

**೩೩. ಒಳಬಾಡಿಗೆದಾರಿಕೆಯ ಸೃಜನೆ ಮತ್ತು ಸಮಾಪನೆಯ ಬಗ್ಗೆ ನೋಟಿಸು.**- (1) ಈ ಅಧಿನಿಯಮದ ಪ್ರಾರಂಭದ ತರುವಾಯ, ಬಾಡಿಗೆದಾರನಿಂದ ಯಾವುದೇ ಆವರಣವನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲೀ, ಮಾಲೀಕನ ಲಿಖಿತ ಪೂರ್ವ ಸಮ್ಮತಿಯೊಡನೆ ಒಳಬಾಡಿಗೆಗೆ ನೀಡಿದಲ್ಲಿ, ಬಾಡಿಗೆದಾರನು ಅಥವಾ ಆವರಣವನ್ನು ಯಾರಿಗೆ ಒಳಬಾಡಿಗೆಗೆ ನೀಡಲಾಗಿದೆಯೋ ಆ ಒಳಬಾಡಿಗೆದಾರನು ನಿಯಮಿಸಿದ ರೀತಿಯಲ್ಲಿ, ಹಾಗೆ ಒಳಬಾಡಿಗೆಗೆ ನೀಡಿದ ದಿನಾಂಕದಿಂದ ಒಂದು ತಿಂಗಳೊಳಗೆ ಒಳ ಬಾಡಿಗೆದಾರಿಕೆಯ ಸೃಜನೆಯ ಬಗ್ಗೆ ಮಾಲೀಕನಿಗೆ ನೋಟೀಸು ನೀಡತಕ್ಕದ್ದು ಮತ್ತು ಅಂಥ ಒಳ ಬಾಡಿಗೆದಾರಿಕೆಯ ಸಮಾಪನವನ್ನು ಅಂಥ ಸಮಾಪನೆಯ ದಿನದಿಂದ ಒಂದು ತಿಂಗಳೊಳಗಾಗಿ ಅಧಿಸೂಚಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಬಾಡಿಗೆದಾರನಿಂದ ಯಾವುದೇ ಆವರಣವನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲೀ ಕಾನೂನು ಬದ್ಧವಾಗಿ ಒಳಬಾಡಿಗೆಗೆ ನೀಡಿದ್ದಲ್ಲಿ ಬಾಡಿಗೆದಾರನು ಅಥವಾ ಆವರಣವನ್ನು ಯಾರಿಗೆ ಒಳಬಾಡಿಗೆಗೆ ನೀಡಲಾಗಿದೆಯೋ ಆ ಒಳಬಾಡಿಗೆದಾರನು, ನಿಯಮಿಸಿದ ರೀತಿಯಲ್ಲಿ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳುಗಳೊಳಗೆ ಒಳಬಾಡಿಗೆದಾರಿಕೆಯ ಸೃಜನೆಯ ಬಗ್ಗೆ ಮಾಲೀಕನಿಗೆ ನೋಟೀಸು ನೀಡತಕ್ಕದ್ದು ಮತ್ತು ಒಳಬಾಡಿಗೆದಾರಿಕೆಯ ಸಮಾಪನವನ್ನು ಅಂಥ ಸಮಾಪನೆಯ ದಿನದಿಂದ ಒಂದು ತಿಂಗಳೊಳಗಾಗಿ ಅಧಿಸೂಚಿಸತಕ್ಕದ್ದು.

**೩೪. ಒಳಬಾಡಿಗೆದಾರನು ನಿರ್ದಿಷ್ಟ ಸಂದರ್ಭಗಳಲ್ಲಿ ಬಾಡಿಗೆದಾರನಾಗಿರುವುದು.**- ಯಾವುದೇ ಆವರಣದ ಸಂಬಂಧದಲ್ಲಿ ಅವುಗಳಿಂದ ಹೊರ ಹಾಕುವುದಕ್ಕಾಗಿ ಬಾಡಿಗೆದಾರನ ವಿರುದ್ಧವಾಗಿ 27ನೇ ಪ್ರಕರಣದಡಿಯಲ್ಲಿ ಆದೇಶವನ್ನು ಮಾಡಿರುವಲ್ಲಿ ಆದರೆ 32ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಒಳಬಾಡಿಗೆದಾರನ ವಿರುದ್ಧವಲ್ಲದಿರುವಲ್ಲಿ ಮತ್ತು ಮಾಲೀಕನಿಗೆ ಒಳಬಾಡಿಗೆದಾರಿಕೆಯ ನೋಟೀಸನ್ನು ನೀಡಿರುವಲ್ಲಿ, ಆದೇಶವು ಜಾರಿಗೆ ಬಂದ ದಿನಾಂಕದಿಂದ ಒಳಬಾಡಿಗೆದಾರನನ್ನು, ಬಾಡಿಗೆದಾರಿಕೆಯು ಮುಂದುವರೆದಿದ್ದರೆ ಯಾವ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಬಾಡಿಗೆದಾರನು ತನ್ನ ಅಧಿಭೋಗದಲ್ಲಿರುವ ಆವರಣಗಳನ್ನು ಮಾಲೀಕನಿಂದ ಹೊಂದಿರುತ್ತಿದ್ದನೋ ಅವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ತನ್ನ ಅಧಿಭೋಗದಲ್ಲಿರುವ ಆವರಣಗಳ ಸಂಬಂಧದಲ್ಲಿ ಮಾಲೀಕನಿಂದ ನೇರವಾಗಿ ಆವರಣವನ್ನು ಹೊಂದಿರುವಂಥ ಬಾಡಿಗೆದಾರನಾಗಿರುವನೆಂದು ಪರಿಗಣಿಸತಕ್ಕದ್ದು.

**೩೫. ಅಧಿಭೋಗಕ್ಕಾಗಿ ಸ್ವಾಧೀನತೆಯನ್ನು ಪುನಃ ಪಡೆಯುವುದು ಮತ್ತು ಮರುಪ್ರವೇಶ.**- (1) ಮಾಲೀಕನು 27ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್) ಖಂಡದ ಅಥವಾ 28,29,30,31 ಅಥವಾ 37ನೇ ಪ್ರಕರಣಗಳಡಿಯಲ್ಲಿ ಮಾಡಲಾದ ಆದೇಶಕ್ಕನುಸಾರವಾಗಿ ಬಾಡಿಗೆದಾರನಿಂದ ಯಾವುದೇ ಆವರಣದ ಸ್ವಾಧೀನತೆಯನ್ನು ಪುನಃ ಪಡೆದುಕೊಂಡಿರುವಲ್ಲಿ, ನಿಯಮಿಸಲಾದ ವಿಧಾನದಲ್ಲಿ ಮಾಲೀಕನು ನ್ಯಾಯಾಲಯದಿಂದ ಅನುಮತಿಯನ್ನು ಪಡೆದ ಹೊರತು, ಅಂಥ ಸ್ವಾಧೀನತೆಯನ್ನು ಪಡೆದ ದಿನಾಂಕದಿಂದ ಮೂರು ವರ್ಷಗಳೊಳಗೆ ಇಡೀ ಆವರಣವನ್ನು ಅಥವಾ ಆವರಣದ ಯಾವುದೇ ಭಾಗವನ್ನು ಮತ್ತೆ ಬಾಡಿಗೆಗೆ ಕೊಡತಕ್ಕದ್ದಲ್ಲ ಮತ್ತು ಅಂಥ ಅನುಮತಿಯನ್ನು ನೀಡುವಾಗ ನ್ಯಾಯಾಲಯವು ಹೊರ ಹಾಕಲಾಗಿದ್ದ ಅಂಥ ಬಾಡಿಗೆದಾರನು ಹಕ್ಕನ್ನು ಬಿಟ್ಟುಕೊಟ್ಟಿದ್ದ ಹೊರತು ಆವರಣದ ಸ್ವಾಧೀನತೆಯನ್ನು ಬಾಡಿಗೆದಾರನಿಗೆ ನೀಡುವಂತೆ ಮಾಲೀಕನಿಗೆ ನಿರ್ದೇಶಿಸಬಹುದು:

ಪರಂತು, ಪುನಃ ನಿರ್ಮಾಣ ಅಥವಾ ಪುನಃ ಕಟ್ಟಡದ ನಿರ್ಮಾಣದ ನಂತರ ಅಧಿಭೋಗಕ್ಕಾಗಿ 27ನೇ ಪ್ರಕರಣದ (2)ನೇ ಉಪ-ಪ್ರಕರಣದ (ಆರ್) ಖಂಡದ ಅಡಿಯಲ್ಲಿ ಮಾಡಲಾದ ಆದೇಶದ ಅನುಸರಣೆಯಲ್ಲಿ ಯಾವುದೇ ಆವರಣದ ಸ್ವಾಧೀನತೆಯನ್ನು ಮಾಲೀಕನು ಹೊಂದಿರುವಲ್ಲಿ, ಮೂರು ವರ್ಷಗಳ ಅವಧಿಯನ್ನು ಸಂದರ್ಭಾನುಸಾರ ಪುನಃ ನಿರ್ಮಾಣ ಅಥವಾ ಕಟ್ಟಡದ ಪುನಃ ನಿರ್ಮಾಣವು ಪೂರ್ಣಗೊಂಡ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು.

(2) ಮಾಲೀಕನು ಯಾವುದೇ ಆವರಣದ ಸ್ವಾಧೀನತೆಯನ್ನು ಮೇಲೆ ಹೇಳಲಾದಂತೆ ಪುನಃ ಪಡೆದುಕೊಂಡಿರುವಲ್ಲಿ ಮತ್ತು ಮಾಲೀಕನಾಗಲೀ ಅಥವಾ ಯಾರ ಅನುಕೂಲಕ್ಕಾಗಿ ಆವರಣವನ್ನು ಪಡೆಯಲಾಗಿತ್ತೋ ಆ ವ್ಯಕ್ತಿಯಾಗಲಿ ಅಥವಾ ಸ್ವಾಧೀನತೆಯನ್ನು ಪಡೆದ ಎರಡು ತಿಂಗಳೊಳಗಾಗಿ ಆವರಣದ ಅಧಿಭೋಗವನ್ನು ಹೊಂದಿರದಿದ್ದರೆ ಅಥವಾ ಅಧಿಭೋಗ ಪಡೆದ ಆವರಣವನ್ನು, ಸ್ವಾಧೀನತೆ ಪಡೆದ ದಿನಾಂಕದಿಂದ ಮೂರು ವರ್ಷಗಳೊಳಗಿನ ಯಾವುದೇ ಸಮಯದಲ್ಲಿ (1)ನೇ ಉಪ-ಪ್ರಕರಣದಡಿ ನ್ಯಾಯಾಲಯದ ಅನುಮತಿ ಪಡೆಯದೆ, ಹೊರಹಾಕಲಾದ ಬಾಡಿಗೆದಾರನಿಗಲ್ಲದೆ ಬೇರೆ ಯಾರೇ ವ್ಯಕ್ತಿಗೆ ಬಾಡಿಗೆಗೆ ನೀಡಲಾಗಿದ್ದರೆ ಅಥವಾ ನ್ಯಾಯಾಲಯಕ್ಕೆ ವಾಸ್ತವಿಕ ಕಾರಣಗಳೆಂದು ಕಂಡು ಬಾರದ ಕಾರಣಗಳಿಗಾಗಿ ಮತ್ತೊಬ್ಬ ವ್ಯಕ್ತಿಗೆ ಆವರಣದ ಸ್ವಾಧೀನತೆಯನ್ನು ವರ್ಗಾವಣೆ ಮಾಡಿದ್ದರೆ, ನ್ಯಾಯಾಲಯವು ಹೊರ ಹಾಕಲಾದ ಅಂಥ ಬಾಡಿಗೆದಾರನು

ನಿಯಮಿಸಬಹುದಾದಂಥ ಕಾಲಾವಕಾಶದೊಳಗೆ ಅದಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ, ಬಾಡಿಗೆದಾರನಿಗೆ ಆವರಣದ ಸ್ವಾಧೀನತೆ ನೀಡುವಂತೆ ಅಥವಾ ನ್ಯಾಯಾಲಯವು ಯುಕ್ತವೆಂದು ಭಾವಿಸಬಹುದಾದಂಥ ನಷ್ಟ ಪರಿಹಾರವನ್ನು ಆತನಿಗೆ ಸಂದಾಯ ಮಾಡುವಂತೆ ಮಾಲೀಕನಿಗೆ ನಿರ್ದೇಶಿಸಬಹುದು.

**36. ದುರಸ್ತಿ ಮತ್ತು ಪುನರ್ ನಿರ್ಮಾಣ ಮತ್ತು ಮರು ಪ್ರವೇಶಕ್ಕಾಗಿ ಸ್ವಾಧೀನತೆಯನ್ನು ಪುನಃ ಪಡೆಯುವುದು.**- (1) 27ನೇ ಪ್ರಕರಣದ (2) ನೇ ಉಪ-ಪ್ರಕರಣದ (ಹೆಚ್) ಅಥವಾ (ಐ) ಖಂಡಗಳಲ್ಲಿ ಅಥವಾ 28,29,30,31, ಅಥವಾ 37ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳ ಮೇಲೆ ಯಾವುದೇ ಆದೇಶವನ್ನು ಮಾಡುವಾಗ, ನ್ಯಾಯಾಲಯವು, ಪುನರ್ ನಿರ್ಮಾಣ ಅಥವಾ ದುರಸ್ತಿಯ ನಂತರ ವಾಣಿಜ್ಯ ಉದ್ದೇಶಗಳಿಗಾಗಿ ಆವರಣವನ್ನು ಪರಿವರ್ತಿಸಲು ಮಾಲೀಕನು ಅನುಮತಿಯನ್ನು ಪಡೆದಿರುವ ಹೊರತು ಯಾವ ಆವರಣ ಅಥವಾ ಅದರ ಭಾಗದಿಂದ ಬಾಡಿಗೆದಾರನನ್ನು ಹೊರ ಹಾಕಬೇಕಾಗಿದೆಯೋ ಆ ಆವರಣದ ಪುನರ್ ನಿರ್ಮಾಣ ಅಥವಾ ದುರಸ್ತಿಯಾದ ಬಳಿಕ ಅದರ ಅನುಭೋಗವನ್ನು ಹೊಂದಲು ಬಾಡಿಗೆದಾರನು ಆಯ್ಕೆ ಮಾಡಿಕೊಳ್ಳುತ್ತಾನೆಯೇ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಬಾಡಿಗೆದಾರನು ಹಾಗೆ ಆಯ್ಕೆ ಮಾಡಿಕೊಂಡರೆ ಆದೇಶದಲ್ಲಿ ಆಯ್ಕೆಯ ಸಂಗತಿಯನ್ನು ದಾಖಲಿಸತಕ್ಕದ್ದು ಮತ್ತು ಮಾಲೀಕನು ಸಂದರ್ಭಾನುಸಾರ ಕಟ್ಟಡ ಕಾಮಗಾರಿಯನ್ನು ಪ್ರಾರಂಭ ಮಾಡಲು ಸಾಧ್ಯವಾಗುವಂತೆ ಬಾಡಿಗೆದಾರನು ಯಾವ ದಿನಾಂಕದಂದು ಅಥವಾ ಯಾವ ದಿನಾಂಕದ ಮೊದಲು ಸ್ವಾಧೀನತೆಯನ್ನು ವಹಿಸಿಕೊಡತಕ್ಕದ್ದೆಂಬುದನ್ನು ಅದರಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಸದರಿ ಆವರಣದ ಸ್ವಾಧೀನತೆಯನ್ನು ಯಾವಾಗ ವಹಿಸಿಕೊಡುವನೆಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಬಾಡಿಗೆದಾರನು ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸ್ವಾಧೀನತೆಯನ್ನು ವಹಿಸಿಕೊಟ್ಟರೆ, ಮಾಲೀಕನು ದುರಸ್ತಿ ಅಥವಾ ಕಟ್ಟಡ ನಿರ್ಮಾಣ ಅಥವಾ ಕಟ್ಟಡದ ಮರು ನಿರ್ಮಾಣ ಕಾಮಗಾರಿಯು ಮುಕ್ತಾಯಗೊಂಡ ತರುವಾಯ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ದಿನಾಂಕಕ್ಕೆ ಮೊದಲು ಅಥವಾ ಆದೇಶದ ಮೂಲಕ ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ವಿಸ್ತರಿಸಿದ ದಿನಾಂಕದಂದು ಬಾಡಿಗೆದಾರನನ್ನು ಆವರಣದ ಅಥವಾ ಅದರ ಭಾಗದ ಅಧಿಭೋಗದಲ್ಲಿರಿಸತಕ್ಕದ್ದು.

(3) ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಬಾಡಿಗೆದಾರನು ಸ್ವಾಧೀನತೆಯನ್ನು ವಹಿಸಿಕೊಟ್ಟ ತರುವಾಯ, ಮಾಲೀಕನು, ನಿರ್ದಿಷ್ಟಪಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ದುರಸ್ತಿ ಅಥವಾ ಕಟ್ಟಡದ ಮರು ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲು ವಿಫಲನಾದರೆ ಅಥವಾ ಸಮಂಜಸ ಕಾಲಾವಕಾಶದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲನಾದರೆ ಅಥವಾ ಕಾಮಗಾರಿಯನ್ನು ಪೂರ್ಣಗೊಳಿಸಿದ ಮೇಲೆ ಬಾಡಿಗೆದಾರರನ್ನು (2)ನೇ ಉಪ-ಪ್ರಕರಣಕ್ಕನುಸಾರವಾಗಿ ಕಟ್ಟಡದ ಅಧಿಭೋಗದಲ್ಲಿರಿಸಲು ವಿಫಲನಾದರೆ, ನ್ಯಾಯಾಲಯವು, ನಿಯಮಿಸಬಹುದಾದ ಅಂಥ ಕಾಲಾವಧಿಯೊಳಗೆ ಬಾಡಿಗೆದಾರನು ಈ ಸಂಬಂಧವಾಗಿ ಸಲ್ಲಿಸಿದ ಅರ್ಜಿಯ ಮೇಲೆ, ಮಾಲೀಕನಿಗೆ ಬಾಡಿಗೆದಾರನನ್ನು ಆವರಣದ ಅಥವಾ ಅದರ ಭಾಗದ ಅಧಿಭೋಗದಲ್ಲಿರಿಸುವಂತೆ ಅಥವಾ ನ್ಯಾಯಾಲಯವು ಅದು ಯುಕ್ತವೆಂದು ಭಾವಿಸಬಹುದಾದ ಅಂಥ ಆವರಣದ ನಿಗದಿತ ಬಾಡಿಗೆಯ ಮೂರರಷ್ಟನ್ನು ಮೀರದ ಮೊತ್ತದ ನಷ್ಟ ಪರಿಹಾರವನ್ನು ಬಾಡಿಗೆದಾರನಿಗೆ ಸಂದಾಯ ಮಾಡುವಂತೆ ಆದೇಶ ನೀಡಬಹುದು.

**37. ಪರಿಮಿತ ಕಾಲಾವಧಿಯ ಬಾಡಿಗೆದಾರಿಕೆಗಳ ಸಂದರ್ಭದಲ್ಲಿ ಸ್ವಾಧೀನತೆಯನ್ನು ಪಡೆಯುವುದು**- (1) ಮಾಲೀಕನಿಗೆ ಒಂದು ನಿರ್ದಿಷ್ಟ ಅವಧಿಯವರೆಗೆ ಯಾವುದೇ ಆವರಣವು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಅಗತ್ಯವಾಗಿರದಿದ್ದಲ್ಲಿ ಮತ್ತು ನಿಯಮಿಸಲಾದ ರೀತಿಯಲ್ಲಿ ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡ ತರುವಾಯ ಮಾಲೀಕನು ಇಡೀ ಆವರಣವನ್ನು ಅಥವಾ ಅದರ ಭಾಗವನ್ನು ಮಾಲೀಕ ಮತ್ತು ಬಾಡಿಗೆದಾರರ ನಡುವೆ ಮಾಡಿಕೊಳ್ಳಬಹುದಾದ ಲಿಖಿತ ಒಪ್ಪಂದಕ್ಕನುಸಾರವಾಗಿ ಅಂಥ ಅವಧಿಗೆ, ಬಾಡಿಗೆಗೆ ನೀಡಿದ್ದು, ಬಾಡಿಗೆದಾರನು ಸದರಿ ಅವಧಿಯು ಮುಕ್ತಾಯವಾದ ತರುವಾಯ ಅಂಥ ಆವರಣವನ್ನು ಖಾಲಿ ಮಾಡದಿದ್ದಲ್ಲಿ, ಆನಂತರ, 27ನೇ ಪ್ರಕರಣದಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ನ್ಯಾಯಾಲಯವು, ಮಾಲೀಕನು, ನಿಯಮಿಸಬಹುದಾದ ಅಂಥ ಅವಧಿಯೊಳಗೆ ಈ ಸಂಬಂಧವಾಗಿ ಸಲ್ಲಿಸಿದ ಅರ್ಜಿಯ ಮೇಲೆ, ಬಾಡಿಗೆದಾರರನ್ನು ಅಥವಾ ಅಂಥ ಆವರಣದ ಅಧಿಭೋಗದಲ್ಲಿರಬಹುದಾದ ಇತರ ಪ್ರತಿಯೊಬ್ಬ ವ್ಯಕ್ತಿಯನ್ನು ಹೊರ ಹಾಕುವ ಮೂಲಕ ಖಾಲಿ ಮಾಡಿದ ಆವರಣದ ಅಥವಾ ಅದರ ಭಾಗದ ಸ್ವಾಧೀನತೆಯನ್ನು ಮಾಲೀಕನಿಗೆ ನೀಡಬಹುದು.

(2) ನ್ಯಾಯಾಲಯವು,-

(i) ಒಂದು ಆವರಣದ ಸಂಬಂಧದಲ್ಲಿ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅನುಮತಿಯನ್ನು, ಲಿಖಿತದಲ್ಲಿ ದಾಖಲು ಮಾಡಬೇಕಾದ ಯುಕ್ತ ಮತ್ತು ಸಾಕಷ್ಟು ಕಾರಣಗಳಿಗಾಗಿ ಹೊರತು ನಿರಂತರವಾಗಿ ಎರಡು ಬಾರಿಗಿಂತಲೂ ಹೆಚ್ಚು ಬಾರಿ ನೀಡತಕ್ಕದ್ದಲ್ಲ.

**ವಿವರಣೆ :** (1)ನೇ ಉಪ-ಪ್ರಕರಣದ ಅಡಿಯಲ್ಲಿ ನೀಡಲಾದ ಅನುಮತಿಯನ್ನು, ಕೊನೆಯ ಪರಿಮಿತಿಯ ಅವಧಿಯ ಬಾಡಿಗೆದಾರಿಕೆಯು ಮುಕ್ತಾಯವಾದ ನಂತರ ಐದು ವರ್ಷಗಳು ಅಥವಾ ಹೆಚ್ಚು ವರ್ಷಗಳ ಅವಧಿಯು ಆಗಿ ಹೋಗಿದ್ದರೆ ನಿರಂತರವೆಂದು ಭಾವಿಸತಕ್ಕದ್ದಲ್ಲ.

(ii) ಈ ಪ್ರಕರಣದ ಅಡಿಯಲ್ಲಿ ಆವರಣವನ್ನು ಬಾಡಿಗೆಗೆ ಕೊಡುವುದರಲ್ಲಿನ ಮಾಲೀಕನ ಪ್ರಾಮಾಣಿಕತೆಯನ್ನು ಪ್ರಶ್ನಿಸುವ ಬಾಡಿಗೆದಾರನ ಯಾವುದೇ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ.

(3) ಬಾಡಿಗೆದಾರನು ಸಲ್ಲಿಸಿದ ನ್ಯಾಯಾಲಯದಲ್ಲಿನ ಅರ್ಜಿಗಳು ಮತ್ತು ಜಿಲ್ಲಾ ನ್ಯಾಯಾಧೀಶ ಅಥವಾ ಉಚ್ಚ ನ್ಯಾಯಾಲಯದಲ್ಲಿನ ಎಲ್ಲ ಪುನರೀಕ್ಷಣೆಗಳು (1)ನೇ ಉಪ-ಪ್ರಕರಣದ ಅಡಿಯಲ್ಲಿ ಅನುಮತಿ ನೀಡಿದಂಥ ಅವಧಿಯು ಮುಕ್ತಾಯವಾದ ನಂತರ ಕೊನೆಗೊಳ್ಳತಕ್ಕದ್ದು.

(4) ನ್ಯಾಯಾಲಯವು, (1)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವಾಗ, ಆವರಣದ ಬಳಕೆ ಅಥವಾ ಅಧಿಭೋಗಕ್ಕಾಗಿ ಅಂಥ ಆದೇಶದ ದಿನಾಂಕದಿಂದ ಬಾಡಿಗೆದಾರನು ವಾಸ್ತವಿಕವಾಗಿ ಖಾಲಿ ಮಾಡುವ ದಿನಾಂಕದವರೆಗಿನ ಅವಧಿಗೆ ವಾರ್ಷಿಕ ಶೇಕಡ ಹದಿನೈದರ ದರದಲ್ಲಿನ ಬಡ್ಡಿಯೊಂದಿಗೆ ಬಾಡಿಗೆದಾರನು ಕೊನೆಗೆ ನೀಡಿದ ಬಾಡಿಗೆಯ ಎರಡರಷ್ಟು ಮೊತ್ತವನ್ನು ಮಾಲೀಕನಿಗೆ ನಷ್ಟ ಪರಿಹಾರವಾಗಿ ಕೊಡಿಸಬಹುದು.

**೩೮. ನಿರ್ದಿಷ್ಟ ಸಂದರ್ಭಗಳಲ್ಲಿ ಸ್ವಾಧೀನತೆಯನ್ನು ಪಡೆಯಲು ವಿಶೇಷ ಉಪಬಂಧ.**- ಯಾವುದೇ ಆವರಣಕ್ಕೆ ಸಂಬಂಧಿಸಿದಂತೆ ಮಾಲೀಕನು ಯಾವುದೇ ಕಂಪನಿ ಅಥವಾ ಇತರ ನಿಗಮಿತ ನಿಕಾಯ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಸಾರ್ವಜನಿಕ ಸಂಸ್ಥೆಯಾಗಿದ್ದಲ್ಲಿ 27ನೇ ಪ್ರಕರಣದಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ನ್ಯಾಯಾಲಯವು, ಅಂಥ ಆವರಣದ ಮಾಲೀಕನು ಈ ಸಂಬಂಧವಾಗಿ ಸಲ್ಲಿಸಿದ ಅರ್ಜಿಯ ಮೇಲೆ,

(ಎ) ಬಾಡಿಗೆದಾರನು, ಮಾಲೀಕನ ಸೇವೆಯಲ್ಲಿ ಅಥವಾ ಉದ್ಯೋಗದಲ್ಲಿದ್ದ ಸಮಯದಲ್ಲಿ ಅವನಿಗೆ ನಿವಾಸದ ಬಳಕೆಗಾಗಿ ಬಾಡಿಗೆಗೆ ಅಂಥ ಆವರಣವನ್ನು ನೀಡಲಾಗಿದ್ದು, ಬಾಡಿಗೆದಾರನು ಅಂಥ ಸೇವೆ ಅಥವಾ ಉದ್ಯೋಗದಲ್ಲಿರುವುದು ಮುಕ್ತಾಯವಾಗಿದೆಯೆಂದು; ಅಥವಾ

(ಬಿ) ಬಾಡಿಗೆದಾರನು ಯಾವ ವ್ಯಕ್ತ ಅಥವಾ ಇಂಗಿತ ನಿಬಂಧನೆಗಳ ಮೇಲೆ ಅಂಥ ಆವರಣದ ಅಧಿಭೋಗದಲ್ಲಿರಲು ಪ್ರಾಧಿಕೃತನಾಗಿದ್ದನೋ ಅವುಗಳನ್ನು ಉಲ್ಲಂಘಿಸಿರುವನೆಂದು ; ಅಥವಾ

(ಸಿ) ಯಾವೊಬ್ಬ ಇತರ ವ್ಯಕ್ತಿಯು ಅಂಥ ಆವರಣದ ಅನಧಿಕೃತ ಅಧಿಭೋಗ ಹೊಂದಿರುವನೆಂದು ; ಅಥವಾ

(□ □) ಸಾರ್ವಜನಿಕ ಸಂಸ್ಥೆಗೆ ಅದರ ಚಟುವಟಿಕೆಗಳನ್ನು ವಿಸ್ತರಿಸುವುದಕ್ಕಾಗಿ ಆವರಣವು ವಾಸ್ತವಿಕವಾಗಿ ಅಗತ್ಯವಾಗಿದೆಯೆಂದು,

-ನ್ಯಾಯಾಲಯಕ್ಕೆ ಮನದಟ್ಟಾದಲ್ಲಿ, ಅದು ಬಾಡಿಗೆದಾರನನ್ನು ಮತ್ತು ಆವರಣದ ಅಧಿಭೋಗ ಹೊಂದಿರುವ ಪ್ರತಿಯೊಬ್ಬ ಇತರ ವ್ಯಕ್ತಿಯನ್ನು ಹೊರ ಹಾಕುವ ಮೂಲಕ ಖಾಲಿ ಮಾಡಿಸಿದ ಅಂಥ ಆವರಣದ ಸ್ವಾಧೀನತೆಯಲ್ಲಿ ಮಾಲೀಕನನ್ನು ಇರಿಸಬಹುದು.

**ವಿವರಣೆ :** - ಈ ಪ್ರಕರಣದ ಉದ್ದೇಶಗಳಿಗಾಗಿ, "ಸಾರ್ವಜನಿಕ ಸಂಸ್ಥೆ" ಎನ್ನುವುದರಲ್ಲಿ ಒಂದು ಖಾಸಗಿ ನ್ಯಾಸದಿಂದ ಸ್ಥಾಪಿತವಾದ ಅಂಥ ಯಾವುದೇ ಸಂಸ್ಥೆಯು ಒಳಗೊಳ್ಳುವುದಿಲ್ಲ.

**೩೯. ಕಟ್ಟಡ ರಚನೆಯಲ್ಲಿನ ಹೆಚ್ಚಿನ ನಿರ್ಮಾಣಕ್ಕೆ ಅನುಮತಿ.**- ಒಬ್ಬ ಬಾಡಿಗೆದಾರನಿಗೆ ಬಾಡಿಗೆ ನೀಡಲಾಗಿರುವ ಯಾವುದೇ ಕಟ್ಟಡದಲ್ಲಿ ಯಾವುದೇ ಸುಧಾರಣೆ ಮಾಡಲು ಅಥವಾ ಅದರ ಮೇಲೆ ಹೆಚ್ಚಿನ ಕಟ್ಟಡ ನಿರ್ಮಾಣ ಮಾಡಲು ಮಾಲೀಕನು ಉದ್ದೇಶಿಸಿರುವಲ್ಲಿ ಮತ್ತು ಅಂಥ ಸುಧಾರಣೆ ಅಥವಾ ಹೆಚ್ಚಿನ ಕಟ್ಟಡ ನಿರ್ಮಾಣ ಮಾಡಲು ಮಾಲೀಕನಿಗೆ

ಬಾಡಿಗೆದಾರನು ಅವಕಾಶ ಕೊಡಲು ನಿರಾಕರಿಸಿದಲ್ಲಿ ಮತ್ತು ನ್ಯಾಯಾಲಯಕ್ಕೆ, ಈ ಸಂಬಂಧದಲ್ಲಿ ಮಾಲೀಕನು ಸಲ್ಲಿಸಿದ ಅರ್ಜಿಯ ಮೇಲೆ ಮಾಲೀಕನು ಕಾಮಗಾರಿಯನ್ನು ಪ್ರಾರಂಭಿಸಲು ಸಿದ್ಧನಿದ್ದಾನೆ ಮತ್ತು ಇಚ್ಛಿಸಿದ್ದಾನೆಂಬುದು ಮತ್ತು ಅಂಥ ಕಾಮಗಾರಿಯು ಬಾಡಿಗೆದಾರನಿಗೆ ಯಾವುದೇ ಅನುಚಿತ ತೊಂದರೆಯನ್ನುಂಟು ಮಾಡುವುದಿಲ್ಲವೆಂಬುದು ಮನದಟ್ಟಾದರೆ, ನ್ಯಾಯಾಲಯವು, ಅಂಥ ಕಾಮಗಾರಿಯನ್ನು ಮಾಡಲು ಮಾಲೀಕನಿಗೆ ಅನುಮತಿ ನೀಡಬಹುದು ಮತ್ತು ಈ ಪ್ರಕರಣದ ಸನ್ನಿವೇಶಗಳಲ್ಲಿ ಅದು ಸೂಕ್ತವೆಂದು ಭಾವಿಸಬಹುದಾದಂಥ ಇತರ ಆದೇಶವನ್ನು ಹೊರಡಿಸಬಹುದು.

**40. ಖಾಲಿ ಕಟ್ಟಡ ನಿವೇಶನಗಳ ಬಗ್ಗೆ ವಿಶೇಷ ಉಪಬಂಧ.**- 27ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಬಾಡಿಗೆಗೆ ಕೊಡಲಾಗಿರುವ ಯಾವುದೇ ಆವರಣವು ನಿವಾಸವಾಗಿ ಉಪಯೋಗಿಸುವುದಕ್ಕಾಗಲಿ ಅಥವಾ ಇತರ ಯಾವುವೇ ಉದ್ದೇಶಗಳಿಗಾಗಲಿ ಯಾವುದೇ ಕಟ್ಟಡವನ್ನು ನಿರ್ಮಿಸಲು, ತತ್ಕಾಲದಲ್ಲಿ ಜಾರಿಯಲ್ಲಿರುವ ಕಟ್ಟಡ ವಿನಿಯಮಗಳು ಅಥವಾ ಪುರಸಭಾ ಉಪವಿಧಿಗಳ ಅಡಿಯಲ್ಲಿ ಅನುಮತಿಸಬಹುದಾದ ಯಾವುವೇ ಖಾಲಿ ನಿವೇಶನಗಳನ್ನು ಒಳಗೊಂಡಿರುವಲ್ಲಿ ಮತ್ತು ಅಂಥ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿರುವ ಮಾಲೀಕನು, ಬಾಡಿಗೆದಾರನ ಜೊತೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಆತನಿಂದ ಆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅಸಮರ್ಥನಾಗಿರುವಲ್ಲಿ, ನ್ಯಾಯಾಲಯಕ್ಕೆ, ಈ ಸಂಬಂಧದಲ್ಲಿ ಮಾಲೀಕನು ಅದಕ್ಕೆ ಸಲ್ಲಿಸುವ ಅರ್ಜಿಯ ಮೇಲೆ ಮಾಲೀಕನು ಕಾಮಗಾರಿಯನ್ನು ಪ್ರಾರಂಭಿಸಲು ಸಿದ್ಧನಿದ್ದಾನೆ ಮತ್ತು ಇಚ್ಛಿಸಿದ್ದಾನೆಂಬುದು ಮತ್ತು ಖಾಲಿ ಭೂಮಿಯನ್ನು ಕಟ್ಟಡದ ಉಳಿದ ಭಾಗದಿಂದ ಪ್ರತ್ಯೇಕವಾಗಿಸಿರುವುದು ಬಾಡಿಗೆದಾರನಿಗೆ ಅನುಚಿತ ತೊಂದರೆಯನ್ನು ಉಂಟು ಮಾಡುವುದಿಲ್ಲವೆಂಬುದು ಮನದಟ್ಟಾದರೆ ನ್ಯಾಯಾಲಯವು,-

(ಎ) ಹಾಗೆ ಪ್ರತ್ಯೇಕಿಸಲು ನಿರ್ದೇಶಿಸಬಹುದು ;

(ಬಿ) ಮಾಲೀಕನಿಗೆ ಖಾಲಿ ಭೂಮಿಯ ಸ್ವಾಧೀನತೆಯನ್ನು ಕೊಡಬಹುದು ;

(ಸಿ) ಆವರಣದ ಉಳಿದ ಭಾಗಕ್ಕೆ ಬಾಡಿಗೆದಾರನು ಸಂದಾಯ ಮಾಡಬೇಕಾದ ಬಾಡಿಗೆಯನ್ನು ನಿರ್ಧರಿಸಲು ಪ್ರಕರಣವನ್ನು ನಿಯಂತ್ರಣಾಧಿಕಾರಿಗೆ ಉಲ್ಲೇಖಿಸಬಹುದು ; ಮತ್ತು

(□ □) ಪ್ರಕರಣದ ಸನ್ನಿವೇಶಗಳಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ಇತರ ಆದೇಶವನ್ನು ಮಾಡಬಹುದು.

**41. ಮಾಲೀಕನಿಗೆ ಖಾಲಿ ಭೂಮಿಯ ಸ್ವಾಧೀನತೆ.**- ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾವುವೇ ಆವರಣಗಳಲ್ಲಿನ ಒಬ್ಬ ಬಾಡಿಗೆದಾರನ ಹಿತಾಸಕ್ತಿಯನ್ನು ಯಾವ ಕಾರಣಕ್ಕಾಗಿಯಾಗಲಿ ನಿರ್ಧರಿಸಿರುವಲ್ಲಿ ಮತ್ತು ಆವರಣದ ಸ್ವಾಧೀನತೆಯನ್ನು ಪುನಃ ಪಡೆದುಕೊಳ್ಳಲು ಈ ಅಧಿನಿಯಮದ ಅಡಿಯಲ್ಲಿ ನ್ಯಾಯಾಲಯವು ಒಂದು ಆದೇಶವನ್ನು ಹೊರಡಿಸಿರುವಲ್ಲಿ, ಆ ಆದೇಶವು 34ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಆವರಣದ ಅನುಭೋಗದಲ್ಲಿರಬಹುದಾದ ಎಲ್ಲ ವ್ಯಕ್ತಿಗಳಿಗೂ ಬದ್ಧವಾಗಿರತಕ್ಕದ್ದು ಮತ್ತು ಅದರಲ್ಲಿರುವ ಖಾಲಿ ಭೂಮಿಯ ಸ್ವಾಧೀನತೆಯನ್ನು ಅಂಥ ಎಲ್ಲ ವ್ಯಕ್ತಿಗಳನ್ನು ಹೊರಹಾಕಿ ಮಾಲೀಕನಿಗೆ ಕೊಡತಕ್ಕದ್ದು :

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಅಂಥ ಆವರಣಕ್ಕೆ ಸ್ವತಂತ್ರ ಹಕ್ಕುಳ್ಳ ಯಾವನೇ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**42. ನ್ಯಾಯಾಲಯವು ಅನುಸರಿಸಬೇಕಾದ ಕಾರ್ಯವಿಧಾನ.**- (1) ಈ ಅಧಿನಿಯಮದ ಅಡಿಯಲ್ಲಿ ಯಾವನೇ ವ್ಯಕ್ತಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಯಾವುದೇ ಆದೇಶವನ್ನು ನ್ಯಾಯಾಲಯವು ಹಾಗೆ ಹೊರಡಿಸಲು ಉದ್ದೇಶಿಸಿರುವ ಆದೇಶದ ವಿರುದ್ಧ ಕಾರಣ ತೋರಿಸಲು ಆ ವ್ಯಕ್ತಿಗೆ ಯುಕ್ತ ಅವಕಾಶ ನೀಡಿದ ಹೊರತು ಮತ್ತು ಅವನ ಆಕ್ಷೇಪಣೆಗಳು ಯಾವುವಾದರೂ ಇದ್ದಲ್ಲಿ ಮತ್ತು ಅವುಗಳ ಸಮರ್ಥನೆಗಾಗಿ ಅವನು ಹಾಜರುಪಡಿಸಬಹುದಾದ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯವು ಪರಿಗಣಿಸುವವರೆಗೆ ಈ ಅಧಿನಿಯಮದಡಿ ಯಾವುದೇ ಆದೇಶವನ್ನು ನ್ಯಾಯಾಲಯವು ಹೊರಡಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೆ ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ನ್ಯಾಯಾಲಯವು ತನ್ನ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ ವಿಚಾರಣೆಯನ್ನು ನಡೆಸುವಾಗ ಸಾಕ್ಷ್ಯವನ್ನು ಅಭಿಲೇಖಿಸುವುದೂ ಒಳಗೊಂಡಂತೆ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಲಘು ವಿವಾದಗಳ ನ್ಯಾಯಾಲಯದ ಪದ್ಧತಿ ಮತ್ತು ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(3) ವ್ಯವಹರಣೆಯ ಆದ್ಯಂತ ಒಬ್ಬ ಪಕ್ಷಕಾರನ ಕೋರಿಕೆಯಂತೆ ನ್ಯಾಯಾಲಯವು ಸಾಮಾನ್ಯವಾಗಿ ಮೂರಕ್ಕೂ ಹೆಚ್ಚಿನ ಮುಂದೂಡಿಕೆಗಳಿಗೆ ಅವಕಾಶ ನೀಡತಕ್ಕದ್ದಲ್ಲ ಮತ್ತು ಅದು ಅನ್ಯಥಾ ತೀರ್ಮಾನಿಸಿದ್ದಲ್ಲಿ ಅದಕ್ಕೆ ಕಾರಣಗಳನ್ನು ಅಭಿಲೇಖಿಸತಕ್ಕದ್ದು ಮತ್ತು ಮುಂದೂಡಿಕೆಯ ಯುಕ್ತ ವೆಚ್ಚವನ್ನು ಇನ್ನೊಬ್ಬ ಪಕ್ಷಕಾರನಿಗೆ ಸಂದಾಯ ಮಾಡುವಂತೆ ಆದೇಶಿಸತಕ್ಕದ್ದು.

(4) ನ್ಯಾಯಾಲಯವು, ಎದುರು ಪಕ್ಷಕಾರನಿಗೆ ಖುದ್ದು ಜಾರಿಗಾಗಿ ಸಮನ್ನುಗಳನ್ನು ಹೊರಡಿಸುವುದರ ಜೊತೆಗೆ ತಲುಪೊಪ್ಪಿಗೆ ಸಹಿತವಾದ ರಿಜಿಸ್ಟರ್ಡ್ ಅಂಚೆಯ ಮೂಲಕ ಸಮನ್ನುಗಳನ್ನು ಎದುರು ಪಕ್ಷಕಾರನಿಗೆ ಅಥವಾ ಅವುಗಳನ್ನು ಅಂಗೀಕರಿಸಲು ಅಧಿಕಾರ ಪಡೆದ ಏಜೆಂಟನಿಗೆ ಎದುರು ಪಕ್ಷಕಾರನು ಅಥವಾ ಅವನ ಏಜೆಂಟನು ವಾಸ್ತವಿಕವಾಗಿ ಮತ್ತು ಸ್ವಇಚ್ಛೆಯಿಂದ ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಸಂಪಾದನೆಗೆ ಖುದ್ದಾಗಿ ಕೆಲಸ ಮಾಡುತ್ತಿರುವ ಸ್ಥಳದಲ್ಲಿನ ಅವರ ವಿಳಾಸಕ್ಕೆ ಜಾರಿ ಮಾಡಬೇಕೆಂದು ಸಹ ನಿರ್ದೇಶಿಸತಕ್ಕದ್ದು ಮತ್ತು ಪ್ರಕರಣದ ಸನ್ನಿವೇಶಗಳು ಅಗತ್ಯಪಡಿಸಿದಲ್ಲಿ ಎದುರು ಪಕ್ಷಕಾರನು ವಾಸಿಸುತ್ತಿದ್ದನೆಂದು ಅಥವಾ ತನ್ನ ವ್ಯವಹಾರ ನಡೆಸುತ್ತಿದ್ದನೆಂದು ಅಥವಾ ಸಂಪಾದನೆಗಾಗಿ ಖುದ್ದಾಗಿ ಕೆಲಸ ಮಾಡುತ್ತಿದ್ದನೆಂದು ಕೊನೆಯದಾಗಿ ತಿಳಿದು ಬಂದ ಸ್ಥಳದಲ್ಲಿ ಪ್ರಸಾರದಲ್ಲಿರುವ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸುವಂತೆ ಸಹ ನಿರ್ದೇಶಿಸಬಹುದು.

(5) ಎದುರು ಪಕ್ಷಕಾರನು ಅಥವಾ ಅವನ ಏಜೆಂಟನು ಸಹಿ ಮಾಡಬೇಕೆಂದು ತಾತ್ಪರ್ಯವಾಗುವ ತಲುಪೊಪ್ಪಿಗೆಯು ಅಥವಾ ಸಮನ್ನುಗಳು ಅಡಕವಾಗಿರುವ ರಿಜಿಸ್ಟರ್ಡ್ ವಸ್ತುವು, ವಿಳಾಸದಾರನು ತಿರಸ್ಕರಿಸಿದ್ದಾನೆ ಎಂದು ತಾತ್ಪರ್ಯವಾಗುವ, ಅಂಚೆ ಏಜೆಂಟನಿಂದ ಮಾಡಲಾದ ಹಿಂಬರಹದೊಂದಿಗೆ ನ್ಯಾಯಾಲಯಕ್ಕೆ ವಾಪಾಸಾದಾಗ, ನ್ಯಾಯಾಲಯವು ಸಮನ್ನುಗಳು ನ್ಯಾಯಸಮ್ಮತವಾಗಿ ಜಾರಿಯಾಗಿವೆ ಎಂದು ಘೋಷಿಸಬಹುದು.

(6) (ಎ) 27ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್), (ಹೆಚ್) ಅಥವಾ (ಎನ್) ಖಂಡದಲ್ಲಿ ಅಥವಾ 30,31, ಅಥವಾ 37ನೇ ಪ್ರಕರಣಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳ ಮೇಲೆ ಯಾವುದೇ ಆವರಣದ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕಾಗಿ ಸಲ್ಲಿಸಿದ ಮಾಲೀಕನ ಪ್ರತಿಯೊಂದು ಅರ್ಜಿಯನ್ನು ಈ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ವ್ಯವಹರಿಸತಕ್ಕದ್ದು.

(ಬಿ) ಪ್ರತಿಯೊಬ್ಬ ಬಾಡಿಗೆದಾರನು, ಅವನಿಗೆ ಸಮನ್ನುಗಳು ಸಾಮಾನ್ಯ ರೀತಿಯಲ್ಲಾಗಲಿ ಅಥವಾ ನಿಗದಿತ ನಮೂನೆಯಲ್ಲಿ ರಿಜಿಸ್ಟರ್ಡ್ ಅಂಚೆ ಮೂಲಕ ಯುಕ್ತವಾಗಿ ಜಾರಿಯಾಗಿದ್ದಲ್ಲಿ ಅವನು ಅರ್ಜಿಯನ್ನು ವಿರೋಧಿಸುವುದಕ್ಕೆ ಕಾರಣಗಳನ್ನು ತಿಳಿಸುವ ಅಫಿದಾವಿತ್ತನ್ನು ದಾಖಲು ಮಾಡಿದ ಹೊರತು ಮತ್ತು ಈ ಮುಂದೆ ಉಪಬಂಧಿಸಿದಂತೆ ನ್ಯಾಯಾಲಯದ ಅನುಮತಿಯನ್ನು ಪಡೆದ ಹೊರತು ಅವನು ಆವರಣದಿಂದ ಹೊರಹಾಕುವ ಕೋರಿಕೆಯನ್ನು ವಿರೋಧಿಸತಕ್ಕದ್ದಲ್ಲ ಮತ್ತು ಸಮನ್ನುಗಳ ಅನುಸರಣೆಯಲ್ಲಿ ಅವನು ಹಾಜರಾಗಲು ಮತ್ತು ಅಂಥ ಅನುಮತಿಯನ್ನು ಪಡೆಯಲು ತಪ್ಪಿದ್ದಲ್ಲಿ, ಮಾಲೀಕನು ಅವನ ಅರ್ಜಿಯಲ್ಲಿ ಹೊರಹಾಕುವ ಬಗ್ಗೆ ನೀಡಿದ ಹೇಳಿಕೆಯನ್ನು ಬಾಡಿಗೆದಾರನು ಒಪ್ಪಿಕೊಂಡಿದ್ದಾನೆಂದು ಪರಿಗಣಿಸಲಾಗುವುದು ಮತ್ತು ಅರ್ಜಿದಾರನು ಮೇಲೆ ಹೇಳಿದ ಕಾರಣಗಳಿಗಾಗಿ ಹೊರಹಾಕುವ ಆದೇಶಕ್ಕೆ ಹಕ್ಕುಳ್ಳವನಾಗಿರುತ್ತಾನೆ.

(ಸಿ) ಬಾಡಿಗೆದಾರನು ಸಲ್ಲಿಸಿದ ಅಫಿದಾವಿತ್ತಿನಿಂದ ಮಾಲೀಕನು ಆವರಣದ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕೆ ಆದೇಶ ಪಡೆಯುವ ಹಕ್ಕನ್ನು ಕಳೆದುಕೊಳ್ಳಬಹುದೆಂದು ಕಂಡು ಬರುವ ಅಂಥ ಸಂಗತಿಗಳು ತಿಳಿದು ಬಂದರೆ, ನ್ಯಾಯಾಲಯವು ಅರ್ಜಿಯನ್ನು ವಿರೋಧಿಸಲು ಬಾಡಿಗೆದಾರನಿಗೆ ಅನುಮತಿ ನೀಡತಕ್ಕದ್ದು.

(□ □) ಅರ್ಜಿಯನ್ನು ವಿರೋಧಿಸಲು ಬಾಡಿಗೆದಾರನಿಗೆ ಅನುಮತಿ ನೀಡಿದಲ್ಲಿ ನ್ಯಾಯಾಲಯವು ಸಾಮಾನ್ಯವಾಗಿ ಅಂಥ ಅನುಮತಿಯನ್ನು ನೀಡಿದ ಏಳು ದಿನಗಳೊಳಗೆ ವಿಚಾರಣೆಯನ್ನು ಪ್ರಾರಂಭಿಸತಕ್ಕದ್ದು ಮತ್ತು ದಿನದಿನವೂ ಮೊಕದ್ದಮೆಯ ವಿಚಾರಣೆಯನ್ನು ನಡೆಸಿ, ಅಂಥ ವಿಚಾರಣೆಯು ಪ್ರಾರಂಭವಾದ ಮೂವತ್ತು ದಿನಗಳಲ್ಲಿ ಅರ್ಜಿಯನ್ನು ಇತ್ಯರ್ಥಗೊಳಿಸತಕ್ಕದ್ದು. ಅಂಥ ಸಮಯದೊಳಗೆ ಅರ್ಜಿಯ ವಿಚಾರಣೆಯು ಪ್ರಾರಂಭವಾಗುವುದು ಅಥವಾ ಇತ್ಯರ್ಥವಾಗುವುದು ವಿಫಲವಾದಲ್ಲಿ ನ್ಯಾಯಾಲಯವು ಅದಕ್ಕಾಗಿ ಕಾರಣಗಳನ್ನು ಅಭಿಲೇಖಿಸತಕ್ಕದ್ದು.

(ಇ) (ಸಿ) ಖಂಡದ ಅಡಿಯಲ್ಲಿ ವಿರೋಧಿಸುವುದಕ್ಕೆ ಬಾಡಿಗೆದಾರನಿಗೆ ಅನುಮತಿಯನ್ನು ನಿರಾಕರಿಸಿದಲ್ಲಿ, ಅವನು ಅಂಥ ನಿರಾಕರಣೆಯ ದಿನಾಂಕದಿಂದ ಹತ್ತು ದಿನಗಳೊಳಗೆ ನ್ಯಾಯಾಲಯಕ್ಕೆ ಪುನರ್ ಅವಲೋಕನಕ್ಕಾಗಿ ಅರ್ಜಿಯನ್ನು

ಸಲ್ಲಿಸಬಹುದು ಮತ್ತು ಅಂಥ ಅರ್ಜಿಯನ್ನು ಸಲ್ಲಿಸಿದ ಏಳು ದಿನಗಳೊಳಗಾಗಿ ಅದನ್ನು ಇತ್ಯರ್ಥಗೊಳಿಸಲು ನ್ಯಾಯಾಲಯವು ಪ್ರಯತ್ನಿಸತಕ್ಕದ್ದು.

(7) ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು ಸಾಧ್ಯವಾದಷ್ಟು ತ್ವರಿತವಾಗಿ ವಿಚಾರಣೆ ಮಾಡತಕ್ಕದ್ದು ಮತ್ತು ವಿಚಾರಣೆಯನ್ನು ಮುಕ್ತಾಯಗೊಳಿಸಿ ಅರ್ಜಿಯನ್ನು, ಅದನ್ನು ಸಲ್ಲಿಸಿದ ಆರು ತಿಂಗಳೊಳಗೆ ಇತ್ಯರ್ಥಗೊಳಿಸುವುದಕ್ಕೆ ಪ್ರಯತ್ನಿಸತಕ್ಕದ್ದು.

**43. ಮಾಲೀಕ ಹಾಗೂ ಬಾಡಿಗೆದಾರ ಸಂಬಂಧದ ವಿವಾದಗಳು.**- (1) ನ್ಯಾಯಾಲಯದ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ ಪಕ್ಷಕಾರರ ನಡುವೆ, ಮಾಲೀಕ ಹಾಗೂ ಬಾಡಿಗೆದಾರ ಸಂಬಂಧ ಇರುವುದನ್ನು ನಿರಾಕರಿಸಿ ವಾದ ಏರ್ಪಟ್ಟಿರುವಲ್ಲಿ, ಗುತ್ತಿಗೆಯ ದಸ್ತಾವೇಜನ್ನು ಅಥವಾ ಗುತ್ತಿಗೆಯ ದಸ್ತಾವೇಜು ಇರದಿದ್ದಲ್ಲಿ, ಮಾಲೀಕನು ಸಹಿ ಮಾಡಿರುವನೆಂದು ತಾತ್ಪರ್ಯವಾಗುವ, ಬಾಡಿಗೆ ಸಂದಾಯದ ಸ್ವೀಕೃತಿಯ ರಸೀದಿಯನ್ನು, ಆ ಸಂಬಂಧದ ಮೇಲುನೋಟದ ಸಾಕ್ಷ್ಯವಾಗಿ ಒಪ್ಪಿಕೊಳ್ಳುವುದು ನ್ಯಾಯಾಲಯಕ್ಕೆ ಕಾನೂನುಬದ್ಧವಾಗಿರತಕ್ಕದ್ದು ಹಾಗೂ ಪ್ರಕರಣದ ವಿಚಾರಣೆಯನ್ನು ಮುಂದುವರಿಸತಕ್ಕದ್ದು.

(2) (ಎ) ವಿವಾದಿಸಲ್ಪಟ್ಟ ಗುತ್ತಿಗೆಯು ಬಾಯಿ ಮಾತಿನದ್ದಾಗಿದ್ದಲ್ಲಿ ಮತ್ತು ಎರಡೂ ಪಕ್ಷಕಾರರು ಸಂಬಂಧವನ್ನು ನಿರಾಕರಿಸಿದ್ದಲ್ಲಿ ಮತ್ತು (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ಬಾಡಿಗೆ ಸಂದಾಯದ ರಸೀದಿ ಅಥವಾ ಸ್ವೀಕೃತಿ ಪತ್ರ ಇರದಿದ್ದಲ್ಲಿ, ಅಥವಾ

(□□) ಗುತ್ತಿಗೆಯ ದಸ್ತಾವೇಜು ಅಥವಾ ಬಾಡಿಗೆ ಸಂದಾಯದ ರಸೀದಿ ಅಥವಾ ಸ್ವೀಕೃತಿ ಪತ್ರವು ನಿಜವಾಗಿಯೂ ಇರುವುದೆಂದು ಅನುಮಾನಿಸಲು ಕಾರಣವಿದೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ,

-ನ್ಯಾಯಾಲಯವು, ತನ್ನ ಮುಂದಿರುವ ಎಲ್ಲ ಹೆಚ್ಚಿನ ವ್ಯವಹರಣೆಗಳನ್ನು ಕೂಡಲೇ ನಿಲ್ಲಿಸತಕ್ಕದ್ದು ಮತ್ತು ತಮ್ಮ ಹಕ್ಕುಗಳ ಘೋಷಣೆಗಾಗಿ ಸಿವಿಲ್ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಕ್ಷಮ ನ್ಯಾಯಾಲಯವನ್ನು ಸಂಪರ್ಕಿಸುವಂತೆ ಪಕ್ಷಕಾರರನ್ನು ನಿರ್ದೇಶಿಸತಕ್ಕದ್ದು.

**44. ವಿವಾದಗಳನ್ನು ರಾಜಿಯ ಮೂಲಕ ಇತ್ಯರ್ಥಗೊಳಿಸುವುದಕ್ಕೆ ನ್ಯಾಯಾಲಯದ ಉತ್ತೇಜನ.**- (1) ಅರ್ಜಿಯನ್ನು ವಿರೋಧಿಸಲು ಪ್ರತಿವಾದಿಯು ಪ್ರತಿವಾದವನ್ನು ದಾಖಲು ಮಾಡಿದ ಅಥವಾ ದಾಖಲು ಮಾಡಲು ಅನುಮತಿಸಲಾದ ಎಲ್ಲಾ ಮೊಕದ್ದಮೆಗಳಲ್ಲಿ ಸಾಕ್ಷ್ಯಗಳನ್ನು ಅಭಿಲೇಖಿಸುವುದಕ್ಕೆ ಮುಂಚೆ, ಯಾವುದೇ ಸಮಯದಲ್ಲಿ ನ್ಯಾಯಾಲಯವು, ಸೂಕ್ತ ಮೊಕದ್ದಮೆಗಳಲ್ಲಿ, ಅವುಗಳನ್ನು ಕಾನೂನು ಸೇವಾ ಪ್ರಾಧಿಕಾರಗಳ ಅಧಿನಿಯಮ, 1987ರ (1987ರ ಕೇಂದ್ರ ಅಧಿನಿಯಮ, 39) ಅಡಿಯಲ್ಲಿ ಪ್ರಾಧಿಕಾರಕ್ಕೆ ಒಪ್ಪಿಸುವ ಮೂಲಕ ಪಕ್ಷಕಾರರ ನಡುವಿನ ವಾದವನ್ನು ರಾಜಿ ಮೂಲಕ ಇತ್ಯರ್ಥಪಡಿಸುವುದಕ್ಕೆ ಪ್ರಯತ್ನಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ ಮತ್ತು ನಿಯಮಿಸಬಹುದಾದ ನಿಯಮಗಳಿಗೆ ಒಳಪಟ್ಟು ಶೀಘ್ರವಾಗಿ ರಾಜಿಯ ಮೂಲಕ ಇತ್ಯರ್ಥ ಮಾಡುವುದಕ್ಕೆ ಉತ್ತೇಜನ ನೀಡಲು, ನ್ಯಾಯಾಲಯವು ಅದು ಸೂಕ್ತವೆಂದು ಭಾವಿಸುವಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(3) ಮೊಕದ್ದಮೆಯನ್ನು ರಾಜಿಯ ಮೂಲಕ ಇತ್ಯರ್ಥಗೊಳಿಸಿದ್ದರೆ, ನ್ಯಾಯಾಲಯವು ಇತ್ಯರ್ಥದ ನಿಬಂಧನೆಗಳನ್ನು ಅಭಿಲೇಖಿಸತಕ್ಕದ್ದು ಮತ್ತು ಆ ನಿಬಂಧನೆಗಳಿಗನುಸಾರವಾಗಿ ಅಂತಿಮ ಆದೇಶವನ್ನು ಹೊರಡಿಸತಕ್ಕದ್ದು.

**45. ಹೊರಹಾಕುವುದಕ್ಕೆ ಸಂಬಂಧಪಟ್ಟಂತೆ ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ ಬಾಡಿಗೆಯ ಠೇವಣಿ ಮತ್ತು ಸಂದಾಯ.**- (1) 27ನೇ ಪ್ರಕರಣದ ಅಡಿಯಲ್ಲಿ ಮಾಲೀಕನು ಯಾವ ಬಾಡಿಗೆದಾರನ ವಿರುದ್ಧ ಹೊರಹಾಕುವುದಕ್ಕೆ ಸಂಬಂಧಪಟ್ಟಂತೆ ಅರ್ಜಿಯನ್ನು ಸಲ್ಲಿಸಿರುವನೋ ಆ ಬಾಡಿಗೆದಾರನು ಆ ಪ್ರಕರಣದ ಅಡಿಯಲ್ಲಿ ನ್ಯಾಯಾಲಯದ ಮುಂದೆ ಅರ್ಜಿಯನ್ನು ವಿರೋಧಿಸಲು ಅಥವಾ 27ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ನ್ಯಾಯಾಲಯವು ನೀಡಿದ ಆದೇಶದ ವಿರುದ್ಧ 46ನೇ ಪ್ರಕರಣದ ಅಡಿಯಲ್ಲಿ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸಲು ಅಥವಾ ಕ್ರಮ ಜರುಗಿಸಲು ಅವನು ಆವರಣಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಿದ ಅಥವಾ ಠೇವಣಿ ಇಟ್ಟ ದಿನಾಂಕದವರೆಗೆ ಬಾಕಿ ಇರುವ ಎಲ್ಲಾ ಬಾಡಿಗೆ ಮತ್ತು ಇತರ ವೆಚ್ಚಗಳನ್ನು ಮಾಲೀಕನಿಗೆ ಸಂದಾಯ ಮಾಡಿದ್ದ ಹೊರತು ಅಥವಾ ನ್ಯಾಯಾಲಯದಲ್ಲಿ ಅಥವಾ ಜಿಲ್ಲಾ ನ್ಯಾಯಾಧೀಶನಲ್ಲಿ ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯದಲ್ಲಿ ಠೇವಣಿ ಇಟ್ಟ ಹೊರತು ಮತ್ತು ನ್ಯಾಯಾಧೀಶ

ಅಥವಾ ಸಂದರ್ಭಾನುಸಾರವಾಗಿ ಉಚ್ಚ ನ್ಯಾಯಾಲಯದಲ್ಲಿನ ವ್ಯವಹರಣೆಗಳು ಮುಕ್ತಾಯವಾಗುವವರೆಗೆ ಮುಂದೆ ಬಾಕಿಯಾಗಬಹುದಾದ ಬಾಡಿಗೆಯನ್ನು ಕೊನೆಯದಾಗಿ ಸಂದಾಯ ಮಾಡಿದ ದರದಲ್ಲಿ ಅಥವಾ ಸಂದಾಯ ಮಾಡಲು ಒಪ್ಪಂದವಾದ ದರದಲ್ಲಿ ಸಂದಾಯ ಮಾಡುವುದನ್ನು ಅಥವಾ ಠೇವಣಿ ಇಡುವುದನ್ನು ಮುಂದುವರಿಸಿದ ಹೊರತು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿನ ಬಾಡಿಗೆ ಮತ್ತು ಇತರ ವೆಚ್ಚಗಳ ಠೇವಣಿಯನ್ನು ನಿಯಮಿಸಿದ ಅವಧಿ ಮತ್ತು ರೀತಿಯಲ್ಲಿ ಮಾಡತಕ್ಕದ್ದು ಮತ್ತು ಅದು (5)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ಜಾರಿ ಮಾಡುವುದಕ್ಕೆ ನಿಯಮಿಸಬಹುದಾದ ಅಂಥ ಶುಲ್ಕದೊಂದಿಗೆ ಕೂಡಿರತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಅಥವಾ ಠೇವಣಿ ಇಡಬೇಕಾದ ಬಾಡಿಗೆ ಮತ್ತು ಇತರ ವೆಚ್ಚಗಳ ಮೊತ್ತದ ಬಗ್ಗೆ ಯಾವುದೇ ವಿವಾದವಿದ್ದಲ್ಲಿ, ನ್ಯಾಯಾಲಯವು, ಬಾಡಿಗೆದಾರನಿಂದ ಅಥವಾ ಮಾಲೀಕನಿಂದ ಅದಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಅದು ಅವಶ್ಯಕವೆಂದು ಭಾವಿಸಿದಂಥ ವಿಚಾರಣೆಯನ್ನು ಮಾಡಿದ ನಂತರ ಸಂದಾಯ ಮಾಡಬೇಕಾದ ಅಥವಾ ಠೇವಣಿ ಇಡಬೇಕಾದ ಬಾಡಿಗೆಯನ್ನು ಕ್ಷಿಪ್ರವಾಗಿ ನಿರ್ಧರಿಸತಕ್ಕದ್ದು.

(4) ಮೇಲೆ ಹೇಳಿದಂತೆ ಯಾರೇ ಬಾಡಿಗೆದಾರನು ಬಾಡಿಗೆಯನ್ನು ಸಂದಾಯ ಮಾಡಲು ಅಥವಾ ಠೇವಣಿಯಿಡಲು ತಪ್ಪಿದರೆ, ನ್ಯಾಯಾಲಯ, ಜಿಲ್ಲಾ ನ್ಯಾಯಾಧೀಶರು ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯವು, ಬಾಡಿಗೆದಾರನು ಅದಕ್ಕೆ ವಿರುದ್ಧವಾದ ಸಾಕಷ್ಟು ಕಾರಣಗಳನ್ನು ತೋರಿಸಿದ ಹೊರತು, ಮುಂದಿನ ಎಲ್ಲಾ ವ್ಯವಹರಣೆಗಳನ್ನು ಸ್ಥಗಿತಗೊಳಿಸತಕ್ಕದ್ದು ಮತ್ತು ಮಾಲೀಕನಿಗೆ ಆವರಣದ ಸ್ವಾಧೀನತೆಯನ್ನು ಒಪ್ಪಿಸುವಂತೆ ನಿರ್ದೇಶಿಸಿ ಬಾಡಿಗೆದಾರನಿಗೆ ಆದೇಶ ನೀಡತಕ್ಕದ್ದು ಅಥವಾ ಅಪೀಲನ್ನು ಅಥವಾ ಸಂದರ್ಭಾನುಸಾರ ಪುನರೀಕ್ಷಣಾ ಅರ್ಜಿಯನ್ನು ವಜಾ ಮಾಡತಕ್ಕದ್ದು.

(5) (1)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಠೇವಣಿಯನ್ನು ಮಾಡಿದಲ್ಲಿ ನ್ಯಾಯಾಲಯ, ಜಿಲ್ಲಾ ನ್ಯಾಯಾಧೀಶರು ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯವು ಠೇವಣಿಯ ಬಗ್ಗೆ ಮಾಲೀಕನಿಗೆ ನಿಯಮಿಸಿದ ರೀತಿಯಲ್ಲಿ ನೋಟೀಸು ಜಾರಿಯಾಗುವಂತೆ ಮಾಡತಕ್ಕದ್ದು ಮತ್ತು ಠೇವಣಿ ಇಡಲಾದ ಮೊಬಲಗನ್ನು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಮಾಲೀಕನು ಈ ಬಗ್ಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಮೇಲೆ ಹಿಂದಕ್ಕೆ ಪಡೆಯಬಹುದು.

**46. ಪುನರೀಕ್ಷಣೆ.**- (1) ಉಚ್ಚನ್ಯಾಯಾಲಯವು, ಯಾವುದೇ ಸಮಯದಲ್ಲಿ, 3ನೇ ಪ್ರಕರಣದ (ಸಿ) ಖಂಡದ (i) ಮತ್ತು (ii)ನೇ ಬಾಬುಗಳಲ್ಲಿ ಉಲ್ಲೇಖಿಸಲಾದ ಲಘು ವಿವಾದ ನ್ಯಾಯಾಲಯದಿಂದ ಅಥವಾ ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ನ್ಯಾಯಾಲಯದಿಂದ ಹೊರಡಿಸಿದ ಯಾವುದೇ ಆದೇಶವನ್ನು ಅಥವಾ ನಡೆಸಿದ ವ್ಯವಹರಣೆಗಳನ್ನು ತರಿಸಿಕೊಳ್ಳಬಹುದು ಮತ್ತು ಅಂಥ ಆದೇಶದ ಅಥವಾ ವ್ಯವಹರಣೆಯ ಕಾನೂನುಸಮ್ಮತತೆ ಅಥವಾ ಸರಿತನದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಪರೀಕ್ಷಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಭಾವಿಸಿದ ಅಂಥ ಆದೇಶವನ್ನು ಹೊರಡಿಸಬಹುದು.

(2) ಜಿಲ್ಲಾ ನ್ಯಾಯಾಧೀಶರು, ಯಾವುದೇ ಸಮಯದಲ್ಲಿ (3)ನೇ ಪ್ರಕರಣದ (ಸಿ) ಖಂಡ (iii)ನೇ ಬಾಬಿನಲ್ಲಿ ಉಲ್ಲೇಖಿಸಿದ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ ದಿಂದ ಹೊರಡಿಸಿದ ಯಾವುದೇ ಆದೇಶವನ್ನು ಅಥವಾ ನಡೆಸಿದ ವ್ಯವಹರಣೆಗಳನ್ನು ಅಂಥ ಆದೇಶದ ಅಥವಾ ವ್ಯವಹರಣೆಯ ಕಾನೂನು ಸಮ್ಮತತೆ ಅಥವಾ ಸರಿತನದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶದಿಂದ

ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಈ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸಿದ ಆದೇಶವನ್ನು ಹೊರಡಿಸಬಹುದು.

(3) ಉಚ್ಚ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಾಧೀಶರ ಸಮಕ್ಷಮದಲ್ಲಿನ ಎಲ್ಲಾ ವ್ಯವಹರಣೆಗಳಿಗೆ ಸಂಬಂಧಿಸಿದ ಪ್ರಾಸಂಗಿಕ ವೆಚ್ಚಗಳು ಉಚ್ಚ ನ್ಯಾಯಾಲಯ ಅಥವಾ ಸಂದರ್ಭಾನುಸಾರ ಜಿಲ್ಲಾ ನ್ಯಾಯಾಧೀಶರ ವಿವೇಚನೆಯಲ್ಲಿರುತ್ತದೆ.

## ಅಧ್ಯಾಯ - VII

### ಮಾಲೀಕನು ಮತ್ತು ಬಾಡಿಗೆದಾರರ ವಿಶೇಷ ಬಾಧ್ಯತೆಗಳು

47. **ಆವರಣಗಳನ್ನು ಉತ್ತಮ ದುರಸ್ತಿ ಸ್ಥಿತಿಯಲ್ಲಿಡುವುದು ಮಾಲೀಕನ ಕರ್ತವ್ಯವಾಗಿರತಕ್ಕದ್ದು.**- (1) ಲಿಖಿತದಲ್ಲಿನ ಯಾವುದೇ ಕರಾರಿಗೆ ಒಳಪಟ್ಟು ಪ್ರತಿಯೊಬ್ಬ ಮಾಲೀಕನು Vನೇ ಅನುಸೂಚಿಯ ''ಎ'' ಭಾಗದ ಅಡಿಯ ವಿಷಯಗಳಿಗೆ ಸಂಬಂಧಪಟ್ಟಂತೆ ಆವರಣವನ್ನು ಉತ್ತಮ ಮತ್ತು ಬಾಡಿಗೆ ಯೋಗ್ಯ ದುರಸ್ತಿ ಸ್ಥಿತಿಯಲ್ಲಿಡಲು ಬದ್ಧನಾಗಿರತಕ್ಕದ್ದು.

**ವಿವರಣೆ.**- ಈ ಪ್ರಕರಣ ಮತ್ತು 49ನೇ ಪ್ರಕರಣದ ಅಡಿಯಲ್ಲಿ ಉತ್ತಮ ಮತ್ತು ಬಾಡಿಗೆ ಯೋಗ್ಯ ದುರಸ್ತಿ ಸ್ಥಿತಿಗಳು ಎಂದರೆ, ಸಾಮಾನ್ಯ ಸವೆತಗಳನ್ನು ಹೊರತು ಪಡಿಸಿ ಬಾಡಿಗೆ ಕೊಟ್ಟಾಗ ಅದು ಇದ್ದ ಸ್ಥಿತಿಯಲ್ಲಿಯೇ ಇರುವಂತೆ ದುರಸ್ತಿ ಮಾಡಿಸುವುದು.

(2) Vನೇ ಅನುಸೂಚಿಯ ''ಎ'' ಭಾಗದ ಅಡಿಯಲ್ಲಿ ಬರುವ ವಿಷಯಕ್ಕೆ ಸಂಬಂಧಪಟ್ಟಂತೆ ಅನುಚಿತ ಅನಾನುಕೂಲತೆಯೊಂದಿಗೆ ಹೊರತು, ದುರಸ್ತಿ ಮಾಡಿಸದೆ ಕಟ್ಟಡವು ವಾಸಯೋಗ್ಯವಾಗಿಲ್ಲದಿರುವಲ್ಲಿ ಅಥವಾ ಬಳಸುವಂತಿಲ್ಲದಿರುವಲ್ಲಿ ಲಿಖಿತ ನೋಟೀಸನ್ನು ನೀಡಿದ ತರುವಾಯ ಮೂರು ತಿಂಗಳ ಅವಧಿಯ ಒಳಗೆ ಮಾಲೀಕನು ಅಂಥ ದುರಸ್ತಿ ಮಾಡಿಸಲು ಉದಾಸೀನ ಮಾಡಿದರೆ ಅಥವಾ ತಪ್ಪಿದರೆ ಬಾಡಿಗೆದಾರನು ಸ್ವತಃ ತಾನೇ ಅಂಥ ದುರಸ್ತಿ ಮಾಡಿಸಲು ಅನುಮತಿಗಾಗಿ ನಿಯಂತ್ರಣಾಧಿಕಾರಿಗೆ ಅರ್ಜಿ ಸಲ್ಲಿಸಬಹುದು ಮತ್ತು ಅಂಥ ದುರಸ್ತಿಗಳ ಖರ್ಚುಗಳ ಅಂದಾಜನ್ನು ನಿಯಂತ್ರಣಾಧಿಕಾರಿಗೆ ಸಲ್ಲಿಸಬಹುದು ಮತ್ತು ಆ ತರುವಾಯ ನಿಯಂತ್ರಣಾಧಿಕಾರಿಯು ಮಾಲೀಕನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ಖರ್ಚುಗಳ ಅಂಥ ಅಂದಾಜನ್ನು ಪರಿಶೀಲಿಸಿದ ಮೇಲೆ ತಾನು ಅವಶ್ಯಕವೆಂದು ಭಾವಿಸುವಂಥ ವಿಚಾರಣೆಗಳನ್ನು ಮಾಡಿದ ನಂತರ ಲಿಖಿತ ಆದೇಶದ ಮೂಲಕ, ಬಾಡಿಗೆದಾರನು, ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದ ಅಂಥ ವೆಚ್ಚದಲ್ಲಿ ದುರಸ್ತಿಗಳನ್ನು ಮಾಡಿಕೊಳ್ಳಲು ಅನುಮತಿ ನೀಡಬಹುದು ಮತ್ತು ಆ ತರುವಾಯ ಬಾಡಿಗೆದಾರನು ಅಂಥ ದುರಸ್ತಿಗಳನ್ನು ತಾನೇ ಸ್ವತಃ ಮಾಡಿಸಿಕೊಳ್ಳುವುದು ಮತ್ತು ಅದರ ವೆಚ್ಚಗಳನ್ನು ಬಾಡಿಗೆಯಿಂದ ಕಳೆದುಕೊಳ್ಳುವುದು ಅಥವಾ ಮಾಲೀಕನಿಂದ ಇತರ ರೀತಿಯಲ್ಲಿ ವಸೂಲಿ ಮಾಡಿಕೊಳ್ಳುವುದು ಕಾನೂನು ಸಮ್ಮತವಾಗಿರತಕ್ಕದ್ದು :

ಪರಂತು, ಹಾಗೆ ಕಳೆದುಕೊಳ್ಳಲಾದ ಅಥವಾ ಯಾವುದೇ ವರ್ಷದಲ್ಲಿ ವಸೂಲಿ ಮಾಡಿಕೊಳ್ಳಬಹುದಾದ ಮೊತ್ತವು ಬಾಡಿಗೆದಾರನು ಆ ವರ್ಷಕ್ಕೆ ಸಂದಾಯ ಮಾಡಬೇಕಾದ ಬಾಡಿಗೆಯ ಅರ್ಧದಷ್ಟನ್ನು ಮೀರತಕ್ಕದಲ್ಲ ಮತ್ತು ಆ ವರ್ಷದಲ್ಲಿ ವಸೂಲಿ ಮಾಡದೇ ಉಳಿದ ಯಾವುದೇ ಮೊತ್ತವನ್ನು ಒಂದು ತಿಂಗಳಿನ ಬಾಡಿಗೆಯ ಶೇಕಡ ಇಪ್ಪತ್ತೈದರಷ್ಟಕ್ಕೆ ಮೀರದ ದರದಲ್ಲಿ ಮುಂಬರುವ ವರ್ಷಗಳಲ್ಲಿ ಬಾಡಿಗೆಯಿಂದ ಕಡಿತಗೊಳಿಸತಕ್ಕದ್ದು ಅಥವಾ ವಸೂಲಿ ಮಾಡತಕ್ಕದ್ದು :

ಮತ್ತು ಪರಂತು, ಒಂದು ಕಟ್ಟಡದಲ್ಲಿ ಒಂದಕ್ಕಿಂತ ಹೆಚ್ಚಿನ ಆವರಣಗಳನ್ನು ಮಾಲೀಕನು ಹೊಂದಿದ್ದರೆ, ಆ ಎಲ್ಲ ಬಾಡಿಗೆದಾರರು ಜಂಟಿಯಾಗಿ ದುರಸ್ತಿಗಳ ಕಾರ್ಯವನ್ನು ಕೈಗೊಳ್ಳಬಹುದು ಮತ್ತು ಅದಕ್ಕಾಗಿ ಆದ ವೆಚ್ಚಗಳನ್ನು ಪ್ರಮಾಣಾನುಸಾರವಾಗಿ ಹಂಚಿಕೊಳ್ಳತಕ್ಕದ್ದು.

(3) (2)ನೇ ಉಪ ಪ್ರಕರಣದಲ್ಲಿರುವುದಾವುದೂ-

(ಎ) ಬಾಡಿಗೆಗೆ ಕೊಡುವ ಸಮಯದಲ್ಲಿ ಆವರಣವು ಅನುಚಿತ ಅನಾನುಕೂಲತೆಯೊಂದಿಗೆ ಹೊರತು ವಾಸಕ್ಕೆ"ಅಥವಾ ಉಪಯೋಗಕ್ಕೆ ಯೋಗ್ಯವಿಲ್ಲದಿದ್ದು ಮತ್ತು ಬಾಡಿಗೆದಾರನು ಅದನ್ನು ಅದೇ ಸ್ಥಿತಿಯಲ್ಲಿಯೇ ತೆಗೆದುಕೊಳ್ಳಲು ಒಪ್ಪಿದ್ದರೆ ;

(ಬಿ) ಬಾಡಿಗೆಗೆ ಕೊಟ್ಟ ನಂತರ, ಆವರಣವು ಅನುಚಿತ ಅನಾನುಕೂಲದೊಂದಿಗೆ ಹೊರತು, ವಾಸಕ್ಕೆ ಅಥವಾ ಉಪಯೋಗಕ್ಕೆ ಯೋಗ್ಯವಲ್ಲದಂತೆ ಬಾಡಿಗೆದಾರನು ಮಾಡಿದ್ದರೆ ;

- ಆ ಆವರಣಗಳಿಗೆ ಅನ್ವಯವಾಗತಕ್ಕದ್ದಲ್ಲ.

**48. ಬಾಡಿಗೆದಾರನ ಕರ್ತವ್ಯಗಳು**.- (1) ಪ್ರತಿಯೊಬ್ಬ ಬಾಡಿಗೆದಾರನು Vನೇ ಅನುಸೂಚಿಯ ''ಬಿ'' ಭಾಗದ ಅಡಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಪಟ್ಟಂತೆ, ಆವರಣವನ್ನು ಉತ್ತಮ ಮತ್ತು ವಾಸಯೋಗ್ಯ ದುರಸ್ತಿ ಸ್ಥಿತಿಯಲ್ಲಿ ಇಡಲು ಬದ್ಧನಾಗಿರತಕ್ಕದ್ದು.

(2) Vನೇ ಅನುಸೂಚಿಯ ''ಬಿ'' ಭಾಗದ ಅಡಿಯಲ್ಲಿ ಬರುವ ವಿಷಯದ ಸಂಬಂಧದಲ್ಲಿ, ಆವರಣವು ಅನುಚಿತ ಅನಾನುಕೂಲತೆಯೊಂದಿಗೆ ಹೊರತು, ಯಾವ ದುರಸ್ತಿಗಳನ್ನು ಮಾಡಿಸದಿರುವಲ್ಲಿ ಆವರಣವು ವಾಸಕ್ಕೆ ಯೋಗ್ಯ ಅಥವಾ ಬಳಸಲು ಯೋಗ್ಯವಾಗುವುದಿಲ್ಲವೋ ಅಂಥ ದುರಸ್ತಿಗಳನ್ನು ಮಾಡಿಸಬೇಕಾಗಿದ್ದು ಮತ್ತು ಬಾಡಿಗೆದಾರನು ಅದನ್ನು ಕಡೆಗಣಿಸಿದರೆ ಅಥವಾ ಲಿಖಿತದಲ್ಲಿ ನೋಟೀಸನ್ನು ನೀಡಿದ ನಂತರ ಎರಡು ತಿಂಗಳ ಅವಧಿಯೊಳಗೆ ಹಾಗೆ ಮಾಡಿಸಲು ವಿಫಲನಾದರೆ, ಮಾಲೀಕನು ತಾನೇ ಸ್ವತಃ ಅಂಥ ದುರಸ್ತಿ ಮಾಡಿಸಲು ಅನುಮತಿಗಾಗಿ ನಿಯಂತ್ರಣಾಧಿಕಾರಿಗೆ ಅರ್ಜಿಸಲ್ಲಿಸಬಹುದು ಮತ್ತು ಅಂಥ ದುರಸ್ತಿಗಳ ವೆಚ್ಚದ ಅಂದಾಜನ್ನು ನಿಯಂತ್ರಣಾಧಿಕಾರಿಗೆ ಸಲ್ಲಿಸಬಹುದು ಮತ್ತು ಅದರ ಮೇಲೆ ನಿಯಂತ್ರಣಾಧಿಕಾರಿಯು, ಬಾಡಿಗೆದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅಂಥ ವೆಚ್ಚದ ಅಂದಾಜನ್ನು ಪರಿಗಣಿಸಿದ ಮೇಲೆ ಮತ್ತು ಅವನು ಅವಶ್ಯಕವೆಂದು ಪರಿಗಣಿಸಬಹುದಾದ ಅಂಥ ವಿಚಾರಣೆಗಳನ್ನು ನಡೆಸಿದ ನಂತರ, ಲಿಖಿತದಲ್ಲಿ ಆದೇಶವನ್ನು ನೀಡುವ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವೆಚ್ಚದಲ್ಲಿ, ಅಂಥ ದುರಸ್ತಿಗಳನ್ನು ಮಾಡಿಸಲು ಮಾಲೀಕನಿಗೆ ಅನುಮತಿ ನೀಡಬಹುದು ಮತ್ತು ತದನಂತರ, ಮಾಲೀಕನು ತಾನೇ ಸ್ವತಃ ಅಂಥ ದುರಸ್ತಿಗಳನ್ನು ಮಾಡಿಸುವುದು ಮತ್ತು ಅಂಥ ದುರಸ್ತಿಗಳ ವೆಚ್ಚವನ್ನು ಬಾಡಿಗೆದಾರನಿಂದ ವಸೂಲಿ ಮಾಡುವುದು ಕಾನೂನು ಬದ್ಧವಾಗಿರತಕ್ಕದ್ದು, ಅಂಥ ವೆಚ್ಚವು, ಹಾಗೆ ನಿರ್ದಿಷ್ಟಪಡಿಸಬಹುದಾದ ಮೊತ್ತವನ್ನು ಯಾವುದೇ ಸಂದರ್ಭದಲ್ಲಿ ಮೀರತಕ್ಕದ್ದಲ್ಲ.

(3) ಮಾಲೀಕನು ಅಥವಾ ಅವನಿಂದ ಪ್ರಾಧಿಕೃತಗೊಂಡ ಒಬ್ಬ ವ್ಯಕ್ತಿಯು ನಿಯಮಿಸಲಾದ ರೀತಿಯಲ್ಲಿ ಬಾಡಿಗೆದಾರನಿಗೆ ನೋಟೀಸು ನೀಡಿದ ನಂತರ ಆವರಣದೊಳಕ್ಕೆ ಪ್ರವೇಶಿಸಲು ಮತ್ತು ಪರಿಶೀಲಿಸಲು ಹಕ್ಕುಳ್ಳವನಾಗಿರತಕ್ಕದ್ದು.

(4) ಬಾಡಿಗೆದಾರನ ಉಪೇಕ್ಷೆಯಿಂದಾಗಿ ಆವರಣಕ್ಕೆ ಉಂಟಾದ ಎಲ್ಲ ಹಾನಿಗಳನ್ನು ಸರಿಪಡಿಸಲು ಮಾಲೀಕನು ಲಿಖಿತದಲ್ಲಿ ತಿಳಿಸಿದ ಮೂರು ತಿಂಗಳೊಳಗಾಗಿ ಬಾಡಿಗೆದಾರನು ಅದನ್ನು ಸರಿಪಡಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಮಾಲೀಕನು, ಸದರಿ ಹಾನಿಯನ್ನು ಸರಿಪಡಿಸುವುದುಕ್ಕೆ ಅನುಮತಿಯನ್ನು ಕೋರಿ ನಿಯಂತ್ರಣಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ನಿಯಂತ್ರಣಾಧಿಕಾರಿಯು, (2)ನೇ ಉಪ ಪ್ರಕರಣದಲ್ಲಿ ಉಪಬಂಧಿಸಿರುವಂತೆ ವಿಷಯವನ್ನು ತೀರ್ಮಾನಿಸತಕ್ಕದ್ದು.

(5) ಬಾಡಿಗೆದಾರಿಕೆಯು ಮುಕ್ತಾಯಗೊಂಡ ನಂತರ, ಬಾಡಿಗೆದಾರನು, ಸಾಮಾನ್ಯ ಸವೆತಗಳ ಹೊರತು, ಅಂಥ ಬಾಡಿಗೆದಾರಿಕೆಯು ಪ್ರಾರಂಭಗೊಂಡಾಗ ಅವನಿಗೆ ನೀಡಲಾಗಿದ್ದ ಸ್ಥಿತಿಯಲ್ಲಿಯೇ ಆವರಣದ ಸ್ವಾಧೀನತೆಯನ್ನು ಒಪ್ಪಿಸತಕ್ಕದ್ದು ಮತ್ತು ಭಾರಿ ಹಾನಿಯಲ್ಲದ ಕೆಲವು ಹಾನಿಗಳು ಸಂಭವಿಸಿದ ಸಂದರ್ಭದಲ್ಲಿ ಬಾಡಿಗೆದಾರನು ಆವರಣಕ್ಕೆ ಸಂಬಂಧಿಸಿದ ಹಾನಿಗಳನ್ನು ಸರಿಪಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ

ಮಾಲೀಕನು ಸದರಿ ಹಾನಿಗಳನ್ನು ಸರಿಪಡಿಸುವುದಕ್ಕೆ ಅನುಮತಿಗಾಗಿ ನಿಯಂತ್ರಣಾಧಿಕಾರಿಗೆ ಅರ್ಜಿ ಸಲ್ಲಿಸಬಹುದು ಮತ್ತು ನಿಯಂತ್ರಣಾಧಿಕಾರಿಯು (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಿಷಯವನ್ನು ತೀರ್ಮಾನಿಸತಕ್ಕದ್ದು.

(6) ಬಾಡಿಗೆದಾರನು, ಬಾಡಿಗೆದಾರಿಕೆಯು ಅಸ್ತಿತ್ವದಲ್ಲಿದ್ದ ಸಮಯದಲ್ಲಿ ಅಥವಾ ಅದರ ನಂತರ ಮಾಲೀಕನ ಅನುಮತಿ ಇಲ್ಲದೆ ತೆಗೆದುಹಾಕಬಹುದಾದ ಸ್ವರೂಪದ ಯಾವುದೇ ಜೋಡಣೆಯನ್ನು ಹೊರತುಪಡಿಸಿ ಆವರಣದಲ್ಲಿ ಅವನಿಂದ ಮಾಡಲಾದ ಯಾವುದೇ ಸುಧಾರಣೆ ಅಥವಾ ಮಾರ್ಪಾಟನ್ನು ನಾಶಪಡಿಸತಕ್ಕದ್ದಲ್ಲ ಅಥವಾ ಅಂಥ ಸುಧಾರಣೆ ಅಥವಾ ಮಾರ್ಪಾಟಿನಲ್ಲಿ ಬಳಸಿದ ಯಾವುವೇ ವಸ್ತುಗಳನ್ನು ತೆಗೆದುಹಾಕತಕ್ಕದ್ದಲ್ಲ. ಇದಕ್ಕೆ ತಪ್ಪಿದಲ್ಲಿ ಅಂಥ ನಾಶಪಡಿಸುವುದಕ್ಕೆ ಅಥವಾ ಮಾರ್ಪಾಟನ್ನು (4)ನೇ ಉಪ ಪ್ರಕರಣದ ಅಡಿಯಲ್ಲಿ ಬಾಡಿಗೆದಾರನಿಂದ ಮಾಡಲಾದ ಹಾನಿಯೆಂದು ಪರಿಗಣಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಕ್ರಮ ತೆಗೆದುಕೊಳ್ಳತಕ್ಕದ್ದು.

**49. ಅತ್ಯಾವಶ್ಯಕ ಸರಬರಾಜುಗಳನ್ನು ಅಥವಾ ಸೇವೆಗಳನ್ನು ನಿಲ್ಲಿಸಿಬಿಡುವುದು ಅಥವಾ ತಡೆಹಿಡಿಯುವುದು**.- (1) ಯಾವೊಬ್ಬ ಮಾಲೀಕನು, ತಾನೇ ಸ್ವತಃ ಆಗಲಿ ಅಥವಾ ಆತನ ಪರವಾಗಿ ಕೆಲಸದಲ್ಲಿ ತೊಡಗಿರುವನೆಂದು ತಾತ್ಪರ್ಯವಾಗುವ ಯಾವೊಬ್ಬ ವ್ಯಕ್ತಿಯ ಮೂಲಕವಾಗಲೀ ನ್ಯಾಯಸಮ್ಮತ ಮತ್ತು ಸಾಕಷ್ಟು ಕಾರಣಗಳಿಲ್ಲದೆ, ಒಬ್ಬ ಬಾಡಿಗೆದಾರನಿಗೆ ಬಾಡಿಗೆಗೆ ನೀಡಲಾಗಿರುವ ಆವರಣದ ಸಂಬಂಧದಲ್ಲಿ ಅವನು ಅನುಭವಿಸುತ್ತಿರುವ ಯಾವುವೇ ಅತ್ಯಾವಶ್ಯಕ ಸರಬರಾಜುಗಳನ್ನು ಅಥವಾ ಸೇವೆಗಳನ್ನು ನಿಲ್ಲಿಸಿಬಿಡತಕ್ಕದ್ದಲ್ಲ ಅಥವಾ ತಡೆಹಿಡಿಯತಕ್ಕದ್ದಲ್ಲ.

(2) ಮಾಲೀಕನು (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ, ಬಾಡಿಗೆದಾರನು, ಅಂಥ ಉಲ್ಲಂಘನೆಯ ಬಗ್ಗೆ ನಿಯಂತ್ರಣಾಧಿಕಾರಿಗೆ ದೂರು ನೀಡಿ ಅರ್ಜಿಯನ್ನು ಸಲ್ಲಿಸಬಹುದು.

(3) ಬಾಡಿಗೆದಾರನು ಆವರಣವನ್ನು ಖಾಲಿ ಮಾಡಲೆಂಬ ಅಥವಾ ಹೆಚ್ಚಿಸಿದ ಬಾಡಿಗೆಯನ್ನು ಸಂದಾಯ ಮಾಡಲು ಬಲವಂತ ಮಾಡುವ ದೃಷ್ಟಿಯಿಂದ ಮಾಲೀಕನು ಅತ್ಯಾವಶ್ಯಕ ಸರಬರಾಜನ್ನು ಅಥವಾ ಸೇವೆಯನ್ನು ನಿಲ್ಲಿಸಿಬಿಟ್ಟಿದ್ದಾನೆಂಬುದಾಗಿ ಅಥವಾ ತಡೆಹಿಡಿದಿದ್ದಾನೆಂಬುದಾಗಿ ನಿಯಂತ್ರಣಾಧಿಕಾರಿಗೆ ಮನವರಿಕೆಯಾದಲ್ಲಿ, ಅವನು (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಚಾರಣೆಯು ಇತ್ಯರ್ಥವಾಗಿಲ್ಲದಿದ್ದರೂ, ಕೂಡಲೇ ಸೌಕರ್ಯಗಳನ್ನು ಪುನಃ ಕಲ್ಪಿಸುವಂತೆ ಮಾಲೀಕನಿಗೆ ನಿರ್ದೇಶಿಸಿ ಒಂದು ಆದೇಶವನ್ನು ಹೊರಡಿಸಬಹುದು.

**ವಿವರಣೆ**.- ಮಾಲೀಕನಿಗೆ ನೋಟೀಸನ್ನು ನೀಡದೆ ಈ ಉಪ ಪ್ರಕರಣದ ಅಡಿಯಲ್ಲಿ ಒಂದು ಮಧ್ಯಂತರ ಆದೇಶವನ್ನು ಹೊರಡಿಸಬಹುದು.

(4) ವಿಚಾರಣೆ ನಡೆಸಿದ ನಂತರ, ನಿಯಂತ್ರಣಾಧಿಕಾರಿಗೆ, ಆವರಣದ ಸಂಬಂಧದಲ್ಲಿ ಬಾಡಿಗೆದಾರನು ಅನುಭವಿಸುತ್ತಿದ್ದ ಅತ್ಯಾವಶ್ಯಕ ಸರಬರಾಜನ್ನು ಅಥವಾ ಸೇವೆಯನ್ನು ನ್ಯಾಯಸಮ್ಮತವಲ್ಲದ ಮತ್ತು ಸಾಕಷ್ಟು ಕಾರಣವಿಲ್ಲದೆ ಮಾಲೀಕನು ನಿಲ್ಲಿಸಿಬಿಟ್ಟಿರುವುದಾಗಿ ಅಥವಾ ತಡೆ ಹಿಡಿದಿರುವುದಾಗಿ, ಕಂಡು ಬಂದಲ್ಲಿ ಅವನು ಅಂಥ ಸರಬರಾಜು ಅಥವಾ ಸೇವೆಯನ್ನು ಪುನಃ ಕಲ್ಪಿಸುವಂತೆ ಮಾಲೀಕನಿಗೆ ನಿರ್ದೇಶಿಸಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(5) ನಿಯಂತ್ರಣಾಧಿಕಾರಿಯು, ತನ್ನ ವಿವೇಚನೆಯಲ್ಲಿ ಐವತ್ತು ರೂಪಾಯಿಗಳನ್ನು ಮೀರದ ಪರಿಹಾರವನ್ನು,-

(ಎ) (2)ನೇ ಉಪ-ಪ್ರಕರಣದ ಅಡಿಯಲ್ಲಿನ ಅರ್ಜಿಯನ್ನು ಕ್ಷುಲ್ಲಕವಾಗಿ ಅಥವಾ ಕಿರುಕುಳಕಾರಿಯಾಗಿ ಸಲ್ಲಿಸಲಾಗಿದ್ದರೆ, ಬಾಡಿಗೆದಾರನು ಮಾಲೀಕನಿಗೆ ಸಂದಾಯ ಮಾಡಲು;

(ಬಿ) ಕಟ್ಟಡದ ಮಾಲೀಕನು ನ್ಯಾಯ ಸಮ್ಮತವಲ್ಲದೆ ಮತ್ತು ಸಾಕಷ್ಟು ಕಾರಣವಿಲ್ಲದೆ ಸರಬರಾಜನ್ನು ಅಥವಾ ಸೇವೆಯನ್ನು ನಿಲ್ಲಿಸಿಬಿಟ್ಟಿದ್ದರೆ ಅಥವಾ ತಡೆಹಿಡಿದಿದ್ದರೆ ಮಾಲೀಕನು ಬಾಡಿಗೆದಾರನಿಗೆ ಸಂದಾಯ ಮಾಡಲು

-ನಿರ್ದೇಶಿಸಬಹುದು.

**ವಿವರಣೆ**-I.-ಈ ಪ್ರಕರಣದಲ್ಲಿ ಅತ್ಯಾವಶ್ಯಕ ಸರಬರಾಜು ಅಥವಾ ಸೇವೆ ಎಂಬುದು, ನೀರು, ವಿದ್ಯುಚ್ಛಕ್ತಿ, ದಾರಿಯಲ್ಲಿ ಮತ್ತು ಮೆಟ್ಟಲುಗಳ ಮೇಲಿನ ದೀಪಗಳು, ನಿರ್ಮಲೀಕರಣ ಮತ್ತು ಒಳಚರಂಡಿ ಸೇವೆಗಳನ್ನು ಒಳಗೊಳ್ಳುತ್ತದೆ.

**ವಿವರಣೆ**-II ಈ ಪ್ರಕರಣದ ಉದ್ದೇಶಗಳಿಗಾಗಿ, ಯಾವುದೇ ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಗಳನ್ನು ತಡೆಹಿಡಿಯುವುದು ಎಂಬುದು ಮಾಲೀಕನಿಗೆ ಆರೋಪಿಸಬಹುದಾದ ಕೃತ್ಯ, ಅಥವಾ ಲೋಪದ ಕಾರಣಗಳಿಂದಾಗಿ, ಸ್ಥಳೀಯ ಪ್ರಾಧಿಕಾರವು ಅಥವಾ ಇತರ ಸಕ್ಷಮ ಪ್ರಾಧಿಕಾರವು ಅತ್ಯವಶ್ಯಕ ಸರಬರಾಜು ಅಥವಾ ಸೇವೆಯನ್ನು ನಿಲ್ಲಿಸಿಬಿಡುವುದನ್ನು ಒಳಗೊಳ್ಳತಕ್ಕದ್ದು.

## ಅಧ್ಯಾಯ - VIII

## ಸಂಕೀರ್ಣ ವಿಷಯಗಳು

**೫೦. ನಿರ್ದಿಷ್ಟ ವಿಷಯಗಳ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ನಿಷೇಧ**.- (1) ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವುದರ ಹೊರತು, ಈ ಅಧಿನಿಯಮವು ಅನ್ವಯವಾಗುವ ಯಾವುದೇ ಆವರಣದ ಸಂಬಂಧದಲ್ಲಿ ನಿಗದಿತ ಬಾಡಿಗೆಯನ್ನು ನಿಗದಿಪಡಿಸುವುದಕ್ಕೆ ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತೀರ್ಮಾನಿಸಲು ನಿಯಂತ್ರಣಾಧಿಕಾರಿಯು ಅಧಿಕಾರ ಹೊಂದಿರುವ ಯಾವುದೇ ಇತರ ವಿಷಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗಿನ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಯಾವುದೇ ಸಿವಿಲ್ ನ್ಯಾಯಾಲಯವು ಸ್ವೀಕರಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಡಿಯಲ್ಲಿ ನಿಯಂತ್ರಣಾಧಿಕಾರಿಗಳು ಕೈಗೊಂಡ ಅಥವಾ ಕೈಕೊಳ್ಳಬೇಕಾದ ಯಾವುದೇ ಕ್ರಮದ ಸಂಬಂಧದಲ್ಲಿ ಯಾವುದೇ ಸಿವಿಲ್ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿರುವುದಾವುದೂ ಈ ಅಧಿನಿಯಮವು ಅನ್ವಯವಾಗುವಂಥ ಯಾವುದೇ ಆವರಣದ ಹಕ್ಕು ಸ್ವಾಮ್ಯದ ಬಗೆಗಿನ ಪ್ರಶ್ನೆಯನ್ನು ಅಥವಾ ಅಂಥ ಆವರಣದ ಬಾಡಿಗೆಯನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿ ಅಥವಾ ವ್ಯಕ್ತಿಗಳು ಯಾರು ಎಂಬ ಪ್ರಶ್ನೆಯನ್ನು ತೀರ್ಮಾನಿಸುವ ಸಲುವಾಗಿನ ಯಾವುವೇ ದಾವೆ ಅಥವಾ ವ್ಯವಹರಣೆಗಳನ್ನು ಸ್ವೀಕರಿಸುವುದರಿಂದ ಯಾವುದೇ ಸಿವಿಲ್ ನ್ಯಾಯಾಲಯವನ್ನು ತಡೆ ಹಿಡಿಯುತ್ತದೆ ಎಂದು ಭಾವಿಸತಕ್ಕದ್ದಲ್ಲ.

**51. ಕಾನೂನುಸಮ್ಮತ ಪ್ರತಿನಿಧಿಗಳಿಂದ ಅಥವಾ ಅವರ ವಿರುದ್ಧ ವ್ಯವಹರಣೆಗಳು.**- (1) ಯಾವೊಬ್ಬ ವ್ಯಕ್ತಿಯಿಂದ ಅಥವಾ ಅವನ ವಿರುದ್ಧ, ಈ ಅಧಿನಿಯಮದ ಅಡಿಯಲ್ಲಿ ಸಲ್ಲಿಸಲಾದ ಯಾವುದೇ ಅರ್ಜಿ, ಹೂಡಲಾದ ಅಪೀಲು ಅಥವಾ ಕೈಗೊಳ್ಳಲಾದ ವ್ಯವಹರಣೆಯನ್ನು ಅವನ ಮರಣದ ಸಂದರ್ಭದಲ್ಲಿ, ಅವನ ಕಾನೂನುಸಮ್ಮತ ಪ್ರತಿನಿಧಿಯಿಂದ ಅಥವಾ ಅವನ ವಿರುದ್ಧ ಮುಂದುವರಿಸಬಹುದು.

(2) ಯಾವೊಬ್ಬ ವ್ಯಕ್ತಿಯಿಂದ ಅಥವಾ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಅಡಿಯಲ್ಲಿ ಸಲ್ಲಿಸಬಹುದಾಗಿದ್ದ, ಮಾಡಬಹುದಾಗಿದ್ದ ಅಥವಾ ಕೈಗೊಳ್ಳಬಹುದಾಗಿದ್ದ ಅರ್ಜಿ, ಅಪೀಲು ಅಥವಾ ಇತರೆ ವ್ಯವಹರಣೆಗಳನ್ನು ಅವನ ಮರಣದ ಸಂದರ್ಭದಲ್ಲಿ ಅವನ ಕಾನೂನು ಸಮ್ಮತ ಪ್ರತಿನಿಧಿಯಿಂದ ಅಥವಾ ಅವನ ವಿರುದ್ಧ ಸಲ್ಲಿಸಬಹುದು, ಮಾಡಬಹುದು ಅಥವಾ ಕೈಗೊಳ್ಳಬಹುದು.

**52. ಮಾಲೀಕ ಮತ್ತು ಬಾಡಿಗೆದಾರನು ವಿವರಗಳನ್ನು ಒದಗಿಸುವುದು.**- ಕಟ್ಟಡದ ಪ್ರತಿಯೊಬ್ಬ ಮಾಲೀಕ ಮತ್ತು ಪ್ರತಿಯೊಬ್ಬ ಬಾಡಿಗೆದಾರನು ನಿಯಂತ್ರಣಾಧಿಕಾರಿ ಅಥವಾ ಆ ಉದ್ದೇಶಕ್ಕಾಗಿಯೇ ಅವನು ಅಧಿಕೃತಗೊಳಿಸಿದ ಯಾವೊಬ್ಬ ವ್ಯಕ್ತಿಗೆ ಕಟ್ಟಡದ ಸಂಬಂಧದಲ್ಲಿ ನಿಯಮಿಸಬಹುದಾದ ಅಂಥ ವಿವರಗಳನ್ನು ಒದಗಿಸಲು ಬದ್ಧನಾಗಿರತಕ್ಕದ್ದು.

[1][53.**XXX**][1]

1. 2026ರ ಅಧಿನಿಯಮ 07ರ ಮೂಲಕ ದಿ:8.01.2026ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**54. ಅಪರಾಧಗಳು ಮತ್ತು ದಂಡನೆಗಳು.**- [1][(1)][1] ಈ ಅಧಿನಿಯಮದ ವಿನಿಯಮಗಳನ್ನು ಜಾರಿಗೊಳಿಸುವಲ್ಲಿ ಕೈಗೊಳ್ಳಬಹುದಾದ ಇತರ ಯಾವುದೇ ಕ್ರಮಕ್ಕೆ ಪ್ರತಿಕೂಲವಾಗದಂತೆ,-

1. 2026ರ ಅಧಿನಿಯಮ 07ರ ಮೂಲಕ ದಿ:8.01.2026ರಿಂದ ಜಾರಿಗೆ ಬರುವಂತೆ ಸಂಖ್ಯೆಯನ್ನು ನೀಡಲಾಗಿದೆ.

(i) ಯಾವೊಬ್ಬ ಮಾಲೀಕ ಅಥವಾ ಬಾಡಿಗೆದಾರನು 4ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಗುತ್ತಿಗೆ ಒಪ್ಪಂದದ ಪ್ರತಿಯನ್ನು ಸಲ್ಲಿಸಲು ತಪ್ಪಿದರೆ ಅಥವಾ ಆ ಪ್ರಕರಣದ ಪರಂತುಕದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರಗಳನ್ನು ಸಲ್ಲಿಸಲು ತಪ್ಪಿದರೆ [1][ಅವನು ಎರಡು ಸಾವಿರ ರೂಪಾಯಿಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ಒಪ್ಪಂದದ ಪ್ರತಿಯನ್ನು ಸಲ್ಲಿಸುವವರೆಗೆ ಅಥವಾ ಸಂದರ್ಭಾನುಸಾರ ವಿವರಗಳನ್ನು ಒದಗಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಐದು ಸಾವಿರ ರೂ.ಗಳ ಹೆಚ್ಚುವರಿ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು][1]

(ii) ಯಾವೊಬ್ಬ ವ್ಯಕ್ತಿಯು 11ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ್ದಲ್ಲಿ [1][ಅವನು ಕ್ಲೇಮು ಮಾಡಿದ ಅಥವಾ ಸ್ವೀಕರಿಸಿದ ಕಾನೂನು ಬಾಹಿರ ವೆಚ್ಚಗಳಿಂದ ಇಪ್ಪತ್ತು ಸಾವಿರ ರೂ.ಗಳನ್ನು ಮೀರಿದ ಮೊತ್ತದವರೆಗೆ ವಿಸ್ತರಿಸಬಹುದಾದಂಥ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು.][1]

1. 2026ರ ಅಧಿನಿಯಮ 07ರ ಮೂಲಕ ದಿ:8.01.2026ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

(iii) ಪ್ರತಿಯೊಬ್ಬ ಮಧ್ಯಸ್ಥದಾರ ಅಥವಾ ಎಸ್ಟೇಟ್ ಏಜೆಂಟನು,-

(ಎ) 20ನೇ ಪ್ರಕರಣದ (1)ನೇ ಉಪಪ್ರಕರಣದ ಉಲ್ಲಂಘನೆಯಲ್ಲಿ ಅವನ ಹೆಸರನ್ನು ನೋಂದಾಯಿಸಲು ವಿಫಲನಾದಲ್ಲಿ [1][ಎರಡು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ಅವನು ಅದನ್ನು ಪಾಲಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಇಪ್ಪತ್ತು ಸಾವಿರ ರೂ.ಗಳ ಜುಲ್ಮಾನೆಗೂ ಸಹ ಹೊಣೆಗಾರನಾಗಿರತಕ್ಕದ್ದು.][1]

(ಬಿ) 21ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂಥ ವಿವರಣಪತ್ರಗಳನ್ನು ಸಲ್ಲಿಸಲು ವಿಫಲನಾದಲ್ಲಿ [1][ಒಂದು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ವಿವರಣಪತ್ರವನ್ನು ಸಲ್ಲಿಸುವವರೆಗೂ ಪ್ರತಿ ದಿನಕ್ಕೆ ಎರಡು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು.][1]

(ಸಿ) 21ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದ ವಿವರ ಪಟ್ಟಿಕೆಗಳನ್ನು ಸಲ್ಲಿಸಲು ವಿಫಲನಾದಲ್ಲಿ [1][ಎರಡು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ವಿವರಪಟ್ಟಿಕೆಯನ್ನು ಸಲ್ಲಿಸುವವರೆಗೂ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೆ ಎರಡು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು.][1]

1. 2026ರ ಅಧಿನಿಯಮ 07ರ ಮೂಲಕ ದಿ:8.01.2026ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

(iv) 27ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಉಪಬಂಧಗಳ ಉಲ್ಲಂಘನೆಯಲ್ಲಿ ಯಾವೊಬ್ಬ ಬಾಡಿಗೆದಾರನು ಯಾವುದೇ ಆವರಣದ ಪೂರ್ಣ ಅಥವಾ ಒಂದು ಭಾಗವನ್ನು ಒಳ ಬಾಡಿಗೆಗೆ ನೀಡಿದ್ದರೆ ಅಥವಾ ಸ್ವಾಧೀನತೆಯನ್ನು ವರ್ಗಾಯಿಸಿದ್ದರೆ ಅಥವಾ ಅನ್ಯಥಾ ಬಿಟ್ಟುಕೊಟ್ಟಿದ್ದರೆ [1][ಅವನು ಐವತ್ತು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ][1] ಅಥವಾ ಅಪರಾಧದ ಕಾರಣವು ಸಮಾಪನವಾಗುವವರೆಗಿನ ಅವಧಿಯವರೆಗೆ ಒಳ ಬಾಡಿಗೆಗೆ ಕೊಟ್ಟಿದ್ದರಿಂದ ಬಾಡಿಗೆದಾರನು ಪ್ರತಿ ತಿಂಗಳು ಸ್ವೀಕರಿಸುವ ಬಾಡಿಗೆಯ ಎರಡರಷ್ಟು ಮೊತ್ತವನ್ನು ಇದರಲ್ಲಿ ಯಾವುದು ಹೆಚ್ಚೋ ಅದರಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು.

(v) ಯಾವೊಬ್ಬ ಮಾಲೀಕನು, 27ನೇ ಪ್ರಕರಣದ (2)ನೇ ಉಪ-ಪ್ರಕರಣದ (ಆರ್) ಖಂಡದ ವಿವರಣೆ I ರ (i) ಬಾಬಿನ ಅಡಿಯಲ್ಲಿ ಅವನ ಅಫಿದಾವಿತ್ತಿನಲ್ಲಿ ಸುಳ್ಳು ಹೇಳಿಕೆಯನ್ನು ನೀಡಿದ್ದಲ್ಲಿ ಅವನು [1][ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ಅಥವಾ ಅದನ್ನು ಮರು ಬಾಡಿಗೆಗೆ ಕೊಟ್ಟ ಸಂದರ್ಭದಲ್ಲಿ ಮೂರು ತಿಂಗಳ ಅವಧಿಗೆ ಸ್ವೀಕರಿಸಬಹುದಾದ ಬಾಡಿಗೆಯ ಎರಡರಷ್ಟು ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತಕ್ಕೆ ಹೊಣೆಗಾರನಾಗಿರತಕ್ಕದ್ದು.][1]

(vi) ಯಾವೊಬ್ಬ ಮಾಲೀಕನು, 32ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಲ್ಲಂಘನೆಯಲ್ಲಿ ಕಂತು ಅಥವಾ ಪಗಡಿಯಾಗಿ ಯಾವುದೇ ಮೊತ್ತದ ಸಂದಾಯವನ್ನು ಅಥವಾ ಇತರ ಪ್ರತಿಫಲವನ್ನು ಕ್ಲೇಮು ಮಾಡಿದರೆ ಅಥವಾ ಸ್ವೀಕರಿಸಿದರೆ, [1][ಮೂವತ್ತು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು.][1]

(vii) ಯಾವೊಬ್ಬ ಮಾಲೀಕನು, 35ನೇ ಪ್ರಕರಣದ (1)ನೇ ಉಪ-ಪ್ರಕರಣದ ಉಲ್ಲಂಘನೆಯಲ್ಲಿ ಯಾವುದೇ ಆವರಣದ ಪೂರ್ಣ ಅಥವಾ ಯಾವುದೇ ಭಾಗವನ್ನು ಮರು ಬಾಡಿಗೆಗೆ ಕೊಟ್ಟರೆ, [1][ಐವತ್ತು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ಮೊತ್ತದ ಅಥವಾ ಮರು ಬಾಡಿಗೆಗೆ ಕೊಟ್ಟ ನಂತರ ಮಾಲೀಕನು ಸ್ವೀಕರಿಸುವ ಬಾಡಿಗೆಯ ಎರಡರಷ್ಟು ಮೊತ್ತ, ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತದ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು][1].

**ವಿವರಣೆ**.-ಈ ಖಂಡದ ಮತ್ತು (iv)ನೇ ಖಂಡದ ಉದ್ದೇಶಗಳಿಗಾಗಿ ಮಾಲೀಕನು ಅಥವಾ ಸಂದರ್ಭಾನುಸಾರ ಬಾಡಿಗೆದಾರನು ಮರು ಬಾಡಿಗೆ ಅಥವಾ ಒಳ ಬಾಡಿಗೆಗೆ ಕೊಟ್ಟ ನಂತರ ಸ್ವೀಕರಿಸುತ್ತಿರುವ ಬಾಡಿಗೆಯನ್ನು ರುಜುವಾತುಪಡಿಸಲು ತೊಂದರೆಯಾದ ಸಂದರ್ಭಗಳಲ್ಲಿ, ಜುಲ್ಮಾನೆಯನ್ನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದು.

(viii) ಯಾವೊಬ್ಬ ಬಾಡಿಗೆದಾರನು, 36ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ದುರಸ್ತಿ ಅಥವಾ ಕಟ್ಟಡದ ನಿರ್ಮಾಣ ಅಥವಾ ಸಂದರ್ಭಾನುಸಾರವಾಗಿ ಮಾಲೀಕನು ಕಟ್ಟಡದ ಮರುನಿರ್ಮಾಣ ಮುಕ್ತಾಯಗೊಂಡ ದಿನಾಂಕದಿಂದ ಮೂರು ತಿಂಗಳೊಳಗೆ ಆ ಬಗ್ಗೆ ಉಚಿತ ಮಾಹಿತಿ ನೀಡಿದಾಗಲೂ ಸಮಂಜಸವಾದ ಕಾರಣವಿಲ್ಲದೆ,

ಮರುಪ್ರವೇಶಿಸಲು ತಪ್ಪಿದರೆ ಅವನು ಮರುಪ್ರವೇಶಕ್ಕೆ ತನ್ನ ಹಕ್ಕನ್ನು ಕಳೆದುಕೊಳ್ಳತಕ್ಕದ್ದು ಮತ್ತು ದೋಷಸಿದ್ಧಿಯ ನಂತರ, ಆವರಣದ ಮೂರು ತಿಂಗಳ ಬಾಡಿಗೆಗೆ ಸಮನಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(ix) ಯಾವೊಬ್ಬ ಮಾಲೀಕನು 49ನೇ ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ ದೋಷ ಸಿದ್ಧಿಯ ನಂತರ ಮೂರು ತಿಂಗಳ ಬಾಡಿಗೆಯ ಮೊತ್ತಕ್ಕೆ ಸಮನಾದ ಮೊತ್ತದವರೆಗಿನ ಜುಲ್ಮಾನೆಯಿಂದ [1][ಮತ್ತು ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ನಿಲ್ಲಿಸಿಬಿಟ್ಟ ಅಥವಾ ತಡೆಹಿಡಿದ ದಿನಾಂಕದಿಂದ ಪ್ರಾರಂಭವಾಗಿ ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ಪುನಃ ನೀಡುವವರೆಗಿನ ಅವಧಿಯವರೆಗೂ ಅಪರಾಧವು ಮುಂದುವರೆಯುವ ಪ್ರತಿದಿನಕ್ಕೆ ಒಂದು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು.][1]

(x) ಯಾವೊಬ್ಬ ಮಾಲೀಕ ಅಥವಾ ಬಾಡಿಗೆದಾರನು 52ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂಥ ವಿವರಗಳನ್ನು ಒದಗಿಸಲು ವಿಫಲನಾದಲ್ಲಿ ಅವನು ದೋಷ ಸಿದ್ಧಿಯ ನಂತರ [1][ಹತ್ತು ಸಾವಿರ ರೂ.ಗಳವರೆಗಿನ ದಂಡದಿಂದ][1] ದಂಡನೀಯನಾಗತಕ್ಕದ್ದು.

[2][(2) ಉಪಪ್ರಕರಣ (1)ರಡಿ ಉಪಬಂಧಿಸಲಾದ ದಂಡಗಳನ್ನು ಕರ್ನಾಟಕ ಬಾಡಿಗೆ **(ತಿದ್ದುಪಡಿ)** ಅಧಿನಿಯಮ, 2025ರ ಪ್ರಾರಂಭದ ದಿನಾಂಕದಿಂದ ಪ್ರತಿ ಮೂರು ವರ್ಷಗಳ ಅವಧಿ ಮುಗಿದ ತರುವಾಯ, ನಿಯಮಿಸಬಹುದಾದಂಥ ವಿಧಾನದಲ್ಲಿ ದಂಡದ ಕನಿಷ್ಠ ಮೊತ್ತದ ಶೇಕಡ ಹತ್ತರಷ್ಟಕ್ಕೆ ಹೆಚ್ಚಿಸತಕ್ಕದ್ದು.][2]

1. 2026ರ ಅಧಿನಿಯಮ 07ರ ಮೂಲಕ ದಿ:8.01.2026ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 2026ರ ಅಧಿನಿಯಮ 07ರ ಮೂಲಕ ದಿ:8.01.2026ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**55. ಕಂಪನಿಗಳಿಂದ [1][ಉಲ್ಲಂಘನೆಗಳು][1] ಇತ್ಯಾದಿ.**-(1) ಈ ಅಧಿನಿಯಮದ ಅಡಿಯಲ್ಲಿನ [1][ಉಲ್ಲಂಘನೆಯನ್ನು][1] ಒಂದು ಕಂಪನಿಯು ಮಾಡಿರುವಲ್ಲಿ, ಆ ಕಂಪನಿಯನ್ನು ಮತ್ತು [1][ಅಂಥ ಉಲ್ಲಂಘನೆ ನಡೆದ][1] ಕಾಲದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ವ್ಯವಹರಣೆಗೆ ಅವನು ಗುರಿಯಾಗತಕ್ಕದ್ದು ಹಾಗೂ ಅದಕ್ಕನುಸಾರವಾಗಿ ದಂಡಿತನಾಗತಕ್ಕದ್ದು :

[1][ಪರಂತು, ಈ ಉಪಪ್ರಕರಣದಲ್ಲಿ ಇರುವುದಾವುದೂ, ಆ ಉಲ್ಲಂಘನೆಯು ತನ್ನ ಅರಿವಿಗೆ ಬಾರದಂತೆ ನಡೆಯಿತೆಂದು ಅಥವಾ ಅಂಥ ಉಲ್ಲಂಘನೆ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಅವನು ರುಜುವಾತು ಪಡಿಸಿದರೆ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದಲ್ಲ.][1]

[1][(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಉಲ್ಲಂಘನೆಗಳು ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಆ ಉಲ್ಲಂಘನೆಗಳು ಅವನ ಯಾವುದೇ ನಿರ್ಲಕ್ಷದಿಂದಾಗಿ ಸಂಭವಿಸಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಅಂಥ ಕೃತ್ಯಕ್ಕೆ ಹೊಣೆಗಾರನೆಂದು ಭಾವಿಸತಕ್ಕದ್ದು ಮತ್ತು ದಂಡವನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು.][1]

**ವಿವರಣೆ**.-ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುದಾರ.

1. 2026ರ ಅಧಿನಿಯಮ 07ರ ಮೂಲಕ ದಿ:8.01.2026ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**56. ನಿಯಂತ್ರಣಾಧಿಕಾರಿಗಳು ಲೋಕ ನೌಕರರಾಗಿರತಕ್ಕದ್ದು.**-ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಎಲ್ಲ ನಿಯಂತ್ರಣಾಧಿಕಾರಿಗಳನ್ನು ದಂಡ ಸಂಹಿತೆ 1860ರ (1860ರ ಕೇಂದ್ರ ಅಧಿನಿಯಮ 45) 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

**57. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**-(1) ಈ ಅಧಿನಿಯಮದ ಅಥವಾ ನಿಯಮದ ಅಥವಾ ಅದರಡಿಯಲ್ಲಿ ಮಾಡಿದ ಆದೇಶಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ಯಾವೊಬ್ಬ ನಿಯಂತ್ರಣಾಧಿಕಾರಿ ಅಥವಾ ರಾಜ್ಯ ಸರ್ಕಾರದ ಅಧಿಕಾರಿ ಅಥವಾ ಯಾವೊಬ್ಬ ನೌಕರನ ಅಥವಾ ಅವನ ನಿರ್ದೇಶನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಥವಾ ಅವನಿಗೆ ಸಹಾಯ ಮಾಡುತ್ತಿರುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ವಿಚಾರಣೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿನ ಯಾವುದೇ ನಿಯಮ ಅಥವಾ ಅದರಡಿಯಲ್ಲಿ ಮಾಡಿದ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯದಲ್ಲುಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**58. ಭೂ ಕಂದಾಯದ ಬಾಕಿಯಂತೆ ನಿಯಂತ್ರಣಾಧಿಕಾರಿಯು ದಂಡವನ್ನು ವಸೂಲಿ ಮಾಡುವುದು.**-ಈ ಅಧಿನಿಯಮದ ಅಡಿಯಲ್ಲಿ ಒಬ್ಬ ನಿಯಂತ್ರಣಾಧಿಕಾರಿಯಿಂದ ಯಾವುದೇ ದಂಡವನ್ನು ವಿಧಿಸಲಾಗಿದ್ದರೆ, ನಿಯಂತ್ರಣಾಧಿಕಾರಿಯು ನೀಡಬಹುದಾದ ಅಂಥ ಸಮಯದೊಳಗೆ ದಂಡವನ್ನು ನೀಡಬೇಕಾದ ವ್ಯಕ್ತಿಯು ಅದನ್ನು ಸಂದಾಯ ಮಾಡತಕ್ಕದ್ದು ಮತ್ತು ನಿಯಂತ್ರಣಾಧಿಕಾರಿಯು ಸರಿಯಾದ ಮತ್ತು ಸಾಕಷ್ಟು ಕಾರಣಗಳಿಗಾಗಿ ಸಮಯವನ್ನು ವಿಸ್ತರಿಸಬಹುದು ಮತ್ತು ಆ ಸಮಯದೊಳಗೆ ಸಂದಾಯಮಾಡಲು ತಪ್ಪಿದಲ್ಲಿ ಮೊಬಲಗನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಅಡಿಯಲ್ಲಿ ಭೂ ಕಂದಾಯದ ಬಾಕಿಯೆಂಬಂತೆ ವಸೂಲಿ ಮಾಡತಕ್ಕದ್ದು.

**59. ಅಪೀಲುಗಳಲ್ಲಿನ ಪ್ರಕ್ರಿಯೆ.**-(1) ಈ ಅಧಿನಿಯಮದಲ್ಲಿ ಅಪೀಲುಗಳನ್ನು ಸಲ್ಲಿಸುವುದಕ್ಕಾಗಿ ನಿರ್ದಿಷ್ಟಪಡಿಸಿದ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಯಾವ ಆದೇಶದ ವಿರುದ್ಧ ಅಪೀಲನ್ನು ಮಾಡಲಾಗುವುದೋ ಆ ಆದೇಶದ ಪ್ರಮಾಣಿತ ಪ್ರತಿಗಳನ್ನು ಪಡೆಯಲು ತೆಗೆದುಕೊಂಡ ಸಮಯವನ್ನು ಹೊರತುಪಡಿಸತಕ್ಕದ್ದು.

(2) ಅವಧಿ ನಿರ್ಣಯ ಅಧಿನಿಯಮ, 1963ರ 5ನೇ ಪ್ರಕರಣದ ಉಪಬಂಧಗಳು ಈ ಅಧಿನಿಯಮದ ಅಡಿಯಲ್ಲಿನ ಅಪೀಲುಗಳಿಗೆ ಅನ್ವಯವಾಗತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಹೂಡಲಾದ ಅಪೀಲಿನ ಮೇಲೆ ಡೆಪ್ಯೂಟಿ ಕಮೀಷನರ್ ಅಥವಾ ಸಂದರ್ಭಾನುಸಾರ ಸಹಾಯಕ ಕಮೀಷನರನು ಅಪೀಲಿನ ಮೇಲಿನ ತೀರ್ಮಾನವು ಇತ್ಯರ್ಥದಲ್ಲಿರುವಾಗ, ಆ ಪ್ರಕರಣದಲ್ಲಿನ ಮುಂದಿನ ವ್ಯವಹರಣೆಯನ್ನು ತಡೆಹಿಡಿಯುವಂತೆ ಆದೇಶಿಸಬಹುದು.

(4) ಡೆಪ್ಯೂಟಿ ಕಮೀಷನರ್ ಅಥವಾ ಸಂದರ್ಭಾನುಸಾರವಾಗಿ ಸಹಾಯಕ ಕಮೀಷನರನು ನಿಯಂತ್ರಣಾಧಿಕಾರಿಯಿಂದ ಮೊಕದ್ದಮೆಯ ದಾಖಲೆಗಳನ್ನು ತರಿಸಿಕೊಳ್ಳತಕ್ಕದ್ದು ಮತ್ತು ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ ಮತ್ತು ಅವಶ್ಯವಿದ್ದಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮತ್ತಷ್ಟು ವಿಚಾರಣೆಯನ್ನು ನಡೆಸಿದ ನಂತರ ಸ್ವತಃ ತಾನೇ ಅಥವಾ ನಿಯಂತ್ರಣಾಧಿಕಾರಿಯ ಮೂಲಕ ಅಪೀಲನ್ನು ತೀರ್ಮಾನಿಸತಕ್ಕದ್ದು.

**60. ನಿಯಂತ್ರಣಾಧಿಕಾರಿಯ ಮುಂದಿರುವ ಎಲ್ಲಾ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರತಕ್ಕದ್ದು.**- ನ್ಯಾಯಾಲಯದ ಅಥವಾ ನಿಯಂತ್ರಣಾಧಿಕಾರಿಯ ಮುಂದಿರುವ ಎಲ್ಲಾ ವ್ಯವಹರಣೆಗಳನ್ನು ದಂಡ ಸಂಹಿತೆ 1860ರ (1860ರ ಕೇಂದ್ರ ಅಧಿನಿಯಮ 45) 193 ಮತ್ತು 228ನೇ ಪ್ರಕರಣದ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಗಳೆಂಬುದಾಗಿ ಭಾವಿಸತಕ್ಕದ್ದು.

**61. ಅಂತಿಮಗೊಂಡ ತೀರ್ಮಾನಗಳನ್ನು ಪುನಃ ಆರಂಭಿಸಕೂಡದು.**- ನ್ಯಾಯಾಲಯ ಅಥವಾ ನಿಯಂತ್ರಣಾಧಿಕಾರಿಯು, ಈ ಅಧಿನಿಯಮದ ಅಡಿಯಲ್ಲಿನ ಹಿಂದಿನ ವ್ಯವಹರಣೆಯಲ್ಲಿ ಅಥವಾ 70ನೇ ಪ್ರಕರಣದಿಂದ

ನಿರಸನಗೊಂಡ ಯಾವುದೇ ಅಧಿನಿಯಮಿತಿಗಳ ಅಡಿಯಲ್ಲಿ ಅಂತಿಮವಾಗಿ ತೀರ್ಮಾನಿಸಲಾದ ಮತ್ತು ಹಕ್ಕು ಕೋರಿಕೆಗಾಗಿ ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಅರ್ಜಿಯನ್ನು ಕ್ಷಿಪ್ರವಾಗಿ ತಿರಸ್ಕರಿಸತಕ್ಕದ್ದು.

62. **ಬಹಿರಂಗ ನ್ಯಾಯಾಲಯದಲ್ಲಿ ಆದೇಶಗಳನ್ನು ಘೋಷಿಸುವುದು**.- ಈ ಅಧಿನಿಯಮದ ಅಡಿಯಲ್ಲಿ ಒಂದು ನ್ಯಾಯಾಲಯ ಅಥವಾ ನಿಯಂತ್ರಣಾಧಿಕಾರಿಯು ಜಾರಿಗೊಳಿಸಿದ ಪ್ರತಿಯೊಂದು ಆದೇಶವನ್ನು, ಮೊಕದ್ದಮೆಯನ್ನು ಅಂತಿಮವಾಗಿ ವಿಚಾರಣೆ ನಡೆಸಿದ ದಿನದಂದು ಅಥವಾ ಯಥೋಚಿತ ಸೂಚನೆಯನ್ನು ಪಕ್ಷಕಾರರಿಗೆ ನೀಡಲಾದ ಮುಂದಿನ ಯಾವುದಾದರೂ ದಿನದಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸತಕ್ಕದ್ದು.

63. **ಆದೇಶದ ಅಂತಿಮತೆ**.-ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನು ಹೊರತುಪಡಿಸಿ, ನ್ಯಾಯಾಲಯ ಅಥವಾ ನಿಯಂತ್ರಣಾಧಿಕಾರಿಯು ಮಾಡಿದ ಪ್ರತಿಯೊಂದು ಆದೇಶವು ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಪೀಲಿನ ಸಂಬಂಧದಲ್ಲಿ ಅಥವಾ ಪುನರೀಕ್ಷಣೆಯ ಸಂಬಂಧದಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ಮೂಲ ದಾವೆಯಲ್ಲಿ, ಅರ್ಜಿಯಲ್ಲಿ ಅಥವಾ ಅಮಲ್ಜಾರಿಯ ವ್ಯವಹರಣೆಯಲ್ಲಿ ಪ್ರಶ್ನಿಸತಕ್ಕದ್ದಲ್ಲ.

64. **ಆದೇಶಗಳ ತಿದ್ದುಪಡಿ**.-ಈ ಅಧಿನಿಯಮದ ಅಡಿಯಲ್ಲಿ ಒಂದು ನ್ಯಾಯಾಲಯ ಅಥವಾ ಒಬ್ಬ ನಿಯಂತ್ರಣಾಧಿಕಾರಿ ಅಥವಾ ಪುನರೀಕ್ಷಣಾ ಅಥವಾ ಅಪೀಲು ವಿಚಾರಣಾ ಪ್ರಾಧಿಕಾರದಿಂದ ಹೊರಡಿಸಲಾದ ಯಾವುದೇ ಆದೇಶದಲ್ಲಿನ ಲಿಪಿಕ ಅಥವಾ ಗಣಿತದೋಷಗಳು ಅಥವಾ ಯಾವುದೇ ಆಕಸ್ಮಿಕ ಚ್ಯುತಿ ಅಥವಾ ಲೋಪದಿಂದಾಗಿ ಅದರಲ್ಲಿ ಉಂಟಾದ ತಪ್ಪುಗಳನ್ನು ಯಾವುದೇ ಸಮಯದಲ್ಲಿ ಅಂಥ ನ್ಯಾಯಾಲಯ, ನಿಯಂತ್ರಣಾಧಿಕಾರಿ ಅಥವಾ ಪುನರೀಕ್ಷಣಾ ಅಥವಾ ಅಪೀಲು ವಿಚಾರಣಾ ಪ್ರಾಧಿಕಾರವು ಯಾರೇ ಪಕ್ಷಕಾರದಿಂದ ಈ ಸಂಬಂಧದಲ್ಲಿ ಸ್ವೀಕರಿಸಲಾದ ಅರ್ಜಿಯ ಮೇಲೆ ಅಥವಾ ಅನ್ಯಥಾ ತಿದ್ದುಪಡಿ ಮಾಡಬಹುದು.

65. **ವೆಚ್ಚಗಳು** .-ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದಲ್ಲಿ ಅವುಗಳಿಗೆ ಒಳಪಟ್ಟು ನ್ಯಾಯಾಲಯ ಅಥವಾ ನಿಯಂತ್ರಣಾಧಿಕಾರಿಯ ಮುಂದಿರುವ ಎಲ್ಲಾ ಪ್ರಕ್ರಿಯೆಗಳ ಮತ್ತು ಅವುಗಳಿಗೆ ಪ್ರಾಸಂಗಿಕವಾದ ವೆಚ್ಚವು ನ್ಯಾಯಾಲಯ ಅಥವಾ ನಿಯಂತ್ರಣಾಧಿಕಾರಿಯ ವಿವೇಚನೆಯಲ್ಲಿರತಕ್ಕದ್ದು ಮತ್ತು ಅಂಥ ವೆಚ್ಚಗಳು ಯಾರಿಂದ ಮತ್ತು ಯಾವ ಸ್ವತ್ತಿನಿಂದ ಮತ್ತು ಎಷ್ಟು ಸಂದಾಯವಾಗತಕ್ಕದ್ದು ಎಂಬುದನ್ನು ನಿರ್ಧರಿಸಲು ಪೂರ್ಣ ಅಧಿಕಾರ ಅದಕ್ಕೆ ಅಥವಾ ಅವನಿಗೆ ಇರತಕ್ಕದ್ದು.

66. **ನಿಯಮಗಳ ರಚನಾಧಿಕಾರ**.-(1) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಸರ್ಕಾರಿ ರಾಜ್ಯಪತ್ರದಲ್ಲಿ ಪೂರ್ವ ಪ್ರಕಟಣೆ ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು ಎಂದರೆ.-

(ಎ) 12ನೇ ಪ್ರಕರಣದ (2)ನೇ ಉಪ-ಪ್ರಕರಣದ ಪರಂತುಕದ ಅಡಿಯಲ್ಲಿ ಮೌಲ್ಯಮಾಪಕರ ಅನುಮೋದನೆಯ ರೀತಿ ಮತ್ತು ಅಂಥ ಮೌಲ್ಯಮಾಪಕರು ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) ಕಟ್ಟಡದ ನವೀಕರಣದ ವ್ಯಾಪ್ತಿಯನ್ನು ನಿರ್ಣಯಿಸುವ ವಿಧಾನ;

(ಸಿ) ನಿಯಂತ್ರಣಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದಾದ ನಮೂನೆ ಮತ್ತು ವಿಧಾನ ಮತ್ತು ಸಲ್ಲಿಸಬೇಕಾದ ಅವಧಿ;

(□ □) ಬಾಡಿಗೆಯ ಠೇವಣಿಗಾಗಿ ಅರ್ಜಿಯನ್ನು ಸಲ್ಲಿಸಬಹುದಾದ ನಮೂನೆ ಮತ್ತು ವಿಧಾನ ಮತ್ತು ಅದು ಒಳಗೊಂಡಿರಬಹುದಾದ ವಿವರಗಳು;

(ಇ) ಈ ಅಧಿನಿಯಮದ ಅಡಿ ನಿಯಂತ್ರಣಾಧಿಕಾರಿಯು ವಿಚಾರಣೆಯನ್ನು ನಡೆಸಬಹುದಾದ ವಿಧಾನ;

(ಎಫ್) ನಿಯಂತ್ರಣಾಧಿಕಾರಿಯಲ್ಲಿ ನಿಹಿತವಾಗಬಹುದಾದ ಸಿವಿಲ್ ನ್ಯಾಯಾಲಯದ ಅಧಿಕಾರಿಗಳು;

(ಜಿ) ಈ ಅಧಿನಿಯಮದ ಅಡಿಯಲ್ಲಿ ಅಪೀಲಿಗಾಗಿ ಅರ್ಜಿಯನ್ನು ಸಲ್ಲಿಸಬಹುದಾದ ನಮೂನೆ ಅಥವಾ ವಿಧಾನ.

(ಹೆಚ್) ವಿವಾದಗಳನ್ನು ಪರಸ್ಪರ ರಾಜೀ ಮೂಲಕ ಇತ್ಯರ್ಥಪಡಿಸುವುದಕ್ಕಾಗಿ ನ್ಯಾಯಾಲಯವು ಉಲ್ಲೇಖಿಸಬಹುದಾದ ರೀತಿ ಮತ್ತು ಹಾಗೆ ಉಲ್ಲೇಖಿಸಲಾದ ಮೊಕದ್ದಮೆಗಳ ಇತ್ಯರ್ಥದ ಕಾರ್ಯವಿಧಾನ;

(ಐ) ಮಧ್ಯವರ್ತಿಗಳ ಅಥವಾ ಎಸ್ಟೇಟ್ ಏಜೆಂಟರುಗಳ ನೋಂದಣಿಗೆ ಮತ್ತು ನೋಂದಣಿಗಳ ನವೀಕರಣಕ್ಕಾಗಿ ಪ್ರಾಧಿಕಾರದ ನೇಮಕಾತಿ ಮತ್ತು ಅವನ ವಿದ್ಯಾರ್ಹತೆಗಳು ಮತ್ತು ನೇಮಕಾತಿ ನಿಬಂಧನೆಗಳು,

(ಜೆ) ನಿವಾಸ ಸ್ಥಳದ ಸಂಬಂಧದಲ್ಲಿ ಮಧ್ಯವರ್ತಿಗಳು ಅಥವಾ ಎಸ್ಟೇಟ್ ಏಜೆಂಟರುಗಳು ವಿಧಿಸಬಹುದಾದ ದಲ್ಲಾಳಿ ಅಥವಾ ಕಮಿಷನನ್ನು ಮತ್ತು ಅವರು ವಿವರ ಪಟ್ಟಿಗಳನ್ನು ಸಲ್ಲಿಸತಕ್ಕ ನಿಬಂಧನೆ ಮತ್ತು ಕ್ರಮ ;

(ಕೆ) ಈ ಅಧಿನಿಯಮದ ಅಡಿಯಲ್ಲಿ ನೋಟೀಸನ್ನು ಜಾರಿಮಾಡುವ ವಿಧಾನ ; ಮತ್ತು

(ಎಲ್) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ನಿಯಮಗಳ ಮೂಲಕ ಉಪಬಂಧ ಕಲ್ಪಿಸುವುದು ಅಗತ್ಯವಾಗಬಹುದಾದ ಇತರ ಯಾವುದೇ ವಿಷಯ.

**67. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು.**- ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮ ಮತ್ತು 2ನೇ ಪ್ರಕರಣದ ಅಥವಾ 68ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೇ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯಲ್ಲಿ, ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ವಿಧಾನ ಮಂಡಲದ ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಯಾವುದೇ ನಿಯಮ ಅಥವಾ ಅಧಿಸೂಚನೆಯನ್ನು ಮಾಡಬಾರದೆಂದು ತೀರ್ಮಾನಿಸಿದರೆ ಆ ತರುವಾಯ ಅಂಥ ನಿಯಮ ಅಥವಾ ಅಧಿಸೂಚನೆಯು, ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದಲ್ಲ.

ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

**68. ತೊಂದರೆಗಳ ನಿವಾರಣೆ.**- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ಸಂದೇಹ ಅಥವಾ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಆ ಸಂದೇಹ ಅಥವಾ ತೊಂದರೆಯ ನಿವಾರಣೆಗೆಗಾಗಿ, ತಾನು ಅವಶ್ಯಕ ಮತ್ತು ಯುಕ್ತವೆಂದು ಅಭಿಪ್ರಾಯಪಡುವಂಥ ಉಪಬಂಧಗಳನ್ನು ರಚಿಸಬಹುದು :

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯಗೊಂಡ ನಂತರ ಈ ಪ್ರಕರಣದ ಅಡಿಯಲ್ಲಿ ಯಾವುವೇ ಉಪಬಂಧಗಳನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಅಧಿಸೂಚನೆ ಮೂಲಕ ರಚಿಸಲಾದ ಉಪಬಂಧಗಳು, 67ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಈ ಅಧಿನಿಯಮದಲ್ಲಿ ಅಧಿನಿಯಮಿಸಲಾದಂತೆ ಪರಿಣಾಮಕಾರಿಯಾಗತಕ್ಕದ್ದು ಮತ್ತು ಹಾಗೆ ಮಾಡಬಹುದಾದ ಅಂಥ ಯಾವುದೇ ಅಧಿಸೂಚನೆಯನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮುಂಚಿತವಲ್ಲದ ಯಾವುದೇ ದಿನಾಂಕದಿಂದ ಪೂರ್ವಾನ್ವಯವಾಗುವಂತೆ ಮಾಡಬಹುದು.

**69. ಇತ್ಯರ್ಥದಲ್ಲಿರುವ ಮೊಕದ್ದಮೆಗಳ ವರ್ಗಾವಣೆ.**- ಈ ಅಧಿನಿಯಮದ ಪ್ರಾರಂಭದಂದು,-

(i) ಈ ಅಧಿನಿಯಮದ ಅಡಿಯಲ್ಲಿ ನಿಯಂತ್ರಣಾಧಿಕಾರಿಯ ಅಧಿಕಾರ ವ್ಯಾಪ್ತಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದ ಮತ್ತು ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, 1961ರ (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಅಡಿಯಲ್ಲಿ ನ್ಯಾಯಾಲಯಗಳಲ್ಲಿ ಇತ್ಯರ್ಥದಲ್ಲಿ ಇರುವ ಎಲ್ಲಾ ಮೊಕದ್ದಮೆಗಳನ್ನು ನಿಯಂತ್ರಣಾಧಿಕಾರಿಗಳಿಗೆ ವರ್ಗಾಯಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ನಿಯಂತ್ರಣಾಧಿಕಾರಿಯು ಅಂಥ ಮೊಕದ್ದಮೆಗಳ ವಿಷಯದ

ವಿಚಾರಣೆಯನ್ನು ಹೊಸದಾಗಿ ಪ್ರಾರಂಭಿಸಬಹುದು ಅಥವಾ ಪ್ರತಿಯೊಂದು ಮೊಕದ್ದಮೆಯನ್ನು ಅಂಥ ವರ್ಗಾವಣೆಯ ಸಮಯದಲ್ಲಿ ಅದು ಇದ್ದ ಹಂತದಿಂದಲೇ ಮುಂದುವರಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಪಟ್ಟ ಎಲ್ಲಾ ಮೊಕದ್ದಮೆಗಳನ್ನು ಮತ್ತು ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, 1961ರ ಅಡಿಯಲ್ಲಿ ಇತ್ಯರ್ಥದಲ್ಲಿರುವ ಎಲ್ಲಾ ಮೊಕದ್ದಮೆಗಳನ್ನು, ನ್ಯಾಯಾಲಯಕ್ಕೆ ವರ್ಗಾಯಿಸಲಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ನ್ಯಾಯಾಲಯವು ಅಂಥ ಮೊಕದ್ದಮೆಗಳ ವಿಚಾರಣೆಯನ್ನು ಹೊಸದಾಗಿ ಪ್ರಾರಂಭಿಸಬಹುದು ಅಥವಾ ಪ್ರತಿಯೊಂದು ಮೊಕದ್ದಮೆಯನ್ನು ಅಂಥ ವರ್ಗಾವಣೆಯ ಸಮಯದಲ್ಲಿ ಅದು ಇದ್ದ ಹಂತದಿಂದಲೇ ಮುಂದುವರಿಸಬಹುದು.

**70. ನಿರಸನ ಮತ್ತು ಉಳಿಸುವಿಕೆ**.- (1) ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ 1961ನ್ನು (1961ರ ಕರ್ನಾಟಕ ಅಧಿನಿಯಮ 22) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ ಮತ್ತು 69ನೇ ಪ್ರಕರಣದ ಉಪ ಬಂಧಗಳಿಗೊಳಪಟ್ಟು,

(ಎ) ಹಾಗೆ ನಿರಸನಗೊಂಡ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಮತ್ತು ಈ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಡಿಕ್ರಿ ಅಥವಾ ಆದೇಶದ ಅಮಲ್ಜಾರಿಯ ಎಲ್ಲ ವ್ಯವಹರಣೆಗಳನ್ನು ಸದರಿ ಅಧಿನಿಯಮಿತಿಯನ್ನು ನಿರಸನಗೊಳಿಸಿಲ್ಲದಿದ್ದರೆ ಹೇಗೋ ಹಾಗೆ ಅಂಥ ನ್ಯಾಯಾಲಯವು ಮುಂದುವರೆಸತಕ್ಕದ್ದು ಮತ್ತು ಇತ್ಯರ್ಥಗೊಳಿಸತಕ್ಕದ್ದು.

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಲಾದ ಮೊಕದ್ದಮೆಗಳು ಮತ್ತು ವ್ಯವಹರಣೆಗಳನ್ನು ಹೊರತುಪಡಿಸಿ ಈ ಅಧಿನಿಯಮದ ಪ್ರಾರಂಭದಲ್ಲಿ ನಿಯಂತ್ರಣಾಧಿಕಾರಿ, ಡೆಪ್ಯೂಟಿ ಕಮೀಷನರು, ವಿಭಾಗೀಯ ಕಮೀಷನರು,ನ್ಯಾಯಾಲಯ, ಜಿಲ್ಲಾ ನ್ಯಾಯಾಧೀಶ ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಮುಂದೆ ಈ ಅಧಿನಿಯಮವು ಅನ್ವಯವಾಗುವ ಅವರಣಗಳಿಗೆ ಸಂಬಂಧಿಸಿದಂತೆ ಇತ್ಯರ್ಥದಲ್ಲಿರುವ ಎಲ್ಲಾ ಮೊಕದ್ದಮೆಗಳು ಮತ್ತು ವ್ಯವಹರಣೆಗಳನ್ನು ಅಂಥ ನಿಯಂತ್ರಣಾಧಿಕಾರಿ, ಡೆಪ್ಯೂಟಿ ಕಮೀಷನರು, ವಿಭಾಗೀಯ ಕಮೀಷನರು, ನ್ಯಾಯಾಲಯ, ಜಿಲ್ಲಾ ನ್ಯಾಯಾಧೀಶ ಅಥವಾ ಉಚ್ಚ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮುಂದುವರಿಸತಕ್ಕದ್ದು ಮತ್ತು ಇತ್ಯರ್ಥಗೊಳಿಸತಕ್ಕದ್ದು.

(ಸಿ) ಈ ಅಧಿನಿಯಮವು ಅನ್ವಯವಾಗದಿರುವ ಆವರಣಗಳ ಸಂಬಂಧದ ಇತರ ಎಲ್ಲ ಮೊಕದ್ದಮೆಗಳು ಮತ್ತು ವ್ಯವಹರಣೆಗಳು ಈ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಕೊನೆಗೊಳ್ಳತಕ್ಕದ್ದು.

(3) ಈ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಮತ್ತು 68ನೇ ಪ್ರಕರಣದಲ್ಲಿ ಉಪಬಂಧಿಸಿರುವುದರ ಹೊರತು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ ಖಖಖ) 6ನೇ ಪ್ರಕರಣದ ಉಪಬಂಧಗಳು ನಿರಸನಗೊಳಿಸಿದ ಸದರಿ ಅಧಿನಿಯಮಿತಿಯ ಸಂಬಂಧದಲ್ಲಿ ಅನ್ವಯವಾಗುವಷ್ಟರ ಮಟ್ಟಿಗೆ ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಸದರಿ ಅಧಿನಿಯಮಿತಿಯನ್ನು ಈ ಅಧಿನಿಯಮದ ಮೂಲಕ ಪುನಃ ಅಧಿನಿಯಮಿತಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

## ಮೊದಲನೇ ಅನುಸೂಚಿ

**(ಪ್ರಕರಣ 2 (1) ನೋಡಿ)**

**I ರಿಂದ III ಮತ್ತು V ರಿಂದ VIII ಅಧ್ಯಾಯಗಳು ಅನ್ವಯಿಸುವಂಥ ಪ್ರದೇಶಗಳು**

**ಭಾಗ-ಎ**

ಕರ್ನಾಟಕ ಪೌರ ನಿಗಮ ಅಧಿನಿಯಮ, 1976ರ ಅಡಿಯಲ್ಲಿ ರಚಿತವಾದ ನಗರಗಳ ಪರಿಮಿತಿಗಳೊಳಗೆ ಮತ್ತು ಸದರಿ ನಗರಗಳ ಪರಿಮಿತಿಯಿಂದ ಮೂರು ಕಿಲೋಮೀಟರ್ ತ್ರಿಜ್ಯದೊಳಗೆ ಬರುವ ಪ್ರದೇಶಗಳು.

**ಭಾಗ-ಬಿ**

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ರಚಿತವಾದ ಪುರಸಭಾ ಪರಿಷತ್ತುಗಳ ಪರಿಮಿತಿಗಳೊಳಗೆ ಬರುವ ಪ್ರದೇಶಗಳು.

**ಎರಡನೇ ಅನುಸೂಚಿ**

**(ಪ್ರಕರಣ 2 (2) ನೋಡಿ)**

**I ಮತ್ತು IVನೇ ಅಧ್ಯಾಯಗಳು ಅನ್ವಯಿಸುವಂಥ ಪ್ರದೇಶಗಳು**

ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ರ ಅಡಿಯಲ್ಲಿ ರಚಿತವಾದ ನಗರಗಳ ಪರಿಮಿತಿಗಳೊಳಗೆ ಮತ್ತು ಸದರಿ ನಗರಗಳ ಪರಿಮಿತಿಯಿಂದ ಮೂರು ಕಿಲೋಮೀಟರ್ ತ್ರಿಜ್ಯದೊಳಗೆ ಬರುವ ಪ್ರದೇಶಗಳು.

**ಮೂರನೇ ಅನುಸೂಚಿ**

**(ಪ್ರಕರಣ 6 ಮತ್ತು 7 ನೋಡಿ)**

6ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ ಅಥವಾ ಸಂದರ್ಭಾನುಸಾರ 7ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಏರಿಸಬಹುದಾದ ಬಾಡಿಗೆಯನ್ನು ಕೆಳಗೆ ಕೊಟ್ಟಿರುವ ಕೋಷ್ಠಕ 1ರ (2)ನೇ ಕಾಲಂನಲ್ಲಿ ನೀಡಿರುವ ದರಗಳಿಗನುಸಾರವಾಗಿ ಲೆಕ್ಕ ಹಾಕತಕ್ಕದ್ದು. ಇದನ್ನು ವರ್ಷಾವಾರು ಆಧಾರದ ಮೇಲೆ ಲೆಕ್ಕ ಹಾಕುವಾಗ ಯಾವ ಅವಧಿಗೆ ಬಾಡಿಗೆಯನ್ನು ನಿರ್ಧರಿಸಬೇಕೋ ಆ ಅವಧಿಯನ್ನು ಮಾಲೀಕ ಮತ್ತು ಬಾಡಿಗೆದಾರರ ನಡುವೆ ಒಪ್ಪಿಕೊಂಡ ಬಾಡಿಗೆಯ ಸಂದರ್ಭದಲ್ಲಿ ಒಪ್ಪಂದದ ದಿನಾಂಕದಿಂದ, ನಿಗದಿತ ಬಾಡಿಗೆಯ ಸಂದರ್ಭದಲ್ಲಿ ಕಟ್ಟಡದ ನಿರ್ಮಾಣವು ಪ್ರಾರಂಭವಾದ ದಿನಾಂಕದಿಂದ ಲೆಕ್ಕ ಹಾಕಿ, ನೀಡಬೇಕಾದ ಬಾಡಿಗೆಯನ್ನು ನಿರ್ಧರಿಸತಕ್ಕದ್ದು:

ಪರಂತು, ಈ ಅಧಿನಿಯಮದ ಪ್ರಾರಂಭದವರೆಗೂ ಹಾಗೆ ಲೆಕ್ಕ ಹಾಕಲಾದ ಏರಿಸಿದ ಒಟ್ಟು ಮೊತ್ತವನ್ನು ಒಂದು ಆವರಣದ ಸಂಬಂಧದಲ್ಲಿ ಕೋಷ್ಠಕ II ರ (1)ನೇ ಕಾಲಂನಲ್ಲಿ ಸೂಚಿಸಿರುವ ಅದರ ಅಳತೆಯ ಆಧಾರದ ಮೇಲೆ, ಸದರಿ ಕೋಷ್ಠಕದ (2)ನೇ ಕಾಲಂನಲ್ಲಿನ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಿರುವ ಅಂಥ ಶೇಕಡಾ ಪ್ರಮಾಣಕ್ಕೆ ನಿರ್ಬಂಧಿಸತಕ್ಕದ್ದು:

ಮತ್ತೂ ಪರಂತು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಮಾಡಿಕೊಂಡ ಬಾಡಿಗೆದಾರಿಕೆಗೆ ಸಂಬಂಧಿಸಿದ ಹೆಚ್ಚಿಸಿದ ಮೊತ್ತವನ್ನು ಐದು ವರ್ಷಗಳ ಸಮಾನ ಕಂತುಗಳಲ್ಲಿ ಕ್ರಮೇಣ ಹೊಂದಿಸತಕ್ಕದ್ದು.

**ವಿವರಣೆ**.- ಈ ಅಧಿನಿಯಮದ ಪ್ರಾರಂಭದ ನಂತರ ಬಾಡಿಗೆಯ ವಾರ್ಷಿಕ ಏರಿಕೆಯನ್ನು ಲೆಕ್ಕ ಹಾಕಲು, ಈ ಅಧಿನಿಯಮದ ಪ್ರಾರಂಭದಲ್ಲಿ ಇದ್ದ ಬಾಡಿಗೆಯ ಒಟ್ಟು ಏರಿಕೆಯನ್ನು ಐದು ವರ್ಷಗಳ ಅವಧಿಯಲ್ಲಿ ಕ್ರಮೇಣ ಹೊಂದಿಸುವುದರ ಬದಲು ತತ್‌ಕ್ಷಣ ಪರಿಣಾಮಕಾರಿಯಾದಲ್ಲಿ ಒಂದು ವರ್ಷದಲ್ಲಿ ಸಂದಾಯ ಮಾಡಬೇಕಾಗುವ ಬಾಡಿಗೆಯು ಆಧಾರವಾಗಿರತಕ್ಕದ್ದು ಮತ್ತು ಅಂಥ ವಾರ್ಷಿಕ ಬಾಡಿಗೆ ಏರಿಕೆಯ ಜೊತೆ ಸಂದಾಯ ಮಾಡತಕ್ಕದ್ದು.

ಮತ್ತೂ ಪರಂತು, 31ನೇ ಪ್ರಕರಣದಲ್ಲಿ ತಿಳಿಸಿರುವ ಮಾಲೀಕನ ಸಂಬಂಧದಲ್ಲಿ ಆ ಮಾಲೀಕ, ವಿಧವೆ, ಅಂಗವಿಕಲ ಅಥವಾ ಅರವತ್ತೈದು ವರ್ಷಗಳ ಅಥವಾ ಅದಕ್ಕೂ ಹೆಚ್ಚು ವರ್ಷಗಳ ವಯಸ್ಸಿನ ವ್ಯಕ್ತಿಯಾಗಿದ್ದಲ್ಲಿ ಬಾಡಿಗೆ ಏರಿಕೆಯನ್ನು ಐದು ವರ್ಷಗಳ ಪರ್ಯಂತ ಹಂಚತಕ್ಕದ್ದಲ್ಲ. ಆದರೆ ತತ್‌ಕ್ಷಣ ಪರಿಣಾಮಕಾರಿಯಾಗತಕ್ಕದ್ದು.

**ಕೋಷ್ಠಕ - I**

| | ಒಪ್ಪಂದ / ನಿರ್ಮಾಣವು ಪ್ರಾರಂಭವಾದ ದಿನಾಂಕ | ಬಾಡಿಗೆಯ ವಾರ್ಷಿಕ ಏರಿಕೆಯ ದರ |
|---|---|---|
| | (1) | (2) |
| 1. | 1949ರ ಡಿಸೆಂಬರ್ 31ರವರೆಗೆ | ಶೇಕಡಾ ಎರಡು |

| | | |
|---|---|---|
| 2. | 1950ರ ಜನವರಿ 1 ರಂದು ಮತ್ತು ಅಂದಿನಿಂದ 1960ರ ಡಿಸೆಂಬರ್ 31 ರವರೆಗೆ | ಶೇಕಡಾ ನಾಲ್ಕು" |
| 3. | 1961ರ ಜನವರಿ 1 ರಂದು ಮತ್ತು ಅಂದಿನಿಂದ 1970ರ ಡಿಸೆಂಬರ್ 31 ರವರೆಗೆ | ಶೇಕಡಾ ಆರು |
| 4. | 1971ರ ಜನವರಿ 1ರಂದು ಮತ್ತು ಅಂದಿನಿಂದ 1994ರ ಡಿಸೆಂಬರ್ 31ರವರೆಗೆ | ಶೇಕಡಾ ಎಂಟು |
| 5. | 1995ರ ಜನವರಿ 1 ರಂದು ಮತ್ತು ಆ ನಂತರ ವಾರ್ಷಿಕ ಬೆಲೆ | ಸಗಟು ಬೆಲೆ ಸೂಚ್ಯಂಕದ ಮೇಲೆ ಆಧಾರಿತವಾದ ಏರಿಕೆಯ ದರದ ಶೇಕಡಾ ಎಪ್ಪತ್ತೈದು |

## ಕೋಷ್ಠಕ - II

| ಆವರಣದ ಅಳತೆ (ಕಟ್ಟಲಾಗಿರುವ ವಿಸ್ತೀರ್ಣ) | ಗರಿಷ್ಠವಾಗಿ ಅನುಮತಿಸಲಾಗಿರುವ ಬಾಡಿಗೆಯ ಏರಿಕೆ |
|---|---|
| (1) | (2) |
| 1. 50 ಚದರ ಮೀಟರುವರೆಗೆ | ಶೇಕಡಾ ಇಪ್ಪತ್ತೈದು |
| 2. 50 ಚದರ ಮೀಟರಿಗಿಂತ ಹೆಚ್ಚಿನ, ಆದರೆ 90 ಚದರ ಮೀಟರ್‌ವರೆಗೆ | ಶೇಕಡಾ ಐವತ್ತು |
| 3. 90 ಚದರ ಮೀಟರಿಗಿಂತ ಹೆಚ್ಚಿನ ಆದರೆ 160 ಚದರ ಮೀಟರ್‌ವರೆಗೆ | ಶೇಕಡಾ ಎಪ್ಪತ್ತೈದು |
| 4. 160 ಚದರ ಮೀಟರಿಗಿಂತ ಹೆಚ್ಚು | ಶೇಕಡಾ ನೂರು |

## ನಾಲ್ಕನೇ ಅನುಸೂಚಿ

**(8ನೇ ಪ್ರಕರಣ ನೋಡಿ)**

1. ಹವಾ ನಿಯಂತ್ರಣ
2. ಎಲೆಕ್ಟ್ರಿಕಲ್ ಹೀಟರ್
3. ವಾಟರ್ ಕೂಲರ್
4. ಗೀಜರ್
5. ರೆಫ್ರಿಜರೇಟರ್
6. ಕುಕಿಂಗ್ ರೇಂಜ್
7. ಪೀಠೋಪಕರಣ

೮. ಬಾಡಿಗೆದಾರನು ಮಾತ್ರವೇ ಸಂಪೂರ್ಣವಾಗಿ ಬಳಸಬಹುದಾದ ಕೈತೋಟ

೯. ಬಾಡಿಗೆದಾರನು ಮಾತ್ರವೇ ಸಂಪೂರ್ಣವಾಗಿ ಬಳಸಬಹುದಾದ ಆಟದ ಮೈದಾನ

೧೦. ಸನ್-ಬ್ರೋಕರ್ಸ್

೧೧. ಬಾಡಿಗೆದಾರನು ಅನುಭೋಗಿಸುತ್ತಿರುವ ಫಲಾನುಭವದ ಹಕ್ಕು ಯಾವುವಾದರೂ ಇದ್ದಲ್ಲಿಅವು

**ಐದನೇ ಅನುಸೂಚಿ**

**(47 ಮತ್ತು 48ನೇ ಪ್ರಕರಣ ನೋಡಿ)**

ಎ. ಮಾಲೀಕನು ಮಾಡಬೇಕಾಗಿರುವ ಕಟ್ಟಡ ರಚನೆಗೆ ಸಂಬಂಧಪಟ್ಟ ದುರಸ್ತಿಗಳು.

(1) ಬಾಡಿಗೆದಾರನು ಹಾನಿಯುಂಟು ಮಾಡಿದುದರಿಂದ ಅವಶ್ಯಕವಾದ ದುರಸ್ತಿಯನ್ನು ಹೊರತುಪಡಿಸಿ ಕಟ್ಟಡ ರಚನೆಗೆ ಸಂಬಂಧಪಟ್ಟ ದುರಸ್ತಿಗಳು.

(2) ಮೂರು ವರ್ಷಕ್ಕೊಂದು ಬಾರಿ ಗೋಡೆಗಳಿಗೆ ಸುಣ್ಣ ಬಳಸುವುದು ಮತ್ತು ಬಾಗಿಲುಗಳು ಮತ್ತು ಕಿಟಕಿಗಳಿಗೆ ಬಣ್ಣ ಮಾಡಿಸುವುದು.

(3) ಅವಶ್ಯಕತೆ ಇರುವಾಗಲೆಲ್ಲ ಕೊಳಾಯಿಗಳ ಪೈಪ್‌ಗಳನ್ನು ಬದಲಾಯಿಸುವುದು.

(4) ಒಳಗಿನ ಮತ್ತು ಹೊರಗಿನ ವಯರಿಂಗ್ ಮಾಡುವುದು ಮತ್ತು ಅದಕ್ಕೆ ಸಂಬಂಧಪಟ್ಟ ನಿರ್ವಹಣೆ.

ಬಿ. ಬಾಡಿಗೆದಾರನು ಆಗಾಗ್ಗೆ ಮಾಡಿಸಬೇಕಾದ ದಿನನಿತ್ಯದ ದುರಸ್ತಿಗಳು

(1) ಕೊಳಾಯಿ ವಾಷರ್ ಗಳು ಮತ್ತು ಕೊಳಾಯಿಗಳನ್ನು ಬದಲಾಯಿಸುವುದು.

(2) ಒಳಚರಂಡಿಗಳನ್ನು ಸ್ವಚ್ಛಗೊಳಿಸುವುದು.

(3) ಶೌಚಾಗಾರದ ನೀರು ಹರಿಯುವುದಕ್ಕೆ ಸಂಬಂಧಪಟ್ಟ ದುರಸ್ತಿಗಳು.

(4) ವಾಷ್ ಶೌಚಾಗಾರದ ದುರಸ್ತಿಗಳು.

(5) ಸ್ನಾನದ ತೊಟ್ಟಿಯ ದುರಸ್ತಿಗಳು.

(6) ಗೀಜರ್ ದುರಸ್ತಿಗಳು.

(7) ಸರ್ಕ್ಯೂಟ್ ಬ್ರೇಕರ್ಸ್‌ಗಳ ದುರಸ್ತಿಗಳು.

(8) ಸ್ವಿಚ್‌ಗಳು ಮತ್ತು ಸಾಕೆಟ್‌ಗಳ ದುರಸ್ತಿಗಳು.

(9) ಒಳಗಿನ ಮತ್ತು ಹೊರಗಿನ ಪ್ರಮುಖ ವಯರಿಂಗ್‌ಗಳ ಬದಲಾವಣೆಗಳನ್ನು ಹೊರತುಪಡಿಸಿ ಉಳಿದ ವಿದ್ಯುತ್ ಉಪಕರಣಗಳ ದುರಸ್ತಿಗಳು ಮತ್ತು ಬದಲಾವಣೆಗಳು.

(10) ಅಡಿಗೆ ಮನೆಯ ಜೋಡಣೆ ಸಲಕರಣೆಗಳ ದುರಸ್ತಿಗಳು.

(11) ಬಾಗಿಲುಗಳ, ಕಬೋರ್ಡ್‌ಗಳ, ಕಿಟಕಿ ಮುಂತಾದವುಗಳ ನಾಬ್‌ಗಳು ಮತ್ತು ಲಾಕ್‌ಗಳನ್ನು ಬದಲಾಯಿಸುವುದು.

(12) ಫ್ಲೈನೆಟ್ಟುಗಳನ್ನು ಬದಲಾಯಿಸುವುದು.

(13) ಕಿಟಕಿಗಳು, ಬಾಗಿಲುಗಳು ಮುಂತಾದವುಗಳಲ್ಲಿನ ಗ್ಲಾಸ್ ಪ್ಯಾನೆಲ್‌ಗಳನ್ನು ಬದಲಾಯಿಸುವುದು.

(14) ಬಾಡಿಗೆದಾರನಿಗೆ ಬಾಡಿಗೆಗೆ ನೀಡಲಾದ ಕೈತೋಟಗಳು ಮತ್ತು ಖಾಲಿ ಜಾಗಗಳ ನಿರ್ವಹಣೆ.

* * *

## 2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 07

(2026ರ ಜನವರಿ ತಿಂಗಳ 8ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಬಾಡಿಗೆ (ತಿದ್ದುಪಡಿ) ಅಧಿನಿಯಮ, 2025

(2025ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಬಾಡಿಗೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ**.**

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬದುಕುವುದು ಮತ್ತು ವ್ಯವಹಾರ ನಡೆಸುವುದನ್ನು ಸರಾಗಗೊಳಿಸಲು ನಂಬಿಕೆ-ಆಧಾರಿತ ಆಡಳಿತವನ್ನು ಮತ್ತಷ್ಟು ವೃದ್ಧಿಸುವುದಕ್ಕಾಗಿ ಅಪರಾಧಗಳನ್ನು ನಿರಪರಾಧೀಕರಿಸಲು ಮತ್ತು ತರ್ಕಬದ್ಧಗೊಳಿಸಲು, ಕರ್ನಾಟಕ ಬಾಡಿಗೆ ಅಧಿನಿಯಮ, 1999 (2001ರ ಕರ್ನಾಟಕ ಅಧಿನಿಯಮ 34)ನ್ನು, ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಬಾಡಿಗೆ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 24ರ ತಿದ್ದುಪಡಿ.-** ಕರ್ನಾಟಕ ಬಾಡಿಗೆ ಅಧಿನಿಯಮ, 1999 (2001ರ ಕರ್ನಾಟಕ ಅಧಿನಿಯಮ 34)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 24ನೇ ಪ್ರಕರಣದ, (1)ನೇ ಉಪಪ್ರಕರಣದ ತರುವಾಯ, ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:-

"(1-ಎ) 54ನೇ ಪ್ರಕರಣದಡಿ ಉಪಬಂಧಿಸಲಾದಂತೆ, ನಿಯಂತ್ರಣಾಧಿಕಾರಿಯು ದಂಡಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ನ್ಯಾಯ ನಿರ್ಣಯ ಅಧಿಕಾರಿಯ ಅಧಿಕಾರಗಳನ್ನು ಹೊಂದಿರತಕ್ಕದ್ದು."

**3**. **ಪ್ರಕರಣ 53ನ್ನು ಬಿಟ್ಟುಬಿಡುವುದು**.- ಮೂಲ ಅಧಿನಿಯಮದ 53ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**4. ಪ್ರಕರಣ 54ರ ತಿದ್ದುಪಡಿ.-** ಮೂಲ ಅಧಿನಿಯಮದ 54ನೇ ಪ್ರಕರಣದಲ್ಲಿ,-

(i) ಪ್ರಸ್ತುತವಿರುವ ಉಪಬಂಧಕ್ಕೆ (1)ನೇ ಉಪಪ್ರಕರಣವೆಂಬ ಸಂಖ್ಯೆಯನ್ನು ನೀಡತಕ್ಕದ್ದು;

(ii) ಹಾಗೇ ಸಂಖ್ಯೆ ನೀಡಲಾದ, 1ನೇ ಉಪಪ್ರಕರಣದ ತರುವಾಯ ,-

(ಎ) ಖಂಡ (i)ರಲ್ಲಿ, "ಅವನು ದೋಷಸಿದ್ಧಿಯ ನಂತರ ಎರಡು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಒಪ್ಪಂದದ ಪ್ರತಿಯನ್ನು ಸಲ್ಲಿಸುವವರೆಗೆ ಅಥವಾ ಸಂದರ್ಭಾನುಸಾರ ವಿವರಗಳನ್ನು ಒದಗಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಐದು ನೂರು ರೂ.ಗಳ ಜುಲ್ಮಾನೆಗೆ ಬದ್ಧನಾಗಿರತಕ್ಕದ್ದು." ಎಂಬ ಪದಗಳ ಬದಲಾಗಿ **"**ಅವನು ಎರಡು ಸಾವಿರ ರೂಪಾಯಿಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ಒಪ್ಪಂದದ ಪ್ರತಿಯನ್ನು ಸಲ್ಲಿಸುವವರೆಗೆ ಅಥವಾ ಸಂದರ್ಭಾನುಸಾರ ವಿವರಗಳನ್ನು ಒದಗಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಐದು ಸಾವಿರ ರೂ.ಗಳ ಹೆಚ್ಚುವರಿ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.**"**

**(**ಬಿ**)** ಖಂಡ (ii)ರಲ್ಲಿ**,** ಅವನು ದೋಷಸಿದ್ಧಿಯ ನಂತರ ಕ್ಲೇಮು ಮಾಡಿದ ಅಥವಾ ಸ್ವೀಕರಿಸಿದ ಕಾನೂನು ಬಾಹಿರ ವೆಚ್ಚಗಳಿಂದ ಎರಡು ಸಾವಿರದ ಐದು ನೂರು ರೂ.ಗಳನ್ನು ಮೀರಿದ ಮೊತ್ತದವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯ ವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯತನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ " ಅವನು ಕ್ಲೇಮು ಮಾಡಿದ ಅಥವಾ ಸ್ವೀಕರಿಸಿದ ಕಾನೂನು ಬಾಹಿರ ವೆಚ್ಚಗಳಿಂದ ಇಪ್ಪತ್ತು ಸಾವಿರ ರೂ.ಗಳನ್ನು ಮೀರಿದ ಮೊತ್ತದವರೆಗೆ ವಿಸ್ತರಿಸಬಹುದಾದಂಥ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು." ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು**.**

**(**ಸಿ**)** ಖಂಡ (iii)ರಲ್ಲಿ**,-**

**(**ಎ**)** ಉಪಖಂಡ **(**ಎ**)**ರಲ್ಲಿ**,** "ದೋಷ ಸಿದ್ಧಿಯ ನಂತರ ಎರಡು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಅವನು ಅದನ್ನು ಪಾಲಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಎರಡು ನೂರು ರೂ**.**ಗಳ ಜುಲ್ಮಾನೆಗೆ ಸಹ ಬದ್ಧನಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಎರಡು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ಅವನು ಅದನ್ನು ಪಾಲಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಇಪ್ಪತ್ತು ಸಾವಿರ ರೂ.ಗಳ ಜುಲ್ಮಾನೆಗೂ ಸಹ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು**;**

**(**ಬಿ**)** ಉಪಖಂಡ **(**ಬಿ**)**ರಲ್ಲಿ**,** "ದೋಷ ಸಿದ್ಧಿಯ ನಂತರ ಒಂದು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ವಿವರಣಪತ್ರವನ್ನು ಸಲ್ಲಿಸುವವರೆಗೂ ಪ್ರತಿ ದಿನಕ್ಕೆ ಎರಡು ನೂರು ರೂ.ಗಳ ಜುಲ್ಮಾನೆಗೆ ಸಹ ಬದ್ಧನಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಒಂದು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ವಿವರಣಪತ್ರವನ್ನು ಸಲ್ಲಿಸುವವರೆಗೂ ಪ್ರತಿ ದಿನಕ್ಕೆ ಎರಡು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು**;** ಮತ್ತು

**(ಸಿ)** ಉಪಖಂಡ **(ಸಿ)**ರಲ್ಲಿ, "ದೋಷಸಿದ್ಧಿಯ ನಂತರ ಎರಡು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ವಿವರಪಟ್ಟಿಕೆಯನ್ನು ಸಲ್ಲಿಸುವವರೆಗೂ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಎರಡು ನೂರು ರೂ.ಗಳ ಜುಲ್ಮಾನೆಗೆ ಸಹ ಬದ್ಧನಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಎರಡು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ವಿವರಪಟ್ಟಿಕೆಯನ್ನು ಸಲ್ಲಿಸುವವರೆಗೂ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೆ ಎರಡು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು", ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**(ಡಿ)** ಖಂಡ (iv)ರಲ್ಲಿ "ಅವನು ಐದು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ " ಎಂಬ ಪದಗಳ ಬದಲಾಗಿ "ಅವನು ಐವತ್ತು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**(ಇ)** ಖಂಡ (v)ರಲ್ಲಿ, "ದೋಷ ಸಿದ್ಧಿಯ ನಂತರ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅದನ್ನು ಮರು ಬಾಡಿಗೆಗೆ ಕೊಟ್ಟ ಸಂದರ್ಭದಲ್ಲಿ ಮೂರು ತಿಂಗಳ ಅವಧಿಗೆ ಸ್ವೀಕರಿಸಬಹುದಾದ ಬಾಡಿಗೆಯ ಎರಡರಷ್ಟು ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತದ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಇವರೆಡರಿಂದಲೂ ದಂಡನೀಯನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ಅಥವಾ ಅದನ್ನು ಮರು ಬಾಡಿಗೆಗೆ ಕೊಟ್ಟ ಸಂದರ್ಭದಲ್ಲಿ ಮೂರು ತಿಂಗಳ ಅವಧಿಗೆ ಸ್ವೀಕರಿಸಬಹುದಾದ ಬಾಡಿಗೆಯ ಎರಡರಷ್ಟು ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತಕ್ಕೆ ಹೊಣೆಗಾರನಾಗಿರತಕ್ಕದ್ದು", ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**(ಎಫ್)** ಖಂಡ (vi)ರಲ್ಲಿ, "ದೋಷ ಸಿದ್ಧಿಯ ನಂತರ ಅವನು ಮೂರು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಮೂವತ್ತು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**(ಜಿ)** ಖಂಡ (vii)ರಲ್ಲಿ, "ದೋಷ ಸಿದ್ಧಿಯ ನಂತರ ಅವನು ಐದು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ಮೊತ್ತದ ಅಥವಾ ಮರು ಬಾಡಿಗೆಗೆ ಕೊಟ್ಟ ನಂತರ ಮಾಲೀಕನು ಸ್ವೀಕರಿಸುವ ಬಾಡಿಗೆಯ ಎರಡರಷ್ಟು ಮೊತ್ತ, ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತದ ಜುಲ್ಮಾನೆಯಿಂದ ಅಥವಾ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಐವತ್ತು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ಮೊತ್ತದ ಅಥವಾ ಮರು ಬಾಡಿಗೆಗೆ ಕೊಟ್ಟ ನಂತರ ಮಾಲೀಕನು ಸ್ವೀಕರಿಸುವ ಬಾಡಿಗೆಯ ಎರಡರಷ್ಟು ಮೊತ್ತ, ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತದ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**(ಎಚ್)** ಖಂಡ (ix)ರಲ್ಲಿ**,** " ಅಥವಾ ಒಂದು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ನಿಲ್ಲಿಸಿಬಿಟ್ಟ ಅಥವಾ ತಡೆಹಿಡಿದ ದಿನಾಂಕದಿಂದ ಪ್ರಾರಂಭವಾಗಿ ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ಪುನಃ ನೀಡುವವರೆಗಿನ ಅವಧಿಯವರೆಗೂ ಅಪರಾಧವು ಮುಂದುವರೆಯುವ ಪ್ರತಿದಿನಕ್ಕೆ ಒಂದು ನೂರು ರೂ.ಗಳ ಜುಲ್ಮಾನೆಗೆ ಸಹ ಬದ್ಧನಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಮತ್ತು ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ನಿಲ್ಲಿಸಿಬಿಟ್ಟ ಅಥವಾ ತಡೆಹಿಡಿದ ದಿನಾಂಕದಿಂದ ಪ್ರಾರಂಭವಾಗಿ ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ಪುನಃ ನೀಡುವವರೆಗಿನ ಅವಧಿಯವರೆಗೂ ಅಪರಾಧವು ಮುಂದುವರೆಯುವ ಪ್ರತಿದಿನಕ್ಕೆ ಒಂದು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು**;** ಮತ್ತು

**(ಐ)** ಖಂಡ (x)ರಲ್ಲಿ**,** "ಒಂದು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಇವೆರಡರಿಂದಲೂ" ಎಂಬ ಪದಗಳಿಗೆ ಬದಲಾಗಿ "ಹತ್ತು ಸಾವಿರ ರೂ**.**ಗಳವರೆಗಿನ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು**.**

(iii) ಹಾಗೆ ಮರುಸಂಖ್ಯೆ ನೀಡಿದ ಮತ್ತು ತಿದ್ದುಪಡಿ ಮಾಡಲಾದ (1)ನೇ ಉಪಪ್ರಕರಣದ ತರುವಾಯ**,** ಮುಂದಿನ ಹೊಸ ಉಪ**-**ಪ್ರಕರಣವನ್ನು ಸೇರಿಸತಕ್ಕದ್ದು**,** ಎಂದರೆ**:-**

"(2) ಉಪಪ್ರಕರಣ (1)ರಡಿ ಉಪಬಂಧಿಸಲಾದ ದಂಡಗಳನ್ನು ಕರ್ನಾಟಕ ಬಾಡಿಗೆ **(**ತಿದ್ದುಪಡಿ**)** ಅಧಿನಿಯಮ**,** 2025ರ ಪ್ರಾರಂಭದ ದಿನಾಂಕದಿಂದ ಪ್ರತಿ ಮೂರು ವರ್ಷಗಳ ಅವಧಿ ಮುಗಿದ ತರುವಾಯ**,** ನಿಯಮಿಸಬಹುದಾದಂಥ ವಿಧಾನದಲ್ಲಿ ದಂಡದ ಕನಿಷ್ಠ ಮೊತ್ತದ ಶೇಕಡ ಹತ್ತರಷ್ಟಕ್ಕೆ ಹೆಚ್ಚಿಸತಕ್ಕದ್ದು**.**"

**5. ಪ್ರಕರಣ 55ರ ತಿದ್ದುಪಡಿ.-** ಮೂಲ ಅಧಿನಿಯಮದ **55**ನೇ ಪ್ರಕರಣದಲ್ಲಿ**,-**

(i) ಶೀರ್ಷಿಕೆಯಲ್ಲಿನ "ಅಪರಾಧಗಳು" ಎಂಬ ಪದಕ್ಕೆ ಬದಲಾಗಿ "ಉಲ್ಲಂಘನೆಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು**;**

(ii) ಉಪಪ್ರಕರಣ (1)ರಲ್ಲಿ**,**

**(**ಎ**)** "ಅಪರಾಧವನ್ನು" ಎಂಬ ಪದಕ್ಕೆ ಬದಲಾಗಿ "ಉಲ್ಲಂಘನೆಯನ್ನು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು**;** ಮತ್ತು

**(**ಬಿ**)** "ಆ ಅಪರಾಧವು ನಡೆದ" ಎಂಬ ಪದಕ್ಕೆ ಬದಲಾಗಿ "ಅಂಥ ಉಲ್ಲಂಘನೆ ನಡೆದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು**;** ಮತ್ತು

**(**ಸಿ**)** ಪ್ರಸ್ತುತ ಪರಂತುಕಕ್ಕೆ ಬದಲಾಗಿ**,** ಮುಂದಿನದನ್ನು ಪ್ರತಿಯೋಜಿಸತಕ್ಕದ್ದು**,** ಎಂದರೆ**:-**

"ಪರಂತು**,** ಈ ಉಪಪ್ರಕರಣದಲ್ಲಿ ಇರುವುದಾವುದೂ**,** ಆ ಉಲ್ಲಂಘನೆಯು ತನ್ನ ಅರಿವಿಗೆ ಬಾರದಂತೆ ನಡೆಯಿತೆಂದು ಅಥವಾ ಅಂಥ ಉಲ್ಲಂಘನೆ ನಡೆಯುವುದನ್ನು ತಡೆಗಟ್ಟಲು

ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಅವನು ರುಜುವಾತು ಪಡಿಸಿದರೆ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದಲ್ಲ.

(iii) ವಿವರಣೆಯನ್ನು ಹೊರತುಪಡಿಸಿ (2)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಉಲ್ಲಂಘನೆಗಳು ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಆ ಉಲ್ಲಂಘನೆಗಳು ಅವನ ಯಾವುದೇ ನಿರ್ಲಕ್ಷದಿಂದಾಗಿ ಸಂಭವಿಸಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಅಂಥ ಕೃತ್ಯಕ್ಕೆ ಹೊಣೆಗಾರನೆಂದು ಭಾವಿಸತಕ್ಕದ್ದು ಮತ್ತು ದಂಡವನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**

ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.